ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 18 ಬುಧವಾರ 2023

ಸಂಪುಟ: 44 | ಸಂಚಿಕೆ: 183 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.co

₹4

ರಾಜ್ಯದ ಆಡಳಿತದಲ್ಲಿ ಕನ್ನಡಕ್ಕೆ ಆದ್ಯತೆ

● ಸಚಿವರು, ಅಧಿಕಾರಿಗಳು ಕಡತಗಳಲ್ಲಿ ಇಂಗ್ಲಿಷ್ ಟಿಪ್ಪಣಿ ಹಾಕುವುದನ್ನು ನಿಲ್ಲಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ● ಕರ್ನಾಟಕ ಸಂಭ್ರಮ–50 ಲಾಂಛನ ಬಿಡುಗಡೆ ● ನ.1ರಿಂದ ಒಂದು ವರ್ಷ ಕಾಲ ಕನ್ನಡ ಸಂಭ್ರಮಾಚರಣೆ
● ರಾಜ್ಯದಲ್ಲಿರುವ ಹೊರರಾಜ್ಯದವರಿಗೆ ಕನ್ನಡ ಕಲಿಸುವ ಬದಲು ನಾವೇ ಅವರ ಭಾಷೆ ಕಲಿಯುತ್ತಿದ್ದೇವೆ: ವಿಷಾದ



ಬೆಂಗಳೂರು, ಅ.17(ಕೆಎಂಶಿ)– ಆಡಳಿತದಲ್ಲಿ ಕನ್ನಡಕ್ಕೆ ಆದ್ಯತೆ ನೀಡಬೇಕು ಎಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರು ಮತ್ತು ಅಧಿಕಾರಿಗಳು ಕಡತಗಳಲ್ಲಿ ಇಂಗ್ಲಿಷ್ ಟಿಪ್ಪಣಿ ಮಾಡುವುದನ್ನು ನಿಲ್ಲಿಸಿ ಎಂದು ಸೂಚಿಸಿದ್ದಾರೆ.

ಕೇಂದ್ರ ಮತ್ತು ಹೊರ ರಾಜ್ಯಗಳಿಗೆ ಪತ್ರ ವ್ಯವಹಾರ ಮಾಡುವಾಗ ಮಾತ್ರ ಇಂಗ್ಲಿಷ್ ಟಿಪ್ಪಣಿ ಬಳಸಿ. ರಾಜ್ಯದೊಳಗಿನ ವ್ಯವಹಾರದಲ್ಲಿ ಕನ್ನಡಕ್ಕೆ ಆದ್ಯತೆ ನೀಡಿ ಎಂದು ಅವರು ಕಿವಿಮಾತು ಹೇಳಿದ್ದಾರೆ.

ನಾವು ಯಾವುದೇ ಭಾಷೆಯ ವಿರೋಧಿ ಅಲ್ಲ. ಎಲ್ಲವನ್ನೂ ಗೌರವಿಸೋಣ. ಜೊತೆ ಜೊತೆಯಲ್ಲೇ ನಮ್ಮ ಕನ್ನಡ ಭಾಷೆಗೆ ಅಗ್ರಸ್ಥಾನ ಕಲ್ಪಿಸಬೇಕಾಗಿರುವುದು ನಮ್ಮೆಲ್ಲರ ಜವಾಬ್ದಾರಿ ಎಂದರು. ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಆಯೋಜಿಸಿದ್ದ ಕರ್ನಾಟಕ ಸಂಭ್ರಮ 50–ರ ಲಾಂಛನವನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು, ಕರ್ನಾಟಕದಲ್ಲಿ ಕನ್ನಡವನ್ನು ಮಾತನಾಡುವಂತಹ ವಾತಾವರಣ, ಕನ್ನಡದ ಅನಿವಾರ್ಯತೆಯನ್ನು ಸೃಷ್ಟಿಸುವ ಅಗತ್ಯವಿದೆ ಎಂದು ತಿಳಿಸಿದರು. ನಾವೆಲ್ಲರೂ ಕನ್ನಡಿಗರು, ಕರ್ನಾಟಕದ ಏಕೀಕರಣವಾದಾಗಿನಿಂದ ವಿವಿಧ ಭಾಷೆಗಳನ್ನು ಮಾತನಾಡುವ ಜನರು ಕನ್ನಡ ನಾಡಿನಲ್ಲಿ ನೆಲೆಸಿದ್ದಾರೆ. ಈ ನಾಡಿನಲ್ಲಿ ವಾಸಿಸುವ ಪ್ರತಿಯೊಬ್ಬರೂ ಕೂಡ ಕನ್ನಡ ಭಾಷೆ ಮಾತನಾಡುವುದನ್ನು ಕಲಿಯಬೇಕು.

ತಮಿಳುನಾಡು, ಕೇರಳ, ತೆಲಂಗಾಣ, ಉತ್ತರಪ್ರದೇಶ ರಾಜ್ಯಗಳಲ್ಲಿ ಅಲ್ಲಿನ ಭಾಷೆ ಕಲಿಯದೇ ಕನ್ನಡ ಮಾತನಾಡಿಕೊಂಡು ಬದುಕಲು ಸಾಧ್ಯವಿಲ್ಲ. ಆದರೆ ಕರ್ನಾಟಕದಲ್ಲಿ ಕನ್ನಡ ಬಾರದೇ ಇದ್ದರೂ ಬದುಕಬಹುದು. ಇದೇ ನಮ್ಮ ರಾಜ್ಯಕ್ಕೂ ಹಾಗೂ ಪಕ್ಕದ ರಾಜ್ಯಗಳಿಗೂ ಇರುವ ವ್ಯತ್ಯಾಸ ಎಂದರು. ಕರ್ನಾಟಕದ ಏಕೀಕರಣವಾಗಿ 68 ವರ್ಷಗಳು ಕಳೆದರೂ ರಾಜ್ಯದಲ್ಲಿ ಕನ್ನಡದ ವಾತಾವರಣವನ್ನು ನಿರ್ಮಿಸಲು ಸಾಧ್ಯವಾಗದಿರುವುದು ಸರಿಯಲ್ಲ. ಕನ್ನಡಿಗರು ನಮ್ಮ ಭಾಷೆಯನ್ನು ಬೇರೆಯವರಿಗೆ ಕಲಿಸುವ ಬದಲು, ಅವರ ಭಾಷೆಯನ್ನೇ ನಾವು ಮೊದಲು ಕಲಿಯುತ್ತಿದ್ದೇವೆ.

ಕನ್ನಡಿಗರ ಈ ವರ್ತನೆ ಭಾಷಾ ಬೆಳವಣಿಗೆ ಹಾಗೂ ನಾಡು, ನುಡಿ, ಸಂಸ್ಕೃತಿ ಅಭಿವೃದ್ಧಿಯ ದೃಷ್ಟಿಯಿಂದ ಒಳ್ಳೆಯದಲ್ಲ. ರಾಜ್ಯದ ಕೆಲವು ಭಾಗಗಳಲ್ಲಿ ಪರಭಾಷಿಗರು ಕನ್ನಡವನ್ನು ಮಾತನಾಡುವುದೇ ಇಲ್ಲ. ಕನ್ನಡಿಗರು ಅಭಿಮಾನ ಶೂನ್ಯರಲ್ಲ. ಆದರೆ ಹೆಚ್ಚಿನ ಉದಾರತೆಯಿಂದಾಗಿ ಈ ರೀತಿ ಆಗಿದೆ. ಬೇರೆ ಭಾಷಿಗರನ್ನು, ಧರ್ಮದವರನ್ನೂ ಪ್ರೀತಿಸಬೇಕು ಆದರೆ ನಮ್ಮ ಭಾಷೆಯನ್ನು ಮರೆಯಬಾರದು ಎಂದು ಕಿವಿಮಾತು ಹೇಳಿದರು. ನಮ್ಮಲ್ಲಿ ಇಂಗ್ಲಿಷ್ ವ್ಯಾಮೋಹವೂ ಹೆಚ್ಚಾಗಿದೆ. ಬಹಳ ವರ್ಷಗಳಿಂದ ಕನ್ನಡ ಆಡಳಿತ ಭಾಷೆಯಾಗಿದ್ದರೂ ಕೂಡ, ಇದು ಪಾಲನೆಯಾಗದಿರುವುದಕ್ಕೆ ನಿರ್ಲಕ್ಷ್ಯವೂ ಕಾರಣವಿರಬಹುದು. ಈ ಪರಿಸ್ಥಿತಿ ಸುಧಾರಿಸಬೇಕು. 1983ರಲ್ಲಿ ಕನ್ನಡ ಭಾಷಾ ಕಾವಲು ಸಮಿತಿಯ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. 2023 ನವೆಂಬರ್ 1ರಿಂದ ಒಂದು ವರ್ಷ ಕರ್ನಾಟಕ ಸಂಭ್ರಮವನ್ನು ಆಚರಿಸುವ ಮೂಲಕ, ಜನರಲ್ಲಿ ಕನ್ನಡ ಭಾಷಾ ಜಾಗೃತಿಯನ್ನು ಮೂಡಿಸಲಿದೆ ಎಂದು ತಿಳಿಸಿದರು.

ಕರ್ನಾಟಕ ಏಕೀಕರಣವಾಗಿದ್ದು 1956 ನವೆಂಬರ್ 1ರಂದು. ಕರ್ನಾಟಕ ಏಕೀಕರಣಕ್ಕೂ ಮುನ್ನ ಅನೇಕ ರಾಜ್ಯಗಳಲ್ಲಿ ಕನ್ನಡ ನಾಡು ಹರಿದು ಹಂಚಿಹೋಗಿತ್ತು. ಭಾಷಾವಾರು ಪ್ರಾಂತ್ಯ ವಿಂಗಡಣೆ ಘೋಷಣೆಯಾದ ಮೇಲೆ ಕರ್ನಾಟಕ ಏಕೀಕರಣವಾಗಬೇಕೆಂದು ಆಲೂರು ವೆಂಕಟರಾಯರ ನೇತೃತ್ವದಲ್ಲಿ ಅನೇಕರು ▶ 9ನೇ ಪುಟಕ್ಕೆ

ಸಾವಿರಾರು ಭಕ್ತರ ಪ್ರಾರ್ಥನೆ, ಹರ್ಷೋದ್ಗಾರದ ನಡುವೆ
ಕಾವೇರಿ ತೀರ್ಥೋದ್ಭವ


(ಸಂಗ್ರಹ ಚಿತ್ರ)

ಮಡಿಕೇರಿ,ಅ.17– ದಕ್ಷಿಣ ಭಾರತದ ಪುಣ್ಯ ಕ್ಷೇತ್ರ, ಕೊಡಗಿನ ಕಾವೇರಿ ಸನ್ನಿಧಿ ತಲಕಾವೇರಿಯಲ್ಲಿ ಮಂಗಳವಾರ ಸರಿ ರಾತ್ರಿ ಸಾವಿರಾರು ಭಕ್ತರ ಪ್ರಾರ್ಥನೆ, ಹರ್ಷೋದ್ಗಾರದ ನಡುವೆ ತೀರ್ಥ ಕುಂಡಿಕೆಯಲ್ಲಿ ತೀರ್ಥರೂಪಿಣಿಯಾಗಿ ಕಾವೇರಿ ಮಾತೆ ದರ್ಶನ ನೀಡಿದಳು.

ಸರಿ ರಾತ್ರಿ 1 ಗಂಟೆ 27 ನಿಮಿಷಕ್ಕೆ ಸಲ್ಲುವ ಕರ್ಕಾಟಕ ಲಗ್ನದಲ್ಲಿ ತೀರ್ಥ ರೂಪಿಣಿಯಾಗಿ ಹೊಮ್ಮಿದಳು. ಈ ಕ್ಷಣಕ್ಕೆ ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು, ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಹಾಗೂ ಶಾಸಕ ಎ.ಎಸ್.ಪೊನ್ನಣ್ಣ, ಶಾಸಕ ಡಾ.ಮಂಥರ್ ಗೌಡ, ಸಂಸದ ಪ್ರತಾಪ್ ಸಿಂಹ, ವಿಧಾನಪರಿಷತ್ ಸದಸ್ಯರಾದ ಎಂ.ಪಿ.ಸುಜಾ ಕುಶಾಲಪ್ಪ, ಎಸ್.ಎಲ್.ಭೋಜೇಗೌಡ, ಭಾಗಮಂಡಲ ಗ್ರಾಪಂ ಅಧ್ಯಕ್ಷ ಎ.ಕಾಳನ ರವಿ ಇತರರು ಸಾಕ್ಷಿಯಾದರು. ಪ್ರಧಾನ ಅರ್ಚಕ ಗುರುರಾಜ ಆಚಾರ್ ನೇತೃತ್ವದಲ್ಲಿ ಮಂತ್ರ ಘೋಷಗಳು, ಕುಂಕುಮಾರ್ಚನೆ, ಪುಷ್ಪಾರ್ಚನೆ ಸೇರಿದಂತೆ ವಿಶೇಷ ಪೂಜಾ ಕಾರ್ಯಗಳು ನಡೆಯಿತು. ಈ ವೇಳೆ ಕಾವೇರಿ ಮಾತೆಗೆ ಪ್ರಾರ್ಥನೆ ಘೋಷಣೆಗಳು ಮುಗಿಲು ಮುಟ್ಟಿದವು.

ರಾಜ್ಯ ಮತ್ತು ಹೊರ ರಾಜ್ಯದ ನಾನಾ ಭಾಗದಿಂದ ಆಗಮಿಸಿದ್ದ ಭಕ್ತರು ತೀರ್ಥ ಉದ್ಭವಿಸಿದ ನಂತರ ಕಾವೇರಿಯಲ್ಲಿ ಮುಳುಗಿ ತೀರ್ಥಸ್ನಾನ ಮಾಡಿ ಪುನೀತರಾದರು. ತೀರ್ಥಸ್ವರೂಪಿಯಾಗಿ ಉದ್ಭವಿಸಿದ ವೇಳೆ ಕಾವೇರಿ ನದಿಯಲ್ಲಿ ಸ್ನಾನ ಮಾಡಿದರೆ ಅವರು ಮಾಡಿದ ಪಾಪಗಳು ನಾಶವಾಗುತ್ತವೆ ಎಂಬ ನಂಬಿಕೆ ಇರುವುದರಿಂದ ಇಲ್ಲಿ ತೀರ್ಥ ಸ್ನಾನಕ್ಕೆ ಪ್ರಾಧಾನ್ಯತೆ ಇದೆ.

ಪ್ರತಿ ವರ್ಷದಂತೆ ಈ ಬಾರಿಯ ಕುಂಡಿಕೆ ಮತ್ತು ಕೊಳದ ಸುತ್ತ ಭಕ್ತರ ಒತ್ತಡವನ್ನು ತಡೆಯಲು ಬ್ಯಾರಿಕೇಡ್‌ಗಳನ್ನು ಅಳವಡಿಸಲಾಗಿತ್ತು. ಭಾಗಮಂಡಲದಿಂದ ತಲಕಾವೇರಿವರೆಗಿನ ರಸ್ತೆಯಲ್ಲಿ ವಿದ್ಯುತ್ ವ್ಯವಸ್ಥೆ ಮಾಡಲಾಗಿತ್ತು ಇನ್ನು ಮಡಿಕೇರಿ–ಭಾಗಮಂಡಲ–ತಲಕಾವೇರಿಗೆ ವಿಶೇಷ ಬಸ್ ವ್ಯವಸ್ಥೆ ಮಾಡಲಾಗಿತ್ತು. ಭಕ್ತರ ವಾಹನಗಳಿಗೆ ತಲಕಾವೇರಿಯ ▶ 9ನೇ ಪುಟಕ್ಕೆ

ಮೈತ್ರಿ ಸಂಬಂಧ ಕುಮಾರಸ್ವಾಮಿ ಕರೆದ ಸಭೆಯಲ್ಲಿ
ಇಬ್ರಾಹಿಂ ಹಾಜರಿದ್ದು, ಸಮ್ಮತಿಸಿದ್ದರು

● ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ.ದೇವೇಗೌಡರ ಸ್ಪಷ್ಟನೆ
● ಅಭಿಮಾನಿಗಳ ಒತ್ತಾಯಕ್ಕೆ ಮಣಿದು ಸಭೆ ಮಾಡಿರಬಹುದು; ಅವರೊಂದಿಗೆ ದೇವೇಗೌಡರು ಮಾತನಾಡುತ್ತಾರೆ



ಬೆಂಗಳೂರು, ಅ.17(ಕೆಎಂಶಿ)– ಬಿಜೆಪಿ ಜೊತೆಗೆ ಮೈತ್ರಿ ಮಾಡಿಕೊಳ್ಳುವ ಸಂಬಂಧ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರು ನಡೆಸಿದ ಸಭೆಯಲ್ಲಿ ಹಾಜರಿದ್ದ ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ ಇಬ್ರಾಹಿಂ ಕೂಡ ಮೈತ್ರಿಗೆ ಒಪ್ಪಿಗೆ ಸೂಚಿಸಿದ್ದಾರೆ ಎಂದು ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಹಾಗೂ ಮಾಜಿ ಸಚಿವ ಜಿಟಿ ದೇವೇಗೌಡರು ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅರಮನೆ ಮೈದಾನದಲ್ಲಿ ನಡೆದ ಪಕ್ಷದ ಸಭೆಯಲ್ಲಿ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರು ತೆಗೆದುಕೊಳ್ಳುವ ತೀರ್ಮಾನಕ್ಕೆ ಬೆಂಬಲ ಘೋಷಿಸಿದ್ದರು. ಅಲ್ಲದೆ ಸೀಟು ಹಂಚಿಕೆ ವಿಚಾರದಲ್ಲಿ ಸರಿಯಾದ ತೀರ್ಮಾನ ಕೈಗೊಳ್ಳುವಂತೆ ಸಲಹೆ ▶ 9ನೇ ಪುಟಕ್ಕೆ

ಹೆಚ್‌ಡಿಕೆ, ನಿಖಿಲ್ ಉಚ್ಚಾಟನೆ ನಕಲಿ ಪತ್ರ ವೈರಲ್

ಪೊಲೀಸರಿಗೆ ಇಬ್ರಾಹಿಂ ದೂರು

ಬೆಂಗಳೂರು, ಅ.17– ಜಾತ್ಯಾತೀತ ಜನತಾದಳದ ಆಂತರಿಕ ಸಂಘರ್ಷದ ನಡುವೆಯೇ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಮತ್ತು ನಿಖಿಲ್ ಕುಮಾರಸ್ವಾಮಿ ಅವರನ್ನು ಪಕ್ಷದಿಂದ ಉಚ್ಚಾಟನೆ ಮಾಡಿರುವ ನಕಲಿ ಪತ್ರ ವೈರಲ್ ಆದ ಬೆನ್ನಲ್ಲೇ ಜೆಡಿಎಸ್ ರಾಜ್ಯಾಧ್ಯಕ್ಷ ಸಿಎಂ ಇಬ್ರಾಹಿಂ ಜೆ.ಸಿ.ನಗರ ಪೊಲೀಸರಿಗೆ ದೂರು ನೀಡಿದ್ದಾರೆ. ನಕಲಿ ಪತ್ರ ವೈರಲ್ ಆಗಿರುವುದರಿಂದ ನನಗೆ ಮತ್ತು ಪಕ್ಷಕ್ಕೆ ಮುಜುಗರ ಆಗಿದೆ. ಕಿಡಿಗೇಡಿಗಳು ಪಕ್ಷದ ಕಾರ್ಯಕರ್ತರಲ್ಲಿ ಗೊಂದಲ ಉಂಟು ಮಾಡುತ್ತಿದ್ದಾರೆ. ನನ್ನ ವೈಯಕ್ತಿಕ ವರ್ಚಸ್ಸಿಗೆ ಧಕ್ಕೆ ಆಗಿದೆ. ಈ ರೀತಿ ನಕಲಿ ಪತ್ರ ಹರಿಬಿಟ್ಟವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಿ ಎಂದು ದೂರಿನಲ್ಲಿ ಮನವಿ ಮಾಡಿದ್ದಾರೆ.

ಇಂದಿನಿಂದ ಆನ್‌ಲೈನ್‌ನಲ್ಲಿ ದಸರಾ
ಗೋಲ್ಡ್ ಕಾರ್ಡ್ ಮಾರಾಟ



ಮೈಸೂರು, ಅ.17(ಬಿಎಲ್‌ಯು)– ವಿಶ್ವ ವಿಖ್ಯಾತ ನಾಡಹಬ್ಬ ಮೈಸೂರು ದಸರಾ ವೀಕ್ಷಣೆಗಾಗಿ ದೇಶ–ವಿದೇಶಿ ಪ್ರವಾಸಿಗರು ಹಾಗೂ ಸಾರ್ವಜನಿಕರ ಅನುಕೂಲಕ್ಕಾಗಿ ನಾಳೆ(ಅ.18)ಯಿಂದ ಮೈಸೂರು ಜಿಲ್ಲಾಡಳಿತ ಗೋಲ್ಡ್ ಕಾರ್ಡ್ ಮಾರಾಟ ಮಾಡುತ್ತಿದೆ.

ನಾಳೆ ಬೆಳಿಗ್ಗೆ 10 ಗಂಟೆಯಿಂದ ಆನ್‌ಲೈನ್ ಮೂಲಕ ಗೋಲ್ಡ್ ಕಾರ್ಡ್ ಖರೀದಿ ಮಾಡಬಹುದು. ಒಂದು ಬಾರಿಗೆ ಗರಿಷ್ಠ ಎರಡು ಕಾರ್ಡ್ ಮಾತ್ರ ಖರೀದಿಸಲು

ಜಂಬೂ ಸವಾರಿ, ಪಂಜಿನ ಕವಾಯತ್‌ಗೂ ಟಿಕೆಟ್ ಆನ್‌ಲೈನ್ ಮೂಲಕವೇ ಲಭ್ಯ

- ಗೋಲ್ಡ್ ಕಾರ್ಡ್ ದರ ರೂ.6000
- ಅರಮನೆ ಆವರಣದಲ್ಲಿ ಜಂಬೂಸವಾರಿ ವೀಕ್ಷಣೆ ರೂ. 3000, 2000
- ಪಂಜಿನ ಕವಾಯತು ವೀಕ್ಷಣೆ ಟಿಕೆಟ್ ದರ ರೂ.500




ಅವಕಾಶವಿದೆ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ತಿಳಿಸಿದ್ದಾರೆ. ಒಂದು ಗೋಲ್ಡ್ ಕಾರ್ಡ್ ಬೆಲೆ 6,000 ರೂ. ನಿಗದಿ ಮಾಡಲಾಗಿದ್ದು, ಆನ್‌ಲೈನ್ ಮೂಲಕ ಮಾತ್ರ ಖರೀದಿಗೆ ಅವಕಾಶ ಕಲ್ಪಿಸಲಾಗಿದೆ ಎಂದು ಹೇಳಿದ್ದಾರೆ.



ಇದೇ ರೀತಿ ಅ.24ರಂದು ನಡೆಯುವ ಜಂಬೂ ಸವಾರಿ ಹಾಗೂ ಪಂಜಿನ ಕವಾಯತು ವೀಕ್ಷಣೆಗಾಗಿ ಕೂಡ ನಾಳೆ(ಅ.18) ಬೆಳಿಗ್ಗೆ 10 ಗಂಟೆಯಿಂದ ಆನ್‌ಲೈನ್ ಮೂಲಕ ಟಿಕೆಟ್ ಖರೀದಿ ಮಾಡಬಹುದಾಗಿದೆ. ಮೈಸೂರು ಅರಮನೆ ಆವರಣದೊಳಗೆ ದಸರಾ ಜಂಬೂ ಸವಾರಿ ವೀಕ್ಷಣೆಗೆ 3,000 ರೂ. ಹಾಗೂ ▶ 9ನೇ ಪುಟಕ್ಕೆ

ಮೈಸೂರು ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ
ಅ.23ರಂದು ಏರ್ ಶೋ

● ಅ.22ರಂದು ಏರ್ ಶೋ ತಾಲೀಮು; ಸಾರ್ವಜನಿಕರ ವೀಕ್ಷಣೆಗೆ ಮುಕ್ತ ಅವಕಾಶ ● ಅ.23ರ ಏರ್ ಶೋ; ಪಂಜಿನ ಕವಾಯತು ತಾಲೀಮಿಗೆ ಒಂದೇ ಪಾಸ್ ಅನ್ವಯ ● ಸೂರ್ಯಕಿರಣ್ ತಂಡದಿಂದ ಮೈನವಿರೇಳಿಸುವ ವೈಮಾನಿಕ ಪ್ರದರ್ಶನ



ಮೈಸೂರು, ಅ.17(ಎಂಟಿವೈ)– ಈ ಬಾರಿಯ ದಸರಾ ಮಹೋತ್ಸವದಲ್ಲಿ ಬಹು ನಿರೀಕ್ಷಿತ ಏರ್ ಶೋ ತೀವ್ರ ಕುತೂಹಲ ಮೂಡಿಸಿದೆ. ನಗರದ ಪಂಜಿನ ಕವಾಯತು ಮೈದಾನದಲ್ಲಿ ಭಾರತೀಯ ವಾಯುಪಡೆಯ ಸೂರ್ಯಕಿರಣ್ ಏರೋಬ್ಯಾಟಿಕ್ ತಂಡದಿಂದ ಅ.23ರಂದು ಸಂಜೆ 4 ಗಂಟೆಗೆ ಮೈನವಿರೇಳಿಸುವ ವೈಮಾನಿಕ ಪ್ರದರ್ಶನ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಅ.22ರಂದು ಸಂಜೆ 4ಕ್ಕೆ ಪೂರ್ವಾಭ್ಯಾಸ ಇರಲಿದೆ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದ್ದಾರೆ.

ದಸರಾ ವಸ್ತು ಪ್ರದರ್ಶನದ ಆವರಣದಲ್ಲಿ ದಸರಾ ಗಜಪಡೆ ಹಾಗೂ ಅಶ್ವಪಡೆಗೆ ನಡೆಸಿದ ಮೂರನೇ ಹಂತದ ಕುಶಾಲತೋಪು ಸಿಡಿಸುವ ತಾಲೀಮು ವೀಕ್ಷಿಸಿದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ವೈಮಾನಿಕ ಪ್ರದರ್ಶನಕ್ಕೆ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ. ವಿಶ್ವಮಟ್ಟದಲ್ಲಿ ಹೆಸರು ಮತ್ತು ಸಾಧನೆ ಮಾಡಿರುವ ಭಾರತೀಯ ವಾಯುಸೇನೆಯ ಸೂರ್ಯಕಿರಣ್ ತಂಡ ದಸರಾ ಏರ್ ಶೋನಲ್ಲಿ ಒಂದು ಗಂಟೆ ಕಾಲ ಸಾಹಸ ಪ್ರದರ್ಶಿಸಲಿದ್ದಾರೆ. ▶ 9ನೇ ಪುಟಕ್ಕೆ

ಪುರಭವನ ಆವರಣದ ಮಲ್ಟಿ ಲೆವೆಲ್ ಪಾರ್ಕಿಂಗ್ ಇಂದು ಲೋಕಾರ್ಪಣೆ

● ಕಾರಿಗೆ ಗಂಟೆಗೆ 30 ರೂ; ನಂತರದ ಪ್ರತಿ ಗಂಟೆಗೆ 10 ರೂ. ● ಎರಡು ತಿಂಗಳ ಮಟ್ಟಿಗೆ ಗುತ್ತಿಗೆ ● ಇಲ್ಲಿ ವಾಹನ ಪಾರ್ಕಿಂಗ್ ಮಾಡಿದವರಿಗೆ ಅರಸು ರಸ್ತೆ, ಸಯ್ಯಾಜಿರಾವ್ ರಸ್ತೆ, ಇತರೆಡೆಗೆ ಬ್ಯಾಟರಿ ಚಾಲಿತ ವಾಹನ ವ್ಯವಸ್ಥೆಗೆ ಕ್ರಮ



ಮೈಸೂರು, ಅ.17(ಎಸ್‌ಬಿಡಿ)– ದಶಕದಿಂದ ನನೆಗುದಿಗೆ ಬಿದ್ದಿದ್ದ ಮೈಸೂರಿನ ಪುರಭವನ ಆವರಣದಲ್ಲಿನ ಬಹು ಹಂತದ ವಾಹನ ನಿಲುಗಡೆ (ಮಲ್ಟಿ ಲೆವೆಲ್ ಪಾರ್ಕಿಂಗ್) ಸಂಕೀರ್ಣ ಬುಧವಾರ ಲೋಕಾರ್ಪಣೆಗೊಳ್ಳಲಿದೆ.

ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಅವರು ಮಧ್ಯಾಹ್ನ 12.30ಕ್ಕೆ ಉದ್ಘಾಟನೆ ನೆರವೇರಿಸಲಿದ್ದು, ಎಲ್ಲಾ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಭಾಗವಹಿಸಲಿದ್ದಾರೆ ಎಂದು ಮೇಯರ್ ಶಿವಕುಮಾರ್ ಮಂಗಳವಾರ ಮಲ್ಟಿ ಲೆವೆಲ್ ಪಾರ್ಕಿಂಗ್ ಸಂಕೀರ್ಣದಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ದಸರಾ ಹಿನ್ನೆಲೆಯಲ್ಲಿ ಎರಡು ತಿಂಗಳ ಅವಧಿಗೆ ಟೆಂಡರ್ ನೀಡಲಾಗಿದ್ದು, ಈ ಅವಧಿ ಮುಗಿಯುವಷ್ಟರಲ್ಲಿ ಒಂದು ಅಥವಾ ಮೂರು ವರ್ಷಗಳ ಅವಧಿಗೆ ಹೊಸ ಟೆಂಡರ್ ಕರೆಯಲಾಗುವುದು. ಎರಡು ತಿಂಗಳ ಅವಧಿಗೆ ಗ್ಲೋಬಲ್ ಟೆಂಡರ್‌ನಲ್ಲಿ ಭಾಗವಹಿಸಿದ್ದವರಲ್ಲಿ ಗುತ್ತಿಗೆದಾರ ಬಿ.ಮಹದೇವ ಅವರು ಹೆಚ್ಚು ಮೊತ್ತ 7 ಲಕ್ಷ ರೂ. ನಮೂದಿಸಿದ್ದರಿಂದ ಅವರಿಗೆ ಟೆಂಡರ್ ನೀಡಲಾಗಿದೆ ಎಂದರು. ಈ ಸಂಕೀರ್ಣದ ಮೈನೆಸ್ ಒನ್ (–1) ▶ 9ನೇ ಪುಟಕ್ಕೆ

ಮೇಯರ್ ಶಿವಕುಮಾರ್ ಮಾಹಿತಿ

ಮತ್ತೊಂದು ಪಾರ್ಕಿಂಗ್ ಯೋಜನೆಗೆ ಪ್ರಸ್ತಾವ



ಮೈಸೂರು: ನಗರದ ವಿನೋಬಾ ರಸ್ತೆಯ ನಂಜರಾಜ ಬಹದ್ದೂರ್ ಛತ್ರದ ಬಳಿ ಮಲ್ಟಿಲೆವೆಲ್ ಆಟೋಮೇಟೆಡ್(ಸ್ವಯಂ ಚಾಲಿತ) ಪಾರ್ಕಿಂಗ್ ಯೋಜನೆ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಪ್ರಕ್ರಿಯೆ ಆರಂಭವಾಗಿದೆ ಎಂದು ಮೇಯರ್ ಶಿವಕುಮಾರ್ ತಿಳಿಸಿದರು. ಡಿ.ದೇವರಾಜ ಅರಸು ರಸ್ತೆ ಸೇರಿದಂತೆ ಕೆಲ ರಸ್ತೆಗಳಲ್ಲಿ 'ಪೇ ಅಂಡ್ ಪಾರ್ಕ್' ಜಾರಿಗೊಳಿಸಲು ತೀರ್ಮಾನಿಸಲಾಗಿತ್ತು. ಆದರೆ ಆಕ್ಷೇಪ ವ್ಯಕ್ತವಾಗಿದ್ದರಿಂದ ಯೋಜನೆ ಸ್ಥಗಿತವಾಗಿದೆ. ಆದರೆ ನಂಜರಾಜ ಬಹದ್ದೂರ್ ಛತ್ರದ ಹಿಂಭಾಗದಲ್ಲಿ ಸಾಕಷ್ಟು ಜಾಗವಿದ್ದು, ಅಲ್ಲಿ ಮಲ್ಟಿಲೆವೆಲ್ ಆಟೋಮೇಟೆಡ್ ಪಾರ್ಕಿಂಗ್ ಸಂಕೀರ್ಣ ನಿರ್ಮಿಸಲು ನಿರ್ಧರಿಸಿ, ಈ ಸಂಬಂಧ ಜಿಲ್ಲಾಧಿಕಾರಿಗಳಲ್ಲಿ ಮನವಿ ಮಾಡಲಾಗಿದೆ. ಅವರು ದಸರಾ ನಂತರ ಜಾಗವನ್ನು ಹಸ್ತಾಂತರಿಸುವ ವಿಶ್ವಾಸವಿದೆ ಎಂದರು.



ದಸರಾಗೆ 14 ಕೋಟಿ ಕಾಮಗಾರಿ


"ದಸರಾ ಅಂಗವಾಗಿ ಲೇನ್ ಪೇಂಟಿಂಗ್‌ಗೆ 103 ಕೋಟಿ, ಕರ್ಬ್ ಪೇಂಟಿಂಗ್‌ಗೆ 1.50 ಕೋಟಿ, ಗುಂಡಿ ಮುಚ್ಚಲು 3 ಕೋಟಿ, ಪಾದಚಾರಿ ಮಾರ್ಗ ಅಭಿವೃದ್ಧಿಗೆ 50 ಲಕ್ಷ, ಮರು ಡಾಂಬರೀಕರಣಕ್ಕೆ 6 ಕೋಟಿ, ನಗರದ ಸ್ವಚ್ಛತೆಗೆ 50 ಲಕ್ಷ, ವೃತ್ತಗಳ ಸೌಂದರ್ಯೀಕರಣಕ್ಕೆ 75 ಲಕ್ಷ ಹಾಗೂ ವಿದ್ಯುತ್ ಕಾಮಗಾರಿಗೆ 75 ಲಕ್ಷ ರೂ. ಸೇರಿದಂತೆ ಸುಮಾರು 14 ಕೋಟಿ ರೂ. ಕಾಮಗಾರಿಗಳನ್ನು ನಡೆಸಲಾಗಿದೆ.

–ಮೇಯರ್ ಶಿವಕುಮಾರ್

ಪಾರ್ಕಿಂಗ್ ಶುಲ್ಕ


ಮಲ್ಟಿ ಲೆವೆಲ್ ಪಾರ್ಕಿಂಗ್‌ನಲ್ಲಿ ನಾಲ್ಕು ಚಕ್ರದ ವಾಹನಗಳಿಗೆ ಪ್ರತಿ ಗಂಟೆಗೆ 30 ರೂ., ನಂತರದ ಪ್ರತಿ ಗಂಟೆಗೆ 10 ರೂ. ಹಾಗೂ ದಿನಕ್ಕೆ 60 ರೂ. ನಿಗದಿಪಡಿಸಲಾಗಿದೆ. ಪುರಭವನದ ಆವರಣದಲ್ಲಿ ದ್ವಿಚಕ್ರ ವಾಹನಗಳಿಗೆ ಗಂಟೆಗೆ 10 ರೂ., ನಂತರದ ಪ್ರತಿ ಗಂಟೆಗೆ 5 ರೂ. ಹಾಗೂ ದಿನಕ್ಕೆ 30 ರೂ. ನಿಗದಿಪಡಿಸಲಾಗಿದೆ.

ಕೆ.ಬಿ.ಗಣಪತಿ ಅವರಿಗೆ ಬಿಜೆಪಿ ಅಭಿನಂದನೆ


ಕೆ.ಬಿ. ಗಣಪತಿ

ಮೈಸೂರು, ಅ.17(ಬಿಎಲ್‌ಯು)–ಪ್ರತಿಷ್ಠಿತ ಮೈಸೂರು ವಿಶ್ವವಿದ್ಯಾನಿಲಯ ಗೌರವ ಡಾಕ್ಟರೇಟ್ ಪುರಸ್ಕೃತ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಅವರನ್ನು ಮೈಸೂರು ಬಿಜೆಪಿ ಅಭಿನಂದಿಸಿದೆ. ದಸರಾದ ಶುಭ ಸಂದರ್ಭದಲ್ಲಿ ಕೆ.ಬಿ.ಗಣಪತಿ ಅವರಿಗೆ ತಾಯಿ ಚಾಮುಂಡೇಶ್ವರಿ ಆಯಸ್ಸು, ಆರೋಗ್ಯ ಹಾಗೂ ಮತ್ತಷ್ಟು ಕೀರ್ತಿ ಕಲ್ಪಿಸಲಿ ಎಂದು ಬಿಜೆಪಿ ನಗರಾಧ್ಯಕ್ಷರೂ ಆದ ಶಾಸಕ ಟಿ.ಎಸ್. ಶ್ರೀವತ್ಸ ಹಾಗೂ ವಕ್ತಾರ ಎಂ.ಎ. ಮೋಹನ್ ಹಾರೈಸಿದ್ದಾರೆ.

ಭಾರತೀಯ ಕ್ರಿಕೆಟ್ ಇತಿಹಾಸದಲ್ಲಿ ಮೈಸೂರು ಎಕ್ಸ್‌ಪ್ರೆಸ್ ಎಂದೇ ಖ್ಯಾತಿ ಪಡೆದಿರುವ ಜಾವಗಲ್ ಶ್ರೀನಾಥ್ ಅವರಿಗೂ ಗೌರವ ಡಾಕ್ಟರೇಟ್ ನೀಡುತ್ತಿರುವುದು ಸಂತಸ ತಂದಿದೆ ಎಂದು ತಿಳಿಸಿದ್ದಾರೆ.



ನವದೆಹಲಿಯ ಸಿಟಿಜನ್ ಇಂಟಿ ಗ್ರೇಷನ್ ಪೀಸ್ ವತಿಯಿಂದ ನೀಡಲಾಗುವ ಡಾ. ಎಪಿಜೆ ಅಬ್ದುಲ್ ಕಲಾಂ ಪ್ರಶಸ್ತಿಯನ್ನು ಮೈಮುಲ್ ಹಾಗೂ ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ಮಾಜಿ ಅಧ್ಯಕ್ಷರು, ಹಾಲಿ ನಿರ್ದೇಶಕರಾದ ಕೆ.ಉಮಾಶಂಕರ್ ಕೇಂದ್ರ ಸರ್ಕಾರದ ಹೈ ಕಮಿಷನರ್ ವೈ.ಕೆ.ಸಿನ್ಹಾ ಅವರಿಂದ ಸ್ವೀಕರಿಸಿದರು.


ಇಂದು ದಕ್ಷಸುತೆಯರ ಕಲ್ಯಾಣ ನಾಟಕ ಪ್ರದರ್ಶನ



ಮೈಸೂರು, ಅ.17(ಬಿಎಲ್‌ಯು)– ಮೈಸೂರು ದಸರಾ ಹಿನ್ನೆಲೆಯಲ್ಲಿ ನಗರದ ಪುರಭವನದಲ್ಲಿ ನಾಳೆ(ಅ.18) 'ದಕ್ಷ ಸುತೆಯರ ಕಲ್ಯಾಣ' ಅಥವಾ 'ಚಂದ್ರಮನ ಶಾಪ ವಿಮೋಚನೆ' ಪೌರಾಣಿಕ ನಾಟಕ ಪ್ರದರ್ಶನವನ್ನು ಆಯೋಜಿಸಲಾಗಿದೆ.

ನಾಳೆ ಸಂಜೆ 5 ಗಂಟೆಗೆ ಆರಂಭವಾಗುವ ನಾಟಕ ಪ್ರದರ್ಶನವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಶ್ರೀ ಸಿದ್ದೇಶ್ವರ ಕೃಪಾ ಪೋಷಿತ ನಾಟಕ ಮಂಡಳಿ ಪ್ರಸ್ತುತಪಡಿಸುತ್ತಿದೆ. ಹಾರ್ಮೋನಿಯಂ ಮಾಸ್ಟರ್ ಟಿ.ನರಸೀಪುರ ತಾಲೂಕಿನ ಮಾದಾಪುರ ಎಂ.ಎನ್.ನಾಗೇಶ್ ನಿರ್ದೇಶನದಲ್ಲಿ ಮೂಡಿ ಬರುತ್ತಿರುವ ನಾಟಕದಲ್ಲಿ ಸೂತ್ರಧಾರಿ ಪಾತ್ರದಲ್ಲಿ ಬಿ.ಎಸ್.ರಾಜು, ದಕ್ಷಬ್ರಹ್ಮನ ಪಾತ್ರದಲ್ಲಿ ಹುಯಿಲಾಳು ರಾಮಸ್ವಾಮಿ, ಈಶ್ವರನ ಪಾತ್ರದಲ್ಲಿ ಬೆಳವಾಡಿ ಮಹೇಶ್, ಚಂದ್ರಮನ ಪಾತ್ರದಲ್ಲಿ ಶೆಟ್ಟಿ ನಾಯಕನಹಳ್ಳಿ ಸಿದ್ಧಾರ್ಥ್, ವಸುಂದರನ ಪಾತ್ರದಲ್ಲಿ ಮುರುಡಗಳ್ಳಿ ದೊಡ್ಡೇಗೌಡ, ನಾರದನ ಪಾತ್ರದಲ್ಲಿ ಬೊಮ್ಮೇನಹಳ್ಳಿ ನಂದೀಶ್ ನಟಿಸಲಿದ್ದಾರೆ. ವಿಷ್ಣುವಿನ ಪಾತ್ರದಲ್ಲಿ ಕಾಳಿಸಿದ್ದನಹುಂಡಿ ಶಿವಣ್ಣ, ಬೃಗುವಿನ ಪಾತ್ರದಲ್ಲಿ ಹುಲ್ಲಹಳ್ಳಿ ಪರ್ವತಪ್ಪ 132ನೇ ಬಾರಿಗೆ, ಜಾಲಬ್ರಹ್ಮನ ಪಾತ್ರದಲ್ಲಿ ನವೀನ, ಆದಿಶಕ್ತಿ ಮತ್ತು ವೇದಾವತಿ ಪಾತ್ರದಲ್ಲಿ ದೀಪಿಕಾ, ರೋಹಿಣಿ ಪಾತ್ರದಲ್ಲಿ ಕೃಷ್ಣವೇಣಿ, ಲಕ್ಷ್ಮಿ ಮತ್ತು ಪದ್ಮ ಪಾತ್ರದಲ್ಲಿ ಕಾವ್ಯ, ಪುಷ್ಪವತಿ ಪಾತ್ರದಲ್ಲಿ ದಿವ್ಯ ಅಭಿನಯಿಸುತ್ತಿದ್ದಾರೆ. ಕೆ.ಆರ್. ಪೇಟೆಯ ಪಾರ್ಥ ಮತ್ತು ತಂಡದವರು ಕ್ಯಾಷಿಯೋ ಮತ್ತು ತಬಲ ನುಡಿಸಲಿದ್ದಾರೆ ಎಂದು ನಾಟಕ ಮಂಡಳಿ ಅಧ್ಯಕ್ಷ ಬಿ.ಎಸ್.ರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸರ್ವ ಜನಾಂಗದ ಶಾಂತಿಯ ತೋಟ ಎಂದ ಕುವೆಂಪು, ಸಂಸ್ಕೃತಿಹೀನರು ಅನ್ನುವರೇ...?


ಡಾ. ಯೋಗಣ್ಣ

ಮೈಸೂರು,ಅ.17–ವೈಯಕ್ತಿಕ ಹೇಳಿಕೆಗೆ ರಾಷ್ಟ್ರಕವಿ ಕುವೆಂಪು ಅವರ ಹೆಸರು ಬಳಸುವುದು ಖಂಡನೀಯ ಎಂದು ವೈದ್ಯ ಸಾಹಿತಿ ಡಾ. ಎಸ್.ಪಿ.ಯೋಗಣ್ಣ ಹೇಳಿದ್ದಾರೆ.

ಕರುನಾಡನ್ನು 'ಸರ್ವ ಜನಾಂಗದ ಶಾಂತಿಯ ತೋಟ' ಎಂದ ರಾಷ್ಟ್ರಕವಿ ಕುವೆಂಪು ಅವರು ಯಾವುದೇ ಸಮುದಾಯದವರನ್ನೂ ಸಂಸ್ಕೃತಿಹೀನರು ಎಂದಿರಲು ಸಾಧ್ಯವೇ ಇಲ್ಲ. ಒಕ್ಕಲುತನ ಮಾಡುವವರನ್ನು ನೇಗಿಲ ಯೋಗಿ ಎಂದು ಗೌರವ ಸಮರ್ಪಿಸಿರುವ ಅವರು, ಒಕ್ಕಲಿಗರಿಗೆ ಸಂಸ್ಕೃತಿ ಇಲ್ಲ ಎಂದಿರಲಾರರು. ಸಮಾಜದಲ್ಲಿರುವ ಅಸಮಾನತೆ, ಮೌಢ್ಯ, ಅನಾಚಾರಗಳ ವಿರುದ್ಧ ಧ್ವನಿ ಎತ್ತಿದವರು ಜಾತಿಯೊಂದನ್ನು ಗುರಿಯಾಗಿಸಿ ಎಂದೂ ಮಾತನಾಡಿದವರಲ್ಲ. ಯಾರೂ ಕೂಡ ತಮ್ಮ ವೈಯಕ್ತಿಕ ಹೇಳಿಕೆಗಳಿಗೆ ಕುವೆಂಪು ಅವರನ್ನು ಎಳೆದು ತರುವುದು ಸಮಂಜಸವಲ್ಲ. ಕುವೆಂಪು ಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡಿರುವ ಸಾಹಿತಿಗಳು ಈ ಬಗ್ಗೆ ಮಾತನಾಡಬೇಕಿದೆ ಎಂದು ಡಾ. ಎಸ್.ಪಿ.ಯೋಗಣ್ಣ ಒತ್ತಾಯಿಸಿದ್ದಾರೆ.

ರೈಲಿನಲ್ಲಿ ಮಹಿಳೆಯ ಚಿನ್ನಾಭರಣ ಕಳವು



ಮೈಸೂರು, ಅ.17(ಆರ್‌ಕೆ)– ಕುಂದಾಪುರದಿಂದ ಮೈಸೂರಿಗೆ ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಮಹಿಳೆಯ 1.9 ಲಕ್ಷ ರೂ. ಮೌಲ್ಯದ ಚಿನ್ನಾಭರಣವಿದ್ದ ವ್ಯಾನಿಟಿ ಬ್ಯಾಗ್ ಕಳವಾಗಿದೆ. ಈ ಘಟನೆ ಮಂಗಳವಾರ ಮುಂಜಾನೆ ಸಂಭವಿಸಿದೆ.


ಶ್ರೀರಂಗಪಟ್ಟಣ ತಾಲೂಕು, ಮೊಗರಹಳ್ಳಿ ಮಂಟಿ ನಿವಾಸಿ ಜಿ.ಮಂಜುನಾಥ್ ಅವರ ಪತ್ನಿ ಎಸ್.ಕೆ.ರಂಜಿತಾ ಚಿನ್ನಾಭರಣ ಹಾಗೂ ಮೊಬೈಲ್ ಕಳೆದುಕೊಂಡವರು. ಸ್ನೇಹಿತರ ವಿವಾಹಕ್ಕೆಂದು ಅಕ್ಟೋಬರ್ 13ರಂದು ಕುಂದಾಪುರಕ್ಕೆ ತೆರಳಿ ಅಕ್ಟೋಬರ್ 16ರಂದು ರಾತ್ರಿ ಬೆಂಗಳೂರು ಎಕ್ಸ್‌ಪ್ರೆಸ್ ರೈಲಿನಲ್ಲಿ ಪತಿಯೊಂದಿಗೆ ಮೈಸೂರಿಗೆ ಪ್ರಯಾಣ ಬೆಳೆಸಿದ್ದರು. ಅವರು ವ್ಯಾನಿಟಿ ಬ್ಯಾಗ್ ಅನ್ನು ತಲೆ ಬಳಿ ಇರಿಸಿಕೊಂಡು ಮಲಗಿದ್ದರು. ಅದರಲ್ಲಿ ಮೊಬೈಲ್ ಫೋನ್, 16 ಗ್ರಾಂ ಚಿನ್ನದ ಸರ, 8 ಗ್ರಾಂ ಓಲೆ, ಜುಮುಕಿ, 6 ಗ್ರಾಂ ಬ್ರೇಸ್‌ಲೆಟ್, 12 ಗ್ರಾಂ ಉಂಗುರ ಸೇರಿ ಒಟ್ಟು 1,89, 898 ರೂ. ಮೌಲ್ಯದ ಆಭರಣಗಳಿದ್ದ ಬ್ಯಾಗ್ ಮೈಸೂರು ರೈಲು ನಿಲ್ದಾಣ ತಲುಪುವಷ್ಟರಲ್ಲಿ ಕಳವಾಗಿದೆ ಎಂದು ರಂಜಿತ ಮೈಸೂರು ರೈಲ್ವೆ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಸೇಪಿಯೆಂಟ್ ಶಿಕ್ಷಣ ಸಂಸ್ಥೆಯಲ್ಲಿ ರಕ್ತದಾನ ಶಿಬಿರ

ಮೈಸೂರು, ಅ. 17– ಮೈಸೂರಿನ ಸೇಪಿಯೆಂಟ್ ವಾಣಿಜ್ಯ ಹಾಗೂ ನಿರ್ವಹಣಾ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾ ಘಟಕ ಮತ್ತು ಲಯನ್ಸ್ ಬ್ಲಡ್ ಸೆಂಟರ್ ಜೀವಧಾರ ವತಿಯಿಂದ ಅ.19ರಂದು ಬೆಳಗ್ಗೆ 9.30 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಸೇಪಿಯೆಂಟ್ ಕಾಲೇಜು ಆವರಣದಲ್ಲಿ ರಕ್ತದಾನ ಶಿಬಿರ ಆಯೋಜಿಸಲಾಗಿದೆ. ಶಿಬಿರವನ್ನು ಸೇಪಿಯೆಂಟ್ ಶಿಕ್ಷಣ ಸಂಸ್ಥೆ ಅಧ್ಯಕ್ಷ ದಲ್‌ಜೀತ್ ರಾವ್ ಚೌಧರಿ ಉದ್ಘಾಟಿಸಲಿದ್ದಾರೆ. ಕಾಲೇಜು ಪ್ರಾಂಶುಪಾಲರಾದ ಡಾ. ಕೆ. ಗಣೇಶ್ ಅಧ್ಯಕ್ಷತೆ ವಹಿಸಲಿದ್ದು, ಲಯನ್ಸ್ ಬ್ಲಡ್ ಸೆಂಟರ್ ಜೀವಧಾರ ಸಂಸ್ಥೆಯ ಮ್ಯಾನೇಜಿಂಗ್ ಡೈರೆಕ್ಟರ್ ಎಸ್.ಈ. ಗಿರೀಶ್ ಉಪಸ್ಥಿತರಿರುವರು. ಹೆಚ್ಚಿನ ಮಾಹಿತಿಗೆ ಮೊ. 9663819815, 9902921401 ಸಂಪರ್ಕಿಸಬಹುದು.

ನಿಧನ

ಶ್ರೀನಿವಾಸಮೂರ್ತಿ



ನಂಜನಗೂಡು, ಅ.17–ನಗರದ 9ನೇ ಕ್ರಾಸ್ ನಿವಾಸಿ ನಿವೃತ್ತ ಕೆಇಬಿ ನೌಕರ ಶ್ರೀನಿವಾಸಮೂರ್ತಿ(73) ಸೋಮವಾರ ರಾತ್ರಿ ಹೃದಯಾಘಾತದಿಂದ ನಿಧನರಾಗಿದ್ದಾರೆ. ಮೃತರು ಇಬ್ಬರು ಪುತ್ರರು ಹಾಗೂ ಪುತ್ರಿಯರು ಮತ್ತು ಅಪಾರ ಬಂಧುಗಳನ್ನು ಅಗಲಿದ್ದಾರೆ.

ಇವರ ಅಂತ್ಯಕ್ರಿಯೆ ನಾಳೆ ಕಪಿಲಾ ತೀರದ ಹದಿನಾರು ಕಾಲು ಮಂಟಪದಲ್ಲಿ ಬೆಳಗ್ಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಇವರು ಸೃಜನ ಸಹಕಾರ ಸಂಘದ ಉಪಾಧ್ಯಕ್ಷರಾಗಿದ್ದರು. ಇವರಿಗೆ ಸೃಜನ ಸೇವಾಭಿವೃದ್ಧಿ ನ್ಯಾಸ್ ಟ್ರಸ್ಟ್ ಅಧ್ಯಕ್ಷ ಗೋಪಿನಾಥ್, ಕಾರ್ಯದರ್ಶಿ ಶ್ರೀಕಂಠಮೂರ್ತಿ, ಸೃಜನ ಸಹಕಾರ ಸಂಘದ ಅಧ್ಯಕ್ಷ ಗುರುರಾಜ್, ರಂಗಸ್ವಾಮಿ, ಸತೀಶ್, ಎಸ್.ದಳವಾಯಿ ರಘು ಇತರರು ಸಂತಾಪ ಸೂಚಿದ್ದಾರೆ.

ಅವಕಾಶ ವಂಚಿತರಿಗೆ ಸಾಮಾಜಿಕ ನ್ಯಾಯ ಕಲ್ಪಿಸುವುದೇ ಕಾಂಗ್ರೆಸ್ ಸಿದ್ಧಾಂತ

● ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಪ್ರತಿಪಾದನೆ ● ಕಾಂಗ್ರೆಸ್ ಕಚೇರಿಯಲ್ಲಿ ಲೀಡರ್‌ಶಿಪ್ ಡೆವಲಪ್‌ಮೆಂಟ್ ಮಿಷನ್ ಕಾರ್ಯಕ್ರಮ



ಮೈಸೂರು, ಅ.17(ಎಂಟಿವೈ)– ಅವಕಾಶ ವಂಚಿತ ಶೋಷಿತ ಸಮುದಾಯಗಳಿಗೆ ಸಾಮಾಜಿಕ ನ್ಯಾಯ ಒದಗಿಸುವುದೇ ಕಾಂಗ್ರೆಸ್ ಸಿದ್ಧಾಂತವಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ತಿಳಿಸಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ದೇಶದಾದ್ಯಂತ ನಡೆಸಲಾಗುತ್ತಿರುವ ಲೀಡರ್‌ಶಿಪ್ ಡೆವಲಪ್‌ಮೆಂಟ್ ಮಿಷನ್‌ನ ಕಾರ್ಯಕ್ರಮದಡಿ ಚಾಮರಾಜನಗರ–ಮೈಸೂರು ಕ್ಷೇತ್ರದ ಕಾರ್ಯಕರ್ತರ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಈ ಹಿಂದಿನಿಂದಲೂ ದಲಿತ, ಅಲ್ಪಸಂಖ್ಯಾತ, ಹಿಂದುಳಿದ ವರ್ಗಗಳು ಅವಕಾಶದಿಂದ ವಂಚಿತವಾಗಿ, ದೌರ್ಜನ್ಯಕ್ಕೆ ಒಳಗಾಗಿವೆ. ಈ ನಿಟ್ಟಿನಲ್ಲಿ ಸದರಿ ಸಮುದಾಯಗಳಿಗೆ ಸಾಮಾಜಿಕ ನ್ಯಾಯ ಒದಗಿಸಲು ಕಾಂಗ್ರೆಸ್ ಶ್ರಮಿಸುತ್ತಿದೆ. ಹೀಗಾಗಿ ಈ ಸಮುದಾಯದ ಎರಡನೇ ಹಂತದ ನಾಯಕರನ್ನು ಗುರುತಿಸಿ ಬೆಳೆಸಲು ಕ್ರಮ ಕೈಗೊಳ್ಳಲಾಗಿದೆ. ಈ ಹಿಂದೆ ಇಂದಿರಾ ಗಾಂಧಿ ಅವರ ಹೆಸರೇಳಿ ಸ್ಪರ್ಧಿಸಿದವರು ಅತಿರಥ ಮಹಾರಥರನ್ನೇ ಸೋಲಿಸಿ, ಸಂಸತ್ ಪ್ರವೇಶಿಸುತ್ತಿದ್ದರು. ಇದಕ್ಕೆ ಅಹಿಂದ ವರ್ಗಗಳ ಮತದಾರರು, ದಲಿತ, ಅಲ್ಪಸಂಖ್ಯಾತ, ಹಿಂದುಳಿದ ವರ್ಗಗಳೇ ಕಾರಣ. ಈ ಸಮುದಾಯಗಳೇ ಇಂದಿಗೂ ಕಾಂಗ್ರೆಸ್‌ನ ಶಕ್ತಿ ಎಂದು ಬಣ್ಣಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಐದು ಗ್ಯಾರಂಟಿ ಯೋಜನೆಯನ್ನು ಜಾರಿಗೊಳಿಸಿದೆ. ಈ ಎಲ್ಲಾ ಯೋಜನೆಗಳು ಜನಪರ ಕಾರ್ಯಕ್ರಮವಾಗಿದೆ. ಎಲ್ಲಾ ವರ್ಗದವರಿಗೂ ಸೌಲಭ್ಯ ಸಿಗುತ್ತಿದೆ. ಅನ್ನಭಾಗ್ಯ, ಗೃಹ ಜ್ಯೋತಿ, ಗೃಹ ಲಕ್ಷ್ಮಿ, ಶಕ್ತಿ ಯೋಜನೆಯ ಮೂಲಕ ಪ್ರತಿ ಮನೆಗೆ 4ರಿಂದ 5 ಸಾವಿರ ರೂ.ಗಳನ್ನು ನೀಡಲಾಗುತ್ತಿದೆ. ಇದರಿಂದ ಕುಟುಂಬಗಳ ಸಬಲೀಕರಣವು ಆಗಲಿದೆ. 1.30 ಕೋಟಿ ಕುಟುಂಬಗಳು ಯೋಜನೆಯ ಸೌಲಭ್ಯ ಪಡೆದುಕೊಳ್ಳುತ್ತಿವೆ. ಫಲಾನುಭವಿಗಳನ್ನು ಗುರುತಿಸಿ ಅವರಿಗೆ ಸರ್ಕಾರದ ಯೋಜನೆಯ ಮಹತ್ವವನ್ನು ಬೂತ್ ಮಟ್ಟದ ನಾಯಕರು ಮನವರಿಕೆ ಮಾಡಬೇಕು ಎಂದು ಡಾ.ಮಹದೇವಪ್ಪ ಸಲಹೆ ನೀಡಿದರು.

ಜೆಡಿಎಸ್ ಮೈತ್ರಿಯಿಂದಲೇ ಕಳೆದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಹಿನ್ನಡೆಯಾಗಿದ್ದು, ಈ ಬಾರಿ ಬಿಜೆಪಿ–ಜೆಡಿಎಸ್ ಮೈತ್ರಿಯಾಗಿದೆ. ಅಹಿಂದ ವರ್ಗಗಳು ಇದನ್ನು ಅರ್ಥ ಮಾಡಿಕೊಂಡು ಮುಂಬರುವ ಮಹತ್ವದ ಲೋಕಸಭಾ ಚುನಾವಣೆಯನ್ನು ಎದುರಿಸಲು ಸಜ್ಜಾಗಬೇಕು. ಡಾ. ಬಿ.ಆರ್. ಅಂಬೇಡ್ಕರ್ ಎಲ್ಲ ಅಧಿಕಾರದ ಕೀಲಿ ಕೈ ರಾಜಕೀಯದಲ್ಲಿದೆ ಎಂಬ ಮಾತನ್ನು ಅಹಿಂದ ವರ್ಗಗಳು ಮರೆಯಬಾರದು. ಅಧಿಕಾರ ಇಲ್ಲದಿದ್ದರೆ ಸಂಘಟನೆ, ಹೋರಾಟದ ಹಾದಿ ಮೂಲಕ ಹಕ್ಕುಗಳನ್ನು ಪಡೆದುಕೊಳ್ಳಬಹುದು. ಈ ಲೋಕಸಭಾ ಚುನಾವಣೆಯು ಸಂವಿಧಾನ, ಸಾಮಾಜಿಕ ನ್ಯಾಯ ವರ್ಸಸ್ ಕೋಮುವಾದ, ಮನುವಾದವಾಗಿದೆ ಎಂದು ಹೇಳಿದರು.

ಸಭೆಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ರಾಜು, ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಡಾ.ಪುಷ್ಪ ಅಮರನಾಥ್, ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ದರ್ಶನ್ ಧ್ರುವನಾರಾಯಣ್, ವಿಧಾನ ಪರಿಷತ್ತಿನ ಸದಸ್ಯ ಡಾ.ಡಿ.ತಿಮಯ್ಯ, ಮಾಜಿ ಶಾಸಕ ನರೇಂದ್ರ, ಕಳಲೆ ಕೇಶವಮೂರ್ತಿ, ಸುನಿತಾ ವೀರಪ್ಪಗೌಡ, ವಿಧಾನಪರಿಷತ್ತಿನ ಮಾಜಿ ಸದಸ್ಯ ಧರ್ಮಸೇನಾ, ಮರಿಸ್ವಾಮಿ ಇತರರು ಹಾಜರಿದ್ದರು.

ದಿವಂಗತ ಧ್ರುವನಾರಾಯಣ್ ಅವರ ಭಾವಚಿತ್ರ ಹಾಕದ್ದಕ್ಕೆ ಆಕ್ರೋಶ

ಕಾರ್ಯಕ್ರಮದ ವೇದಿಕೆಯಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿದ್ದ ದಿ.ಆರ್.ಧ್ರುವನಾರಾಯಣ ಅವರ ಭಾವಚಿತ್ರ ಇಲ್ಲದಿರುವುದನ್ನು ಗಮನಿಸಿದ ಅವರ ಅಭಿಮಾನಿಗಳು ಆಕ್ಷೇಪ ವ್ಯಕ್ತಪಡಿಸಿದರು. ಇದರಿಂದ ಸಭೆಯಲ್ಲಿ ಕೆಲಕಾಲ ಗೊಂದಲ ಉಂಟಾಯಿತು. ಆರ್.ಧ್ರುವನಾರಾಯಣ ಅವರ ನಿಧನದ ನಂತರ ಅವರು ಪಕ್ಷಕ್ಕಾಗಿ ಸಲ್ಲಿಸಿದ ಸೇವೆಯನ್ನು ಮರೆಯಲಾಗುತ್ತಿದೆ. ಮೊದಲು ಅವರ ಭಾವಚಿತ್ರ ಇಟ್ಟು ಆ ನಂತರ ಕಾರ್ಯಕ್ರಮ ನಡೆಸಿ ಎಂದು ಪಟ್ಟು ಹಿಡಿದು ಪ್ರತಿಭಟನೆಗಿಳಿದರು. ಈ ವೇಳೆ ಸಚಿವ ಡಾ.ಎಚ್.ಸಿ.ಮಹದೇವಪ್ಪ ಸಮಾಧಾನಪಡಿಸಲು ಮುಂದಾದರು. ಅದಕ್ಕೆ ಜಗ್ಗದ ಕಾರ್ಯಕರ್ತರು ವಾಗ್ವಾದ ನಡೆಸಿ, ಕಾಂಗ್ರೆಸ್ ಕಚೇರಿಯಿಂದ ಹೊರಬಂದು ಘೋಷಣೆಗಳ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಆರ್.ಧ್ರುವನಾರಾಯಣ್ ಭಾವಚಿತ್ರ ಇರಿಸಿ, ಮೌನಾಚರಣೆ ಮಾಡುವ ಮೂಲಕ ಕಾರ್ಯಕರ್ತರನ್ನು ಸಮಾಧಾನಪಡಿಸಿ, ಸಭೆ ಮುಂದುವರೆಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

18.10.2023 ಬುಧವಾರ, ಮಳೆ ನಕ್ಷತ್ರ: ಚಿತ್ತ, 11.10.2023 ರಿಂದ 24.10.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಶುಕ್ಲ ಪಕ್ಷ, ತಿಥಿ: ಚೌತಿ, ನಕ್ಷತ್ರ: ಅನೂರಾಧ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಮೈಸೂರು ವಿಶ್ವವಿದ್ಯಾನಿಲಯ :** 103ನೇ ವಾರ್ಷಿಕ ಘಟಿಕೋತ್ಸವ, ಅಧ್ಯಕ್ಷತೆ : ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್, ಘಟಿಕೋತ್ಸವ ಭಾಷಣ : ರಕ್ಷಣಾ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆ ವಿಶ್ರಾಂತ ಮಹಾನಿರ್ದೇಶಕ ಪದ್ಮವಿಭೂಷಣ ಡಾ. ವಾಸುದೇವ ಕೆ. ಆತ್ರೆ, ಉಪಸ್ಥಿತರು : ಉನ್ನತ ಶಿಕ್ಷಣ ಸಚಿವರು ಹಾಗೂ ಸಮಕುಲಾಧಿಪತಿ ಡಾ. ಎಂ.ಸಿ. ಸುಧಾಕರ್, ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಗೌರವ ಡಾಕ್ಟರೇಟ್ ಪುರಸ್ಕೃತರು : ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ವಿಶ್ರಾಂತ ವೈದ್ಯಕೀಯ ಪ್ರಾಧ್ಯಾಪಕ ನಾಡೋಜ ಡಾ. ಪಿ.ಎಸ್. ಶಂಕರ್, 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ. ಗಣಪತಿ (ಕೆಬಿಜಿ), ಅಂತರರಾಷ್ಟ್ರೀಯ ಮಾಜಿ ಕ್ರಿಕೆಟ್ ಆಟಗಾರ ಜಾವಗಲ್ ಶ್ರೀನಾಥ್, ಸ್ಥಳ: ಮೈಸೂರು ವಿವಿ ಕ್ರಾಫರ್ಡ್ ಭವನ, ಬೆಳಗ್ಗೆ 10.30ಕ್ಕೆ.

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್ :** 26ನೇ ವರ್ಷದ ಶರನ್ನವರಾತ್ರಿ ಮಹೋತ್ಸವ, ಬೆಳಗ್ಗೆ 8.30ರಿಂದ ಮಹಾಭಿಷೇಕ, ಶ್ರೀ ಕೂಷ್ಮಾಂಡದೇವಿ, ಶ್ರೀ ವಿದ್ಯಾ ಶಬರಿದುರ್ಗಾ ಪೂಜಾ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀಚಕ್ರಾರ್ಚನೆ, ಶ್ರೀ ಸುಂದರಕಾಂಡ ಪಾರಾಯಣ, ಸಂಜೆ 5.30 ರಿಂದ ಶ್ರೀ ದಶಗಣಪತಿ ಹೋಮ, ಸ್ಥಳ: ತ್ರಯೀನ್ಯಾಸ್, ಜಯಲಕ್ಷ್ಮಿಪುರಂ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀದೇವಿ ನವರಾತ್ರಿ ಕಾರ್ಯಕ್ರಮ, ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ದಿವ್ಯ ಸಾನ್ನಿಧ್ಯ, ಬೆಳಗ್ಗೆ 9ರಿಂದ ಶ್ರೀದೇವಿ ಪಲ್ಲಕ್ಕಿ ಉತ್ಸವ, ಕುಮಾರಿ ಪೂಜೆ, ಶ್ರೀ ಚಕ್ರಪೂಜೆ, ನವಾವರಣ ಪೂಜೆ, ವಿದ್ವಾನ್ ಲಾಲ್‌ಗುಡಿ ಬಿ.ಜೆ.ಆರ್. ಕೃಷ್ಣನ್ ಮತ್ತು ವಿದುಷಿ ಲಾಲ್‌ಗುಡಿ ವಿಜಯಲಕ್ಷ್ಮಿ ಅವರಿಂದ ಕರ್ನಾಟಕ ದ್ವಂದ್ವ ಪಿಟೀಲು ಗಾಯನ, ಮಧ್ಯಾಹ್ನ 12 ಗಂಟೆಗೆ ಅನ್ನಾರ್ಚನೆ, ಮೀನಾಕ್ಷಿ ಪೂಜೆ, ಹೋಮ ಪೂರ್ಣಾಹುತಿ, ಸಂಜೆ 4 ಗಂಟೆಗೆ ಮಹಾಮಂಗಳಾರತಿ, ಡೋಲೋತ್ಸವ, ಸುನಾಸಿನಿ ಪೂಜೆ, ಸಂಜೆ 6 ಗಂಟೆಗೆ ಶ್ರೀ ಸ್ವಾಮೀಜಿ ಅವರಿಂದ ದೇವಿ ಭಜನೆ ಮತ್ತು ಪ್ರವಚನ, ಸ್ಥಳ: ನಾದಮಂಟಪ, ಆಶ್ರಮದ ಆವರಣ.

■ **ಸ್ವರ್ಣ ನೃಸಿಂಹದತ್ತ ಸಾಯಿ ಪೀಠಿಕ ಸೇವಾ ಟ್ರಸ್ಟ್ :** ಶರನ್ನವರಾತ್ರಿ ಪೂಜಾ ಮಹೋತ್ಸವ, ಆಶೀರ್ವಾದ: ಶ್ರೀ ವೆಂಕಟಚಲ ಅವಧೂತ ಗುರು ಮಹಾರಾಜರು, ಸಾನ್ನಿಧ್ಯ: ಶ್ರೀ ಅರ್ಜುನ ಅವಧೂತರು, ಪುರುಷ ಸೂಕ್ತ, ವಿಷ್ಣು ಸಹಸ್ರನಾಮ ಹೋಮ, ಸ್ಥಳ: ಶ್ರೀರಾಮಮಂದಿರ, ಜಯನಗರ, ಬೆಳಗ್ಗೆ 10ಕ್ಕೆ

■ **ಶ್ರೀ ಸುಬ್ರಾಯದಾಸರ ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನ:** ನವರಾತ್ರಿ ಬ್ರಹ್ಮೋತ್ಸವ, ಚತುರ್ಥಿ, ಬೆಳಗ್ಗೆ ಬೃಹತೀ ಸಹಸ್ರನಾಮ ಹೋಮ, ಸಂಜೆ ಶೇಷ ವಾಹನೋತ್ಸವ, ಸ್ಥಳ: ದೇವಸ್ಥಾನದ ಆವರಣ, ಕೃಷ್ಣವಿಲಾಸ ರಸ್ತೆ, ದೇವರಾಜ ಮೊಹಲ್ಲಾ.

■ **ಶ್ರೀ ಚಂದ್ರಮೌಳೀಶ್ವರಸ್ವಾಮಿ ದೇವಸ್ಥಾನ:** ಶರನ್ನವರಾತ್ರಿ ಉತ್ಸವ, ಸಪ್ತಪತಿ ಪಾರಾಯಣ, ಸುಮಂಗಲಿಯರಿಂದ ಕುಂಕುಮಾರ್ಚನೆ, ಪೂರ್ಣಾಹುತಿ, ಶ್ರೀ ಮಹಾಗಣಪತಿ ಹೋಮ, ವೈಷ್ಣವಿ ಅಲಂಕಾರ, ಸ್ಥಳ: ದೇವಸ್ಥಾನದ ಪ್ರಾಂಗಣ, ವಿ.ವಿ.ಮೊಹಲ್ಲಾ, ಬೆಳಗ್ಗೆಯಿಂದ.

■ **ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ :** 5 ಮತ್ತು 6ನೇ ವಾರ್ಷಿಕ ಘಟಿಕೋತ್ಸವ, ಅಧ್ಯಕ್ಷತೆ : ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್, ಉಪಸ್ಥಿತರು : ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್, ಮುಖ್ಯ ಅತಿಥಿಗಳು : ಕರ್ನಾಟಕ ರಾಜ್ಯ ಸಂಸ್ಕೃತ ವಿಶ್ವವಿದ್ಯಾಲಯ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಸ್ವಾಗತ ಭಾಷಣ : ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ನಾಗೇಶ್ ವಿ. ಬೆಟ್ಟಕೋಟೆ, ಸ್ಥಳ: ವಿಜ್ಞಾನ ಭವನ, ಮೈಸೂರು ವಿಶ್ವವಿದ್ಯಾಲಯ, ಸಂಜೆ 4ಕ್ಕೆ.

■ **ಶ್ರೀ ಮುಕ್ಕಣ್ಣೇಶ್ವರ ಸ್ವಾಮಿ ದೇವಸ್ಥಾನ:** 55ನೇ ವರ್ಷದ ನವರಾತ್ರಿ ಪೂಜಾ ಕಾರ್ಯಕ್ರಮ, ಗರುಡವಾಹನಾಲಂಕಾರ, ಸಂಜೆ 5 ಗಂಟೆಗೆ.

■ **ಶ್ರೀ ವ್ಯಾಸರಾಜ ಮಠ :** ನವರಾತ್ರಿ ಪ್ರಯುಕ್ತ ವಿದ್ವಾನ್ ಎಸ್.ಎಂ. ಪ್ರಣವಾಚಾರ್ಯ ಅವರಿಂದ 'ಶ್ರೀನಿವಾಸ ಕಲ್ಯಾಣ ಪ್ರವಚನ' ಸ್ಥಳ: ಶ್ರೀ ವ್ಯಾಸರಾಜ ಮಠ ಸೋಸಲೆ ಶ್ರೀ ವ್ಯಾಸತೀರ್ಥ ವಿದ್ಯಾಪೀಠ, ಕೃಷ್ಣಮೂರ್ತಿಪುರಂ, ಸಂಜೆ 6 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ದಸರಾ ವಿಶೇಷ ಗೀತಾರಾಧನ, 6.30 ಮೈಸೂರು ದಸರಾದಲ್ಲಿ ಇಂದು, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ್, ಸಂಕಲನ–ಎಸ್. ಲಕ್ಷ್ಮೀನಾರಾಯಣ, 6.35 ಮತ್ತು ಸಂಜೆ 6.10ಕ್ಕೆ ಜಿ.ಎಸ್.ಎಸ್. ಯೋಗದ ಮಾತು, ಪ್ರಸ್ತುತಿ–ಡಿ. ಶ್ರೀಹರಿ, 6.40 ಪದ ಸಂಸ್ಕೃತಿ, ಪ್ರಸ್ತುತಿ– ಡಾ.ಟಿ.ವಿ. ಸತ್ಯನಾರಾಯಣ, 7.15 ಭಾವಗೀತೆಗಳು– ವಿಕಾಸ್ ಕೆ ವಸಿಷ್ಠ, ಬಿ.ಜೆ. ಭರತ್, 9.05 ಮೈಸೂರು ಮಹಲುಗಳು –ರೂಪಕ ಸರಣಿ, ಪ್ರಸ್ತುತಿ– ಡಾ. ಮೈಸೂರು ಉಮೇಶ್, 9.15 ವೃತ್ತಿ ಮಾರ್ಗದರ್ಶನ–ಮನೋ ವೈದ್ಯಕೀಯ ವಿಜ್ಞಾನ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ.ಬಿ.ಎನ್. ರವೀಶ್ ಅವರೊಂದಿಗೆ ಮಾತುಕತೆ, 10.00 ದಸರಾ ವಿಶೇಷ ಕಥಾ ಕಾಲಕ್ಷೇಪ – "ಶುಂಭ ನಿಶುಂಭ ಸಂಹಾರ", ನಡೆಸಿಕೊಡುತ್ತಾರೆ ವಿ. ಮಾಲಿನಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 "ಕನಕ–ಜಾನಕಿ" ತಾಳಮದ್ದಲೆಯ ರೂಪಕ ಸರಣಿ, ಪರಿಕಲ್ಪನೆ ಮತ್ತು ಪ್ರಸ್ತುತಿ– ದಿವಾಕರ ಹೆಗಡೆ, 1.20 ಭಾವಗೀತೆಗಳು–ರಶ್ಮಿ ಬಿನು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಎಂ.ಎಸ್. ಗೋಪಾಲಕೃಷ್ಣನ್ ಮತ್ತು ಎಂ.ಎಸ್. ನರ್ಮದಾ–ಯುಗಳ ಪಿಟೀಲು, 4.00 ಮಹಿಳಾರಂಗ–ಸ್ತ್ರೀ ಚೇತನ, ಭಾಗವಹಿಸುವವರು–ಆಪ್ತ ಸಮಾಲೋಚಕಿ ಸರಳಾ ನಟರಾಜ್, ಪ್ರಸ್ತುತಿ– ಅಬ್ದುಲ್ ರಶೀದ್, 4.45 ಹಿಂದಿ ಪಾಠ–ಅನೂರಾಧಾಮೂರ್ತಿ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಕಿಸಾನ್ ವಾಣಿ–ಜೈವಿಕ ಕೀಟನಾಶಕಗಳ ಬಳಕೆ ಕುರಿತು ಡಾ.ಎಲ್. ವಿಜಯ್ ಕುಮಾರ್ ಅವರೊಂದಿಗೆ ಸಂದರ್ಶನ, 9.30 ಶೋಭಾ ಗುರ್ಟು–ಗಾಯನ, 10.00 ಜನಪದ ಸಂಗೀತ–ಮೈಸೂರು ಜಿ. ಗುರುರಾಜ್ ಮತ್ತು ಸಂಗಡಿಗರು, 10.30 ಸವಿನೆನಪು

ಮೈಸೂರು ದಸರಾ ಕಾರ್ಯಕ್ರಮ

■ **ಅರಮನೆ ಆವರಣ**



ಸಂಜೆ5.30 ರಿಂದಅರ್ಪಾ ವಿನೋದ್ ಮೆನನ್ ಮತ್ತು ತಂಡದಿಂದ ಭರತನಾಟ್ಯ, ಸಂಜೆ 6 ರಿಂದ ಡಾ. ಕಿಕ್ಕೇರಿ ಕೃಷ್ಣಮೂರ್ತಿ ಮತ್ತು ಡಾ. ಅಪ್ಪಗೆರೆ ತಿಮ್ಮರಾಜು ಮತ್ತು ತಂಡದಿಂದ ಕನ್ನಡವೇ ಸತ್ಯ ಭಾವಗೀತೆ ಹಾಗೂ ಜನಪದ ಗೀತೆಗಳ ಸಂಭ್ರಮ, ಸಂಜೆ 7 ರಿಂದ ಪೊಲೀಸ್ ಬ್ಯಾಂಡ್, ಸಂಜೆ 8 ರಿಂದ ಪದ್ಮಶ್ರೀ ಶುಭಾ ಮುದ್ಗಲ್ ಅವರಿಂದ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ.

■ **ಜಗನ್ಮೋಹನ ಅರಮನೆ ವೇದಿಕೆ**

ಸಂಜೆ 6 ರಿಂದ ಗದಗದ ಶ್ರೀ ಹುಲಿಗಮ್ಮದೇವಿ ಕ್ಲಾರಿಯೋನೆಟ್ ಕ್ಲಾಸಿಕಲ್ ಸಾಂಸ್ಕೃತಿಕ ಬಳಗದಿಂದ ಕ್ಲಾರಿಯೋನೆಟ್, ಸಂಜೆ 6.45 ರಿಂದ ಬೆಂಗಳೂರಿನ ಜಯಸಿಂಹ ಮತ್ತು ತಂಡದಿಂದ ಜನಪದ ಗಾಯನ, ಸಂಜೆ 7.30 ರಿಂದ ಗದಗದ ಉಷಾ ಯು. ಕಾರಂತ ಮತ್ತು ತಂಡದಿಂದ ಹಿಂದೂಸ್ಥಾನಿ ಸಂಗೀತ, ರಾತ್ರಿ 8.30 ರಿಂದ ಮೈಸೂರಿನ ಕಲ್ಪಿತಾ ಪ್ರಶಾಂತ್, ನೃತ್ಯವರ್ಣಂ ಅವರಿಂದ ನೃತ್ಯರೂಪಕ

■ **ಕರ್ನಾಟಕ ಕಲಾಮಂದಿರ ವೇದಿಕೆ**

ಸಂಜೆ 6ರಿಂದ ಹಾಸನದ ಪುಟ್ಟಮ್ಮಣಿ ಮತ್ತು ತಂಡದಿಂದ ಲಂಬಾಣಿ ನೃತ್ಯ, ಹಾಸನದ ಶಿವಮ್ಮ ಅವರಿಂದ ಸೋಮನ ಕುಣಿತ, ಸಂಜೆ 6.45 ರಿಂದ ಆನಂದಕುಮಾರ್ ಕಂಬಳಿಹಾಳ ಅವರಿಂದ ವಚನಗಾಯನ, ಸಂಜೆ 7.30 ರಿಂದ ಡಾ. ಆರ್. ರಾಜ್‌ಕುಮಾರ್ ಮತ್ತು ತಂಡದಿಂದ ನಾದಸ್ವರ, ರಾತ್ರಿ 8 ರಿಂದ ಮೈಸೂರಿನ ಶ್ರೀ ನಟರಾಜ ಪರ್ಫಾರ್ಮಿಂಗ್ ಆರ್ಟ್ಸ್ ಸೆಂಟರ್‌ನ ಎಂ.ಬಿ. ನಾಗಶ್ರೀ ಅವರಿಂದ ನೃತ್ಯರೂಪಕ, ರಾತ್ರಿ 8.30 ರಿಂದ ಧಾರವಾಡದ ಗೊಂಬೆ ಮನೆ ವತಿಯಿಂದ ತೊಗಲು ಗೊಂಬೆ.

■ **ಗಾನಭಾರತಿ ವೇದಿಕೆ**

ಸಂಜೆ 5.30 ರಿಂದ ನಾಗಮಂಗಲದ ಎ.ಎಂ. ದಿಶಾ ಮತ್ತು ತಂಡದವರಿಂದ ಭರತನಾಟ್ಯ, ಸಂಜೆ 6 ರಿಂದ ಮೈಸೂರಿನ ಅಕ್ಷತಾ ಕಲಾವೃಂದದವರಿಂದ ಸುಗಮ ಸಂಗೀತ, ಸಂಜೆ 6.45 ರಿಂದ ವಿದುಷಿ ಜಾಹ್ನವಿ ಎಂ ಮತ್ತು ವಿದುಷಿ ಮೋನಿಕಾ ಡಿ.ಎಲ್. ಅವರಿಂದ ಭರತನಾಟ್ಯ, ಸಂಜೆ 7.30 ರಿಂದ ಕೋಲಾರದ ಸಿ.ನಾರಾಯಣಸ್ವಾಮಿ ಅವರಿಂದ ಶಾಸ್ತ್ರೀಯ ಸಂಗೀತ, ರಾತ್ರಿ 8.30 ರಿಂದ ಮಂಜೂ ಭೈರವಿ ಎಲ್. ಅವರಿಂದ ಸಮೂಹ ನೃತ್ಯ

■ **ನಾದಬ್ರಹ್ಮ ಸಂಗೀತಾ ಸಭಾ ವೇದಿಕೆ**

ಸಂಜೆ 6 ಬೆಳಗಾವಿಯ ಇಸ್ಮಾಯಿಲ್ ಸಾಬ್ ನದಾಫ್, ಗಜ್‌ಬರ್ ಸಾಬ್ ಅವರಿಂದ ರಿವಾಯತ್ ಪದ, ಸಂಜೆ 6.45 ರಿಂದ ಗೌರವ್ ಸುಧಾಮುರಳಿ ಅವರಿಂದ ಸುಗಮ ಸಂಗೀತ, ಸಂಜೆ 7.30 ರಿಂದ ಶಿವೋಹಃ ಸ್ಕೂಲ್ ಆಫ್ ಪರ್ಫಾರ್ಮಿಂಗ್ ಆರ್ಟ್ಸ್‌ನ ಅನಿಲ್ ವಿ. ಅಯ್ಯರ್ ಅವರಿಂದ ಭರತನಾಟ್ಯ, ರಾತ್ರಿ 8.30 ರಿಂದ ಆರ್. ರಘುನಾಥ್ ಅವರಿಂದ ಕನಕ ವೈಭವ : ದಾಸರ ಪದಗಳು.

■ **ಚಿಕ್ಕ ಗಡಿಯಾರ ವೇದಿಕೆ**

ಸಂಜೆ 6ರಿಂದ ಕಿರಣ್ ಮತ್ತು ತಂಡದಿಂದ ಡೊಳ್ಳು ಕುಣಿತ, ಮಂಡ್ಯದ ಕುಮಾರ್ ಮತ್ತು ತಂಡದಿಂದ ತಮಟೆ ವಾದನ, ಸಂಜೆ 6.45 ರಿಂದ ಮೈಸೂರಿನ ಸಲ್ಮಾ ಮತ್ತು ತಂಡದಿಂದ ಜಾನಪದ ಗೀತೆ, ಸಂಜೆ 7.30 ರಿಂದ ಬೆಂಗಳೂರಿನ ಕರ್ನಾಟಕ ರಾಜ್ಯ ಸುಡುಗಾಡು ಸಿದ್ದ ಮಹಾಸಂಘದಿಂದ ಮೋಡಿಯಾಟ (ಕೈಚಳಕ), ರಾತ್ರಿ 8.30 ರಿಂದ ಕೊಪ್ಪಳದ ಮೆಹಬೂಬ್ ಖಿಲ್ಲೇದಾರ ಅವರಿಂದ ಜನಪದ ಗಾಯನ.

■ **ಪುರಭವನ ವೇದಿಕೆ**

ಬೆಳಗ್ಗೆ 10.30ರಿಂದ ತುಮಕೂರಿನ ಶ್ರೀ ನಾಗಾರ್ಜುನ ಕಲಾಸಂಘದಿಂದ ಪೌರಾಣಿಕ ನಾಟಕ: ಶ್ರೀಕೃಷ್ಣರಾಯಭಾರ, ಮಧ್ಯಾಹ್ನ 3 ರಿಂದ ಜಮಖಂಡಿಯ ಸಂಜಯ ಅಶೋಕ ಅಂಬಲೆ ಅವರಿಂದ ಭಕ್ತಿ ಪ್ರಧಾನ ನಾಟಕ: ಭಾಗ್ಯವಂತಿದೇವಿ, ಸಂಜೆ 6ರಿಂದ ರಾಜು ಬಿ.ಎಸ್. ಮತ್ತು ತಂಡದಿಂದ ಪೌರಾಣಿಕ ನಾಟಕ : ದಕ್ಷ ಸುತೆಯರ ಕಲ್ಯಾಣ.

■ **ಕಿರುರಂಗಮಂದಿರ ವೇದಿಕೆ**

ಮಧ್ಯಾಹ್ನ 2ರಿಂದ ಮೈಸೂರಿನ ಅಗ್ರಗಣ್ಯ ಕಲಾತಂಡದಿಂದ ಸುಗಮ ಸಂಗೀತ, ಮಧ್ಯಾಹ್ನ 3 ರಿಂದ ವಿಘ್ನೇಶ್ವರ ನಾಟಕ ಸಂಘದಿಂದ ನಾಟಕ: ಬಸ್ ಕಂಡಕ್ಟರ್, ಸಂಜೆ 7 ರಿಂದ ಹಾಸನದ ಹುಲಿವಾನ ಸ್ಕೂಲ್ ಆಫ್ ಡ್ರಾಮಾ ಅವರಿಂದ ನಾಟಕ : ಕಡವೆ ಬೇಟೆ.

■ **ರಮಾಗೋವಿಂದ ರಂಗಮಂದಿರ ವೇದಿಕೆ**

ಸಂಜೆ 5.30 ರಿಂದ ಚನ್ನರಾಯಪಟ್ಟಣದ ಎಸ್.ಎಸ್.ನಿಂಗಪ್ಪ ಅವರಿಂದ ರಂಗ ಕುಣಿತ, ಸಂಜೆ 6.30 ರಿಂದ ಬೆಂಗಳೂರಿನ ಕಲಾದರ್ಪಣ ಆರ್ಟ್ಸ್ ರಿಫ್ಲೆಕ್ಷನ್ ಹೇಮಾ ವಿನಾಯಕ್ ಪಾಟೀಲ್ ಅವರಿಂದ ಕಾವ್ಯ ಕುಂಚ ಗಾಯನ, ಸಂಜೆ 7.30 ರಿಂದ ಹೆಗ್ಗೋಡು ಡಾ. ಎಂ. ಗಣೇಶ್ ಅವರಿಂದ ನಾಟಕ : ರೊಟ್ಟಿಯ ಸಲುವಾಗಿ ಇಷ್ಟೆಲ್ಲಾ, ಮೂಲಕಥೆ : ಪಿ. ಲಂಕೇಶ್.

■ **ನಟನ ರಂಗಮಂದಿರ**

ಸಂಜೆ 5ರಿಂದ ದಿವ್ಯ ಸಚ್ಚಿದಾನಂದ ಅವರಿಂದ ಸುಗಮ ಸಂಗೀತ, ಸಂಜೆ 6.30 ರಿಂದ ಕೊಡವೂರು ನೃತ್ಯಾನಿಕೇತನ ಅವರಿಂದ ನಾಟಕ : ನಾರಸಿಂಹ,

ಶ್ರೀಕಂಠೇಶ್ವರ ದೇವಸ್ಥಾನ

■ **ನಂಜನಗೂಡು ವೇದಿಕೆ**

ಸಂಜೆ 6ರಿಂದ ಮೈಸೂರಿನ ಮಹದೇವು ಮತ್ತು ತಂಡ ಕೆಂಪಿಸಿದ್ದನಹುಂಡಿ ಅವರಿಂದ ಕಂಸಾಳೆ, ನರಗುಂದದ ಮಹಂತೇಶ್ ವಾಲಿ ಮತ್ತು ತಂಡದಿಂದ ಮಹಿಳಾ ಡೊಳ್ಳು, ಸಂಜೆ 6.45ರಿಂದ ಚಾಮರಾಜನಗರದ ಸೋಬಾನೆ ಪದ ಕಲಾವಿದರಿಂದ ಸೋಬಾನೆ ಪದ, ಸಂಜೆ 7.30ರಿಂದ ರಾಮಚಂದ್ರ ಹಡಪದ ಅವರಿಂದ ಸೂಫಿ ಸಂಗೀತ, ರಾತ್ರಿ 8.30ರಿಂದ ಹೈದರಾಬಾದ್‌ನ ಡಾ. ಬಿಂದು ಅಭಿನಯ್ ಅವರಿಂದ ಕೂಚುಪುಡಿ ನೃತ್ಯ

ಮಹಿಳಾ ಮತ್ತು ಮಕ್ಕಳ ದಸರಾ–2023

■ **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮೈಸೂರು:** ಮಹಿಳೆಯರಿಗೆ ಆಟೋಟ ಸ್ಪರ್ಧೆ, ಬೆಳಗ್ಗೆ 10ಕ್ಕೆ ಮಹಿಳೆಯರಿಗೆ ರಾಗಿ ಬೀಸುವ ಸ್ಪರ್ಧೆ, ಬೆ. 10.30ರಿಂದ ಮಹಿಳೆಯರಿಗೆ ಭತ್ತ ಕುಟ್ಟುವ ಸ್ಪರ್ಧೆ, ಬೆ. 11 ರಿಂದ ಮಹಿಳೆಯರಿಗೆ ಹೂ ಕಟ್ಟುವ ಸ್ಪರ್ಧೆ, ಬೆ. 11.30 ರಿಂದ ಮಹಿಳೆಯರಿಗೆ ಒಲೆ ರಹಿತ ಅಡುಗೆ, ಮ. 12ರಿಂದ ಮಹಿಳೆಯರಿಗೆ ವೇಷಭೂಷಣ ಸ್ಪರ್ಧೆ, ಮ. 2.30ರಿಂದ ಅಂಗನವಾಡಿ ಕಾರ್ಯಕರ್ತೆಯರಿಂದ ಸಾಂಸ್ಕೃತಿಕ ಕಾರ್ಯಕ್ರಮ, ಮ.3.30 ರಿಂದ ಶ್ರೀಮತಿ ಸುಧಾ ಬರಗೂರು ಹಾಸ್ಯ ಕಲಾವಿದರಿಂದ ಹಾಸ್ಯ ಸಂಜೆ, ಸಂಜೆ 4.30 ರಿಂದ ಸೋನಿಯಾ ಪೋದುವಾಳ್ ಅವರಿಂದ ಭರತನಾಟ್ಯ, ಸಂಜೆ 5.30ರಿಂದ ಮೈಸೂರಿನ ಕೆ.ಪಿ. ಪುಷ್ಪಲತಾ ನಾರಾಯಣ್ ಅವರಿಂದ ಭಾವಗೀತೆ, ಭಕ್ತಿಗೀತೆ, ಹಾಡುಗಾರಿಕೆ, ಸ್ಥಳ: ಜೆ.ಕೆ.ಮೈದಾನ.

ನಾಡಕುಸ್ತಿ ಪಂದ್ಯಾವಳಿ

■ **ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ:** ದಸರಾ ಮಹೋತ್ಸವ ಅಂಗವಾಗಿ ನಾಡಕುಸ್ತಿ ಪಂದ್ಯಾವಳಿ, ದಸರಾ ಕಂಠೀರವ, ದಸರಾ ಕೇಸರಿ, ದಸರಾ ಕಿಶೋರ, ದಸರಾ ಕಿಶೋರಿ ಮತ್ತು ದಸರಾ ಕುಮಾರ್ ಪ್ರಶಸ್ತಿಗಾಗಿ ಪಂದ್ಯಾವಳಿ, ಸ್ಥಳ: ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣ, ವಸ್ತು ಪ್ರದರ್ಶನ ಆವರಣ, ದೊಡ್ಡಕೆರೆ ಮೈದಾನ, ಬೆಳಗ್ಗೆ 8 ಗಂಟೆಯಿಂದ.

ದಸರಾ ಚಲನ ಚಿತ್ರೋತ್ಸವ

■ **ಐನಾಕ್ಸ್ (ಮಾಲ್ ಆಫ್ ಮೈಸೂರ್):** ಕನ್ನಡ ಚಿತ್ರಗಳು: ಬೆಳಗ್ಗೆ 10 ಗಂಟೆಗೆ–ಅಂತ, ಮಧ್ಯಾಹ್ನ 1ಕ್ಕೆ–ಪದವಿಪೂರ್ವ, ಸಂಜೆ 4 ಗಂಟೆಗೆ–ಹೆಣ್ಣು ಭ್ರೂಣ, ಸಂಜೆ 7ಕ್ಕೆ–ಮಠ

■ **ಭಾರತೀಯ ಚಿತ್ರಗಳು:** ಬೆಳಗ್ಗೆ 10.15ಕ್ಕೆ ಮನುಷ್ಯರು ಸಾರ್ ಮನುಷ್ಯರು, 1.15ಕ್ಕೆ ಋತುಮತಿ, ಸಂಜೆ 4.15ಕ್ಕೆ ಕೊರಮ್ಮ, ಸಂಜೆ 7.15ಕ್ಕೆ ಹಕ್ಕಿಗಳ ಕನಸು.

■ **ವಿಶ್ವ ಚಿತ್ರಗಳು:** ಬೆಳಗ್ಗೆ 10.30ಕ್ಕೆ ವೈಲ್ಡ್ ಸ್ಟ್ರಾಬೆರೀಸ್, ಮಧ್ಯಾಹ್ನ 1.30ಕ್ಕೆ ದ ವೇಲ್, ಸಂಜೆ 4.30ಕ್ಕೆ ದಿ ವಿಸ್ಲರ್ಸ್, ಸಂಜೆ 7.30ಕ್ಕೆ ಟ್ರಯಾಂಗಲ್ ಆಫ್ ಸ್ಯಾಡ್ನೆಸ್

ಡಿಆರ್‌ಸಿ (ಬಿ.ಎಂ.ಹ್ಯಾಬಿಟೆಟ್ ಮಾಲ್)

■ **ಕನ್ನಡ ಚಿತ್ರಗಳು:** ಬೆಳಗ್ಗೆ 10 ಗಂಟೆಗೆ–ಲವ್ 360, ಮಧ್ಯಾಹ್ನ 1 ಗಂಟೆಗೆ ಆದಿವಾಸಿ, ಸಂಜೆ 4 ಗಂಟೆಗೆ ಟೇಲ್ಸ್ ಆಫ್ ಮಹಾನಗರ, ಸಂಜೆ 7 ಗಂಟೆಗೆ ಇಕಿರು

■ **ಕಿರು ಚಿತ್ರಗಳು:** ಸಂಜೆ 4.15ಕ್ಕೆ ತ್ರಿಶಂಕು, ಅಸಲಿ, ನೀ ಯಾರು? ಸಂಜೆ 7.15ಕ್ಕೆ ಉ...!, ಮುತ್ತಯ್ಯ

■ **ಆಹಾರ ಮೇಳ:** ಬೆಳಗ್ಗೆ 10ರಿಂದ ರಾತ್ರಿಯವರೆಗೆ, ವೈವಿಧ್ಯಮಯ ತಿಂಡಿ–ತಿನಿಸುಗಳ ಮಾರಾಟ, ಸ್ಥಳ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನ.

■ **ವಸ್ತು ಪ್ರದರ್ಶನ:** ಮಧ್ಯಾಹ್ನ 3 ಗಂಟೆಯಿಂದ ರಾತ್ರಿಯವರೆಗೂ, ಸ್ಥಳ: ದೊಡ್ಡಕೆರೆ ಮೈದಾನ

■ **ಫಲಪುಷ್ಪ ಪ್ರದರ್ಶನ:** ಬೆಳಗ್ಗೆ 10ರಿಂದ ರಾತ್ರಿವರೆಗೂ ಸ್ಥಳ: ಕುಪ್ಪಣ್ಣ ಪಾರ್ಕ್, ನಜರ್‌ಬಾದ್.

ಮೈಸೂರು ಮಿತ್ರ ಬುಧವಾರ 18 ಅಕ್ಟೋಬರ್ 2023

ಬೆಂಗಳೂರು ವಿವಿ ಗೌರವ ಡಾಕ್ಟರೇಟ್ ಸ್ವೀಕರಿಸಿದ ಹೆಚ್.ಡಿ.ದೇವೇಗೌಡರು



ಶಿಕ್ಷಣ ಬರೀ ಅಕ್ಷರ ಜ್ಞಾನವಲ್ಲ; ಸಂಸ್ಕಾರ ಕಲ್ಪಿಸುವುದು ಅದರ ಭಾಗವಾಗಿದೆ: ಹೆಚ್‌ಡಿಡಿ

ಬೆಂಗಳೂರು,ಅ.17(ಕೆಎಂಶಿ)–ವಿದ್ಯೆ ಮತ್ತು ಸಂಸ್ಕಾರ ಬದುಕಿನ ಬೇರುಗಳಿದ್ದಂತೆ. ಈ ಎರಡೂ ಒಟ್ಟಿಗೆ ಬೆಳೆದಾಗ ಮಾತ್ರ ಬದುಕಿಗೊಂದು ಸಾರ್ಥಕತೆ ಸಿಗುತ್ತೆ ಶಿಕ್ಷಣ ಅಂದರೆ ಪುಸ್ತಕ ಜ್ಞಾನ, ಅಕ್ಷರ ಜ್ಞಾನ ಮಾತ್ರವಲ್ಲ ಮನಸ್ಸಿಗೆ ಸಂಸ್ಕಾರವನ್ನು ಕೊಡುವುದು ಸಹ ಶಿಕ್ಷಣದ ಭಾಗ, ಬುದ್ಧಿಯ ವಿಕಾಸದೊಂದಿಗೆ ಹೃದಯವಂತಿಕೆಯನ್ನೂ ಬೆಳೆಸಬೇಕು ಎಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ತಿಳಿಸಿದರು.

ಸೆಂಟ್ರಲ್ ಕಾಲೇಜಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ನಡೆದ ಬೆಂಗಳೂರು ವಿಶ್ವವಿದ್ಯಾಲಯದ 58ನೇ ವಾರ್ಷಿಕ ಘಟಿಕೋತ್ಸವದಲ್ಲಿ ಅವರು ಗೌರವ ಡಾಕ್ಟರೇಟ್ ಪದವಿ ಸ್ವೀಕರಿಸಿದ ನಂತರ ಮಾತನಾಡಿ, ವಿದ್ಯೆ ಕೇವಲ ಕಾಗದದ ಸರ್ಟಿಫಿಕೇಟ್ ಆಗಿರಬಾರದು. ಅದು, ಸಂಸ್ಕಾರವನ್ನು ಸಹ ಒಳಗೊಂಡಿರಬೇಕು ಎಂದರು.

ಪ್ರಸ್ತುತ ಎಲ್ಲಾ ವಿದ್ಯಾರ್ಥಿಗಳಿಗೂ ಗುಣಮಟ್ಟದ ಹಾಗೂ ನೈತಿಕ ಶಿಕ್ಷಣದ ಅಗತ್ಯ ಹೆಚ್ಚಿದೆ. ಅಂತಹ ಶಿಕ್ಷಣವನ್ನು ಬೆಂಗಳೂರು ವಿಶ್ವವಿದ್ಯಾಲಯ ನೀಡುತ್ತಿದೆ. ವಿದ್ಯೆ ಹಣಗಳಿಕೆಯ ಸಾಧನವಾಗದೆ ವ್ಯಕ್ತಿತ್ವವನ್ನು ರೂಪಿಸುವ ಸಾಧನವಾದಾಗ ಮಾತ್ರ ಬದುಕಿನಲ್ಲಿ ಸುಖ, ಶಾಂತಿ, ನೆಮ್ಮದಿ ಸಿಗಲು ಸಾಧ್ಯ ಎಂದು ಅವರು ಹೇಳಿದರು.

ವಿದ್ಯಾರ್ಥಿಗಳು ಎಲ್ಲಾ ಕ್ಷೇತ್ರದಲ್ಲೂ ಛಾಪು ಮೂಡಿಸಬೇಕು, ಎಲ್ಲಾ ವಿದ್ಯಾರ್ಥಿಗಳಿಗೂ ಉತ್ತಮ ಭವಿಷ್ಯ ಸಿಗಲಿ, ಸಮಾಜದಲ್ಲಿ ಉತ್ತಮ ಪ್ರಜೆಗಳಾಗಲಿ ಎಂದು ಗೌಡರು ಹಾರೈಸಿದರು.

ಬೆಂಗಳೂರು ವಿಶ್ವವಿದ್ಯಾಲಯ ಲಕ್ಷಾಂತರ ವಿದ್ಯಾರ್ಥಿಗಳ ಜ್ಞಾನಭಂಡಾರ, ವಿದ್ಯಾರ್ಥಿಗಳಿಗೆ ನೈತಿಕ ಹಾಗೂ ಗುಣಮಟ್ಟದ ಶಿಕ್ಷಣವನ್ನು ಧಾರೆ ಎರೆಯುತ್ತಿರುವ ಜ್ಞಾನಾಲಯ, ಉನ್ನತ ಶಿಕ್ಷಣದಲ್ಲಿ ಉತ್ಕೃಷ್ಟತೆಯನ್ನು ಸಾಧಿಸುತ್ತಿರುವ ವಿಶ್ವವಿದ್ಯಾಲಯದ ಬಗ್ಗೆ ನನಗೆ ಅಪಾರ ಗೌರವವಿದೆ ಎಂದು ಹೇಳಿದರು.

> ❝ ವಿದ್ಯೆ ವಿನಯವನ್ನು ನೀಡುತ್ತೆ. ವಿನಯದಿಂದ ಮನುಷ್ಯನ ವ್ಯಕ್ತಿತ್ವ ರೂಪುಗೊಳ್ಳುತ್ತೆ ಆ ವ್ಯಕ್ತಿಯಿಂದ ಹಣ ಸಂಪಾದನೆ ಆಗುತ್ತೆ. ಸಂಪಾದಿಸಿದ ಹಣದಿಂದ ಧರ್ಮ ಕಾರ್ಯಗಳನ್ನು ನಡೆಸಿದಾಗ ಮಾತ್ರ ಮನಸ್ಸಿಗೆ ತೃಪ್ತಿ ಸಿಗುತ್ತೆ ವಿದ್ಯಾರ್ಥಿ ಜೀವನ ಒಂದು ತಪಸ್ಸು ಇದ್ದಂತೆ. ಪ್ರತಿ ವಿದ್ಯಾರ್ಥಿ ಜೀವನ ಕ್ರಮ ಶಿಸ್ತಿಗೆ ಒಳಪಡಬೇಕು. ವಿದ್ಯೆ ಕೇವಲ ಒಬ್ಬನ ಜೀವನವನ್ನು ಕಟ್ಟಿ ಕೊಡುವುದಷ್ಟೇ ಅಲ್ಲ ದೇಶದ ಬೆಳವಣಿಗೆಯನ್ನೂ, ದೇಶದ ಸಂಸ್ಕೃತಿಯನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುತ್ತದೆ. ಒಟ್ಟಾರೆ ಹೇಳಬೇಕು ಅಂದರೆ ವಿದ್ಯೆ ಸಂಪತ್ತು ಹೌದು, ಸಂಸ್ಕಾರವೂ ಹೌದು. **–ಹೆಚ್.ಡಿ.ದೇವೇಗೌಡ.**


ಈ ಸಂದರ್ಭದಲ್ಲಿ ಇಸ್ರೋದ ಅಧ್ಯಕ್ಷರಾದ ಎಸ್.ಸೋಮನಾಥ್ ಅವರಿಗೆ ನಾನು ವಿಶೇಷವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಯಶಸ್ವಿ ಚಂದ್ರಯಾನ–3ರ ರೂವಾರಿ ಆಗಿರುವ ಸೋಮನಾಥ್ ಅವರಿಗೆ ಗೌರವ ಡಾಕ್ಟರೇಟ್ ನೀಡುತ್ತಿರುವುದು ನನಗೆ ಬಹಳ ಸಂತೋಷ ತಂದಿದೆ. ಇಸ್ರೋ ಸಂಸ್ಥೆ ಇವತ್ತು ನಮ್ಮ ಭಾರತ ದೇಶವನ್ನು ಬಾಹ್ಯಾಕಾಶದ ಭೂಪಟದಲ್ಲಿ ವಿಶ್ವಕ್ಕೆ ಪರಿಚಯ ಮಾಡಿ ನಮಗೆಲ್ಲಾ ಹೆಮ್ಮೆ ತಂದಿದೆ. ಈ ಸಂದರ್ಭದಲ್ಲಿ ಎಲ್ಲಾ ವಿಜ್ಞಾನಿಗಳನ್ನು ಅಭಿನಂದಿಸುತ್ತೇನೆ ಎಂದರು.

ಬೆಂಗಳೂರು ವಿಶ್ವವಿದ್ಯಾನಿಲಯ ನನಗೆ ನೀಡಿರುವ ಗೌರವ ಡಾಕ್ಟರೇಟ್ ಅನ್ನು ತುಂಬಾ ಸಂತೋಷದಿಂದ ಸ್ವೀಕರಿಸಿದ್ದೇನೆ ಎಂದು ದೇವೇಗೌಡರು ಹೇಳಿದರು.

ಮಹಿಳಾ, ಮಕ್ಕಳ ದಸರಾದಲ್ಲಿ ಒನ್ ಮಿನಿಟ್ ಗೇಮ್

ಹಗ್ಗ ಜಗ್ಗಾಟ, ಮ್ಯೂಸಿಕಲ್ ಚೇರ್‌ನಲ್ಲಿ ಮಹಿಳೆಯರ ಸೆಣಸಾಟ









ಮೈಸೂರು, ಅ.17 (ಬಿಎಲ್‌ಯು)– ಮಹಿಳಾ ಮತ್ತು ಮಕ್ಕಳ ದಸರಾದ ಎರಡನೇ ದಿನವಾದ ಇಂದು ಮೈಸೂರಿನ ಜೆ.ಕೆ.ಮೈದಾನದಲ್ಲಿ ಹಗ್ಗ ಜಗ್ಗಾಟ, ಮ್ಯೂಸಿಕಲ್ ಚೇರ್ ಸೇರಿದಂತೆ ಹಲವು ವಿಶಿಷ್ಟ ಸ್ಪರ್ಧೆಗಳು ನಡೆದವು.

ಮೈಸೂರು ದಸರಾ ಅಂದರೆ ಸಾಂಸ್ಕೃತಿಕ ಕಾರ್ಯಕ್ರಮಗಳು, ಮನೋರಂಜನೆ, ದೀಪಾಲಂಕಾರ ಅಷ್ಟೆ ಅಲ್ಲದೆ ಗ್ರಾಮೀಣ ಭಾಗದ ಹಲವು ವಿಶಿಷ್ಟ ಸ್ಪರ್ಧೆಗಳು ನಡೆಯುತ್ತವೆ. ಮೊಬೈಲ್, ವಿಡಿಯೋ ಗೇಮ್ ಸೇರಿದಂತೆ ಆಧುನಿಕ ಆಟಗಳ ಪ್ರಭಾವದಲ್ಲಿ ಮರೆಯಾಗುತ್ತಿರುವ ಗ್ರಾಮೀಣ ಸ್ಪರ್ಧೆಗಳು ಮೈಸೂರು ದಸರಾದಲ್ಲಿ ಜೀವ ಪಡೆಯುತ್ತಿವೆ.

ಜಾನಪದ ಗೀತೆ, ಭಾವಗೀತೆ ಗಾಯನ ಸ್ಪರ್ಧೆ, ನೃತ್ಯ ಸ್ಪರ್ಧೆಯ ಆರಂಭದೊಂದಿಗೆ ಹಲವು ಸ್ಪರ್ಧೆಗಳು ಆರಂಭವಾದವು. ಒಂದೊಂದು ಸ್ಪರ್ಧೆಯಲ್ಲಿ 25 ಮಹಿಳೆಯರು ಹಾಗೂ ಮಕ್ಕಳು ಭಾಗವಹಿಸಿದ್ದರು. ಒಬ್ಬರಿಗೆ ಗರಿಷ್ಠ 3 ನಿಮಿಷಗಳ ಕಾಲಾವಕಾಶ ನೀಡಲಾಗಿತ್ತು.

ತರುವಾಯ ನಡೆದ ತುಂಬಿದ ಬಿಂದಿಗೆ ಹೊತ್ತು ನಡೆಯುವ ಸ್ಪರ್ಧೆಯಲ್ಲಿ ಮಹಿಳೆಯರು ನಾ ಮುಂದು ತಾ ಮುಂದು ಎಂದು ಪೈಪೋಟಿ ನಡೆಸಿ ನೀರಿನ ಬಿಂದಿಗೆ ಹೊತ್ತು ಓಡಿದರು.

ಹಗ್ಗ ಜಗ್ಗಾಟದಲ್ಲಿ ಶಕ್ತಿ ಮೀರಿ ಹಗ್ಗ ಎಳೆಯುವ ಮೂಲಕ ಗೆಲುವಿಗೆ ಸೆಣಸಾಟ ನಡೆಸಿದರು. ತರುವಾಯ ಅಂಗನವಾಡಿ ಕಾರ್ಯಕರ್ತರಿಗೆ ಜಾನಪದ ಸಮೂಹ ನೃತ್ಯ ಸ್ಪರ್ಧೆ ಆಯೋಜಿಸಲಾಗಿತ್ತು. ನಂತರ ನಡೆದ ಒನ್ ಮಿನಿಟ್ ಗೇಮ್‌ನಲ್ಲಿ ಹಣೆ ಮೇಲೆ ಬಿಸ್ಕೆಟ್ ಇಟ್ಟು ಕೈ ಉಪಯೋಗಿಸದೆ ತಿನ್ನುವುದು, ಕಣ್ಣಿಗೆ ಬಟ್ಟೆ ಕಟ್ಟಿ ಬಕೆಟ್‌ನಿಂದ ನೀರನ್ನು ಹಿಂಬದಿಯವರಿಗೆ ಪಾಸ್ ಮಾಡುವುದು, ಮಾಸ್ಕ್ ಹಾಕಿಕೊಂಡು ಮೇಣದ ಬತ್ತಿ ಊದುವುದು, ಕಣ್ಣಿಗೆ ಬಟ್ಟೆ ಕಟ್ಟಿ ಬಿಂದಿ ಇಡುವುದು ಸೇರಿದಂತೆ ಹಲವು ಸ್ಪರ್ಧೆಗಳು ನಡೆಯಿತು. ಎಲ್ಲಾ ಸ್ಪರ್ಧೆಯಲ್ಲಿ ಮಹಿಳೆಯರು ಬಹಳ ಉತ್ಸಾಹದಿಂದ ಪಾಲ್ಗೊಂಡಿದ್ದರು.

ಈ ವೇಳೆ ಮಹಿಳಾ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಹಾಗೂ ಮೇಲ್ವಿಚಾರಕಿಯರಿಗೆ ಫಾಸ್ಟ್ ವಾಕಿಂಗ್ ಸ್ಪರ್ಧೆ ಕೂಡ ಆಯೋಜಿಸಲಾಗಿತ್ತು. ಅಂಗನವಾಡಿ ಕಾರ್ಯಕರ್ತೆಯರು, ಇಲಾಖಾ ಸಿಬ್ಬಂದಿ ಹಾಗೂ ತಾಲೂಕು ಮಟ್ಟದಿಂದ ಆಯ್ಕೆಯಾಗಿರುವ ಮಕ್ಕಳು ಇಂದಿನ ಸ್ಪರ್ಧೆಯಲ್ಲಿ ಭಾಗಿಯಾಗಿದ್ದರು. ಕೆಲಸದ ಒತ್ತಡ ಹಾಗೂ ದಿನ ನಿತ್ಯದ ಜಂಜಾಟ ಮರೆತ ಮಹಿಳೆಯರು ಸ್ವಚ್ಛಂದವಾಗಿ ಆಟೋಟ ಸ್ಪರ್ಧೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದರು.

ರಾಗಿ ಬೀಸುವ, ಭತ್ತ ಕುಟ್ಟುವ ಸ್ಪರ್ಧೆ

ಗ್ರಾಮೀಣ ಭಾಗದಲ್ಲಿ ನಡೆಯುವ ಹಲವು ಸ್ಪರ್ಧೆಗಳನ್ನು ನಾಳೆಯ ಮಹಿಳಾ ಮತ್ತು ಮಕ್ಕಳ ದಸರಾದಲ್ಲಿ ಆಯೋಜಿಸಲಾಗಿದೆ. ರಾಗಿ ಬೀಸುವ ಸ್ಪರ್ಧೆ, ಭತ್ತ ಕುಟ್ಟುವ ಸ್ಪರ್ಧೆ, ಹೂ ಕಟ್ಟುವ ಸ್ಪರ್ಧೆ, ಒಲೆರಹಿತ ಅಡುಗೆ ಮಾಡುವ ಸ್ಪರ್ಧೆ ಸೇರಿದಂತೆ ಹಲವು ಸ್ಪರ್ಧೆಗಳು ನಾಳೆ ನಡೆಯಲಿವೆ.

ವಿದ್ಯುತ್ ಮಿಲ್, ಮಿಕ್ಸಿ ಗ್ಯಾಸ್ ಸ್ಟೌವ್ ಬಂದಿರುವ ಕಾರಣ ಈಗ ರಾಗಿ ಬೀಸುವ, ಭತ್ತ ಕುಟ್ಟುವುದು, ಒಲೆ ರಹಿತ ಅಡುಗೆ ಮಾಡುವುದು ಹಳ್ಳಿಗಳಲ್ಲಿ ಕೂಡ ಮರೆಯಾಗಿದೆ. ಆದರೆ ಹಳ್ಳಿಗಳಲ್ಲಿ ಮಹಿಳೆಯರು ಅನಾದಿ ಕಾಲದಿಂದ ನಡೆಸುತ್ತಿದ್ದ ಕಾಯಕವನ್ನು ಇಂದಿನ ಪೀಳಿಗೆಗೆ ತಿಳಿಸಲು ದಸರಾದಲ್ಲಿ ಇಂತಹ ಹಲವು ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಈ ಮೂಲಕ ದಸರಾದಲ್ಲಿ ಗ್ರಾಮೀಣ ಭಾಗದ ಹಲವು ಶೈಲಿಗಳನ್ನು ನೆನಪಿಸಲಾಗುತ್ತಿದೆ. ಈ ಕಾರಣದಿಂದಲೇ ದಸರಾ ನೋಡಲು ದೇಶ–ವಿದೇಶಗಳಿಂದ ಜನರು ಬರುತ್ತಾರೆ.

ಇಂದಿನಿಂದ ಯುವ ದಸರಾ ಆರಂಭ



ಮೈಸೂರು,ಅ.17(ಆರ್‌ಕೆ)– ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯಾದ ಯುವ ದಸರಾ ಕಾರ್ಯಕ್ರಮಗಳು ನಾಳೆ (ಅ.18)ಯಿಂದ ಆರಂಭವಾಗಲಿವೆ. ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಸಂಜೆ 6 ಗಂಟೆಗೆ ಖ್ಯಾತ ಚಲನಚಿತ್ರ ನಟ ಡಾ.ಶಿವರಾಜ್‌ಕುಮಾರ್ ಯುವ ದಸರಾ ಕಾರ್ಯಕ್ರಮವನ್ನು ಉದ್ಘಾಟಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕ ಕೆ.ಹರೀಶ್‌ಗೌಡ ಸೇರಿದಂತೆ ಗಣ್ಯರು ಪಾಲ್ಗೊಳ್ಳಲಿದ್ದು, ರಾತ್ರಿ 7ರಿಂದ 10.30 ಗಂಟೆವರೆಗೆ ಸ್ಯಾಂಡಲ್‌ವುಡ್ ನೈಟ್ ಸಂಗೀತ ಕಾರ್ಯಕ್ರಮ ನಡೆಯಲಿದೆ.

ಅ.19ರಂದು ಸಂಜೆ 6.15ರಿಂದ ಸಂಚಿತ್ ಹೆಗ್ಡೆ ಅವರಿಂದ ಸಂಗೀತ, ರಾತ್ರಿ 8 ಗಂಟೆಗೆ ರಘು ದೀಕ್ಷಿತ್ ಮತ್ತು ತಂಡದ ಸಂಗೀತ–ನೃತ್ಯ, ರಾತ್ರಿ 9.30ರಿಂದ 11ರವರೆಗೆ ಶಿಲ್ಪಾ ರಾವ್ ಮತ್ತು ತಂಡದ ಸಂಗೀತ–ನೃತ್ಯ ಕಾರ್ಯಕ್ರಮ, ಅ.20ರಂದು ಸಂಜೆ 7ರಿಂದ ರಾತ್ರಿ 8.30 ಗಂಟೆವರೆಗೆ All Ok ಮತ್ತು ತಂಡ, ರಾತ್ರಿ 9ರಿಂದ 10.30 ಗಂಟೆವರೆಗೆ ಸಲಿಲಿ ಸುಲೈಮಾನ್ ತಂಡ, ಅ.21 ರಂದು ಸಂಜೆ 7.10ರಿಂದ ರಾತ್ರಿ 8.40 ರವರೆಗೆ ಮೋಹನ ಸಿಸ್ಟರ್ಸ್ ತಂಡ ಹಾಗೂ ರಾತ್ರಿ 9ರಿಂದ 10.30 ಗಂಟೆವರೆಗೆ ಬೆನ್ನಿ ದಯಾಳ್ ಮತ್ತು ತಂಡದಿಂದ ಕಲಾ ಪ್ರದರ್ಶನ ಪ್ರಸ್ತುತಗೊಳ್ಳಲಿದೆ.

ಇಂದು ಯುವ ದಸರಾ ಉಪ ಸಮಿತಿ ಸಮನ್ವಯಾಧಿಕಾರಿ ಎಂ.ಕೆ.ಸವಿತಾ, ಕಾರ್ಯಾಧ್ಯಕ್ಷ ಕೆ.ಆರ್. ರಕ್ಷಿತ್, ಅಧ್ಯಕ್ಷ ಚೆಲುವರಾಜು, ಉಪಾಧ್ಯಕ್ಷ ಕೆ.ವಿ. ಸ್ವಾಮಿ ಹಾಗೂ ಸದಸ್ಯರು ಯುವರಾಜ ಕಾಲೇಜು ಮೈದಾನದಲ್ಲಿ ಯುವ ದಸರಾ ಕಾರ್ಯಕ್ರಮದ ಸಿದ್ಧತೆ ಪರಿಶೀಲಿಸಿದರು. ವೇದಿಕೆ, ಪ್ರೇಕ್ಷಕರಿಗೆ ಆಸನದ ವ್ಯವಸ್ಥೆ, ಮೊಬೈಲ್ ಶೌಚಾಲಯ, ಸುರಕ್ಷತಾ ಸೌಲಭ್ಯಗಳನ್ನು ಮಾಡಲಾಗಿದೆ. ಸ್ಥಳದಲ್ಲಿ ಪೊಲೀಸ್ ಬಿಗಿ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದ್ದು, ವಾಹನ ನಿಲುಗಡೆ, ಆಂಬುಲೆನ್ಸ್, ಅಗ್ನಿಶಾಮಕ ದಳದ ವಾಹನ ವ್ಯವಸ್ಥೆ ಮಾಡಲಾಗಿದೆ.

ಸಚಿನ್ ತೆಂಡೂಲ್ಕರ್ ಬ್ಯಾಟ್, ರಾಹುಲ್, ಧೋನಿ ಗ್ಲೌಸ್ ಪ್ರದರ್ಶನ







ಮೈಸೂರು,ಅ.17(ಬಿಎಲ್‌ಯು)– ವಿಶ್ವಕಪ್ ಕ್ರಿಕೆಟ್ ಪಂದ್ಯಾವಳಿಯ ಹಿನ್ನೆಲೆಯಲ್ಲಿ ಮೈಸೂರಿನ ಪೆಗ್ಸ್ ಅಂಡ್ ಕೆಗ್ಸ್ ರೆಸ್ಟೋರೆಂಟ್‌ನಲ್ಲಿ 2011ರ ವಿಶ್ವಕಪ್ ವಿಜೇತ ಭಾರತ ತಂಡದ 11 ಸದಸ್ಯರ ಹಸ್ತಾಕ್ಷರವುಳ್ಳ ಬ್ಯಾಟ್ ಹಾಗೂ ಗ್ಲೌಸ್ ಅನ್ನು ಪ್ರದರ್ಶನಕ್ಕಿಡಲಾಗಿದೆ. ಕ್ರಿಕೆಟ್ ದೇವರು ಸಚಿನ್ ತೆಂಡೂಲ್ಕರ್ ಅವರ ಬ್ಯಾಟ್ ಕೂಡ ಪ್ರದರ್ಶನಕ್ಕಿಡಲಾಗಿದೆ.

ಇದರ ಜೊತೆಗೆ ಭಾರತ ಕ್ರಿಕೆಟ್ ತಂಡದ ಗೋಡೆ ಖ್ಯಾತಿಯ ರಾಹುಲ್ ದ್ರಾವಿಡ್, ಮಾಜಿ ನಾಯಕ ಮಹೇಂದ್ರ ಸಿಂಗ್ ಧೋನಿ ಅವರ ಗ್ಲೌಸ್‌ಗಳನ್ನೂ ಪ್ರದರ್ಶನಕ್ಕಿಡಲಾಗಿದೆ. ಇವುಗಳನ್ನು ಖರೀದಿಸಿ ವಿಶ್ವಕಪ್ ಕ್ರಿಕೆಟ್ ನಡೆಯುತ್ತಿರುವಾಗ ಪ್ರದರ್ಶನಕ್ಕಿಡಲಾಗಿದೆ. ವಿಶ್ವಕಪ್ ಮುಗಿಯುವ ತನಕ ಪ್ರದರ್ಶನವಿರುತ್ತದೆ ಎಂದು ರೆಸ್ಟೋರೆಂಟ್ ಮಾಲೀಕ ಮಂಜು ತಿಳಿಸಿದ್ದಾರೆ.

ಪಟಾಕಿ ದುರಂತ: ಮ್ಯಾಜಿಸ್ಟ್ರಿಯಲ್ ತನಿಖೆಗೆ ಆದೇಶ

ಬೆಂಗಳೂರು: ಅತ್ತಿಬೆಲೆ ಪಟಾಕಿ ದುರಂತಕ್ಕೆ ಸಂಬಂಧಪಟ್ಟಂತೆ ಮ್ಯಾಜಿಸ್ಟ್ರಿಯಲ್ ತನಿಖೆ ನಡೆಸಲು ರಾಜ್ಯ ಸರ್ಕಾರ ಮಂಗಳವಾರ ಆದೇಶ ಹೊರಡಿಸಿದೆ.

ಬೆಂಗಳೂರು ವಿಭಾಗದ ಪ್ರಾದೇಶಿಕ ಆಯುಕ್ತ ಅಮಲಾನ್ ಆದಿತ್ಯ ಬಿಸ್ವಾಸ್ ಅವರನ್ನು ವಿಚಾರಣಾಧಿಕಾರಿಯಾಗಿ ನೇಮಿಸಲಾಗಿದ್ದು, ವಿಚಾರಣೆ ನಡೆಸಿ ವರದಿ ಸಲ್ಲಿಸಲು ಮೂರು ತಿಂಗಳ ಗಡುವು ನಿಗದಿಪಡಿಸಲಾಗಿದೆ.

ಅತ್ತಿಬೆಲೆಯ ಶ್ರೀ ಬಾಲಾಜಿ ಟ್ರೇಡರ್ಸ್ ಮಳಿಗೆಯಲ್ಲಿ ಬೆಂಕಿ ಅವಘಡ ಸಂಭವಿಸಿ, 16 ಮಂದಿ ಮೃತಪಟ್ಟಿದ್ದರು. ಈ ಬಗ್ಗೆ ಅತ್ತಿಬೆಲೆ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಸದ್ಯ ಪ್ರಕರಣದ ತನಿಖೆಯನ್ನು ಸಿಐಡಿ ನಡೆಸುತ್ತಿದೆ. ಘಟನಾ ಸ್ಥಳಕ್ಕೆ ಭೇಟಿ ನೀಡಿದ್ದ ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ವರದಿಯೊಂದನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಿದ್ದರು. ವರದಿ ಪರಿಶೀಲನೆ ನಡೆಸಿರುವ ಸರ್ಕಾರ, ಮ್ಯಾಜಿಸ್ಟ್ರೇಟ್ ತನಿಖೆಗೆ ಆದೇಶಿಸಿದೆ.

ಪಟಾಕಿ ಅವಘಡಕ್ಕೆ ಕಾರಣವೇನು: ಪಟಾಕಿ ಮಳಿಗೆಗೆ ಅನುಮತಿ ಪಡೆಯಲಾಗಿತ್ತಾ, ಮಾಲೀಕರಿಂದ ಯಾವೆಲ್ಲ ದಾಖಲೆ ಪಡೆದು ಪರವಾನಗಿ ನೀಡಲಾಗಿತ್ತಾ, ಪರವಾನಗಿ ನೀಡುವಲ್ಲಿ ಲೋಪವಾಗಿದೆಯಾ, ಲೋಪವೆಸಗಿದವರು ಯಾರು, ಅವಘಡ ಆಕಸ್ಮಿಕವೋ ಅಥವಾ ನಿರ್ಲಕ್ಷ್ಯದಿಂದ ಆಗಿದೆಯಾ, ನಷ್ಟ ಎಷ್ಟಾಗಿದೆ ಎಂಬ ಬಗ್ಗೆ ಪಟಾಕಿ ದಾಸ್ತಾನು ಮಳಿಗೆಗಳ ಸ್ಫೋಟಕ ಕಾಯ್ದೆಯನ್ವಯ ವಿಚಾರಣೆ ನಡೆಸಿ ವರದಿ ಸಲ್ಲಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಹಳೆಯ ಕಟ್ಟಡಗಳ ಮೇಲೆ ನಿಂತು ದಸರಾ ಮೆರವಣಿಗೆ ವೀಕ್ಷಣೆ ನಿರ್ಬಂಧ



ಮೈಸೂರು,ಅ.17–ಅ.24ರಂದು ನಡೆಯಲಿರುವ ದಸರಾ ಮೆರವಣಿಗೆ ವೀಕ್ಷಣೆಗೆ ಸ್ಥಳೀಯ, ದೇಶ, ವಿದೇಶಗಳಿಂದ ಜನರು ಆಗಮಿಸಲಿದ್ದಾರೆ. ಈ ಸಂದರ್ಭದಲ್ಲಿ ಸಯ್ಯಾಜಿರಾವ್ ರಸ್ತೆಯಲ್ಲಿ ಜನರು ದಸರಾ ಮೆರವಣಿಗೆಯನ್ನು ವೀಕ್ಷಿಸಲು ರಸ್ತೆಯ ಎರಡು ಬದಿಯಲ್ಲಿ ಇರುವ ಹಳೆಯ, ಶಿಥಿಲ ಕಟ್ಟಡ, ಮರಗಳ ಮೇಲೆ ಅಗತ್ಯಕ್ಕಿಂತ ಹೆಚ್ಚು ಮಂದಿ ನಿಂತು ಜನದಟ್ಟಣೆ ಹೆಚ್ಚಾಗಿ ಅನಾಹುತಗಳಾಗುವ ಸಂಭವವಿದ್ದು, ಜನರ ಸುರಕ್ಷತೆ ಹಿನ್ನೆಲೆಯಲ್ಲಿ ಕರ್ನಾಟಕ ಮುನಿಸಿಪಲ್ ಕಾಯಿದೆ 1976ರ ಅನುಚ್ಛೇದ 322ರ ಅನ್ವಯ ಹಳೆಯ ಕಟ್ಟಡಗಳ ಮೇಲೆ ನಿಂತು ಜನರು ದಸರಾ ಮೆರವಣಿಗೆ ವೀಕ್ಷಣೆಯನ್ನು ನಿರ್ಬಂಧಿಸಲಾಗಿದೆ ಎಂದು ನಗರಪಾಲಿಕೆ ಆಯುಕ್ತರು ತಿಳಿಸಿದ್ದಾರೆ.

ಪ್ರಜಾಪ್ರಭುತ್ವ ಆಡಳಿತಾವಧಿಯ ದಸರಾದಲ್ಲೂ ಸಂಸ್ಕೃತಿ ಅನಾವರಣ

- ಹಿರಿಯ ಸಾಹಿತಿ ಡಾ.ವೆಂಕಟಾಚಲ ಶಾಸ್ತ್ರಿ ಸಂತಸ
- ದಸರಾ ಪುಸ್ತಕ ಮೇಳದಲ್ಲಿ ಒಂದು ಸುತ್ತು ಹಾಕಿ; ಮೆಚ್ಚಿನ ಪುಸ್ತಕಗಳತ್ತ ದೃಷ್ಟಿ



ಮೈಸೂರು,ಅ.17(ಎಸ್‌ಪಿಎನ್)–ಪ್ರಭುತ್ವದ ಆಳ್ವಿಕೆಯಿದ್ದಾಗ ಆಚರಣೆಗೊಳ್ಳುತ್ತಿದ್ದ ದಸರೆಗೆ ಸ್ವಲ್ಪವೂ ಚ್ಯುತಿಬಾರದಂತೆ, ಪ್ರಸ್ತುತ ಪ್ರಜಾಪ್ರಭುತ್ವ ಆಡಳಿತದಲ್ಲಿ ಆಚರಣೆಯಾಗುತ್ತಿರುವುದು ಸಂತೋಷದ ವಿಷಯ ಎಂದು ಹಿರಿಯ ಸಾಹಿತಿ ಡಾ. ವೆಂಕಟಾಚಲ ಶಾಸ್ತ್ರಿ ಅಭಿಪ್ರಾಯಪಟ್ಟರು.

ಮೈಸೂರು ವಿವಿ ಓವೆಲ್ ಮೈದಾನದಲ್ಲಿ ಕರ್ನಾಟಕ ಜಾನಪದ, ಸಾಹಿತ್ಯ, ಯಕ್ಷಗಾನ, ನಾಟಕ, ಸಂಗೀತ, ನೃತ್ಯ, ಶಿಲ್ಪಕಲಾ ಹಾಗೂ ಲಲಿತಾಕಲಾ ಸಹಯೋಗದೊಂದಿಗೆ ಆಯೋಜಿಸಿದ್ದ ಮೈಸೂರು ದಸರಾ ಮಹೋತ್ಸವ–2023ರ ಮೂರನೇ ದಿನದ 'ಕನ್ನಡ ಪುಸ್ತಕಗಳ ರಿಯಾಯತಿ ಮಾರಾಟ ಮೇಳ'ದಲ್ಲಿ 'ಸಾಹಿತಿಗಳೊಂದಿಗೆ ಸೆಲ್ಫಿ' ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ನಾನು ಚಿಕ್ಕವನಿದ್ದಾಗ ದಸರಾ ಉತ್ಸವ ಮೈಸೂರು ಸಂಸ್ಥಾನದಲ್ಲಿ ಸಂಪ್ರದಾಯಬದ್ಧವಾಗಿ ಆಚರಣೆಗೊಳ್ಳುತ್ತಿದ್ದವು. ಆಗ ಶ್ರೀ ಜಯಚಾಮರಾಜ ಒಡೆಯರ್ ಆಳ್ವಿಕೆಯಿತ್ತು. ನಂತರ ಪ್ರಜಾಪ್ರಭುತ್ವ ಆಳ್ವಿಕೆ ಆರಂಭವಾದ ನಂತರ ಈಗಿನ ಕಾಲಕ್ಕೆ ತಕ್ಕಂತೆ ಬದಲಾವಣೆಗೊಂಡು ಆಚರಣೆಯಾಗುತ್ತಿದೆ. ದಸರೆ ಸಂದರ್ಭದಲ್ಲಿ ಮೈಸೂರು ನಗರದ ಬೇರೆ ಬೇರೆ ವೇದಿಕೆಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುತ್ತಿವೆ. ಈ ನೆಪದಲ್ಲಿ ನಮ್ಮ ಸಂಸ್ಕೃತಿಯ ಅನಾವರಣಗೊಳ್ಳುತ್ತಿರುವುದು ಹೆಮ್ಮೆಯ ಸಂಗತಿ ಎಂದರು.

ನಾನು ವಿದ್ಯಾರ್ಥಿಯಾಗಿದ್ದಾಗ ದಸರಾ ಕವಿಗೋಷ್ಠಿಯಲ್ಲಿ ಕವಿತೆ ವಾಚನ ಮಾಡುವ ತವಕವಿತ್ತು ಎಂದು ಹಳೆಯ ನೆನಪುಗಳನ್ನು ನೆನೆದ ಅವರು, ಇದೀಗ ವಿದ್ಯಾರ್ಥಿಗಳಿಗೆ, ಮಧ್ಯ ವಯಸ್ಕರಿಗೆ ಹಾಗೂ ಹೆಸರಾಂತ ಕವಿಗಳಿಗೂ ಬೇರೆ ಬೇರೆ ವೇದಿಕೆಗಳಲ್ಲಿ ಅವಕಾಶ ಕಲ್ಪಿಸಿರುವುದು ಹರ್ಷದಾಯಕ. ಇದರ ಜೊತೆಗೆ ಪುಸ್ತಕ ಮೇಳಕ್ಕೂ ಸರ್ಕಾರ ಅವಕಾಶ ಮಾಡಿಕೊಟ್ಟಿದೆ. ಒಟ್ಟಿನಲ್ಲಿ ಪ್ರಜಾಪ್ರಭುತ್ವದ ದಸರಾ ಉತ್ಸವದಲ್ಲಿ ಎಲ್ಲಾ ವರ್ಗದವರಿಗೂ ಅವಕಾಶ ಕಲ್ಪಿಸಿದೆ ಎಂದು ತಿಳಿಸಿದರು.

ಇತ್ತೀಚಿನ ದಿನಗಳಲ್ಲಿ ಓದುಗರ ಸಂಖ್ಯೆ ಕಡಿಮೆ ಇದೆ. ಪುಸ್ತಕಗಳ ಸಂಖ್ಯೆ ಹೆಚ್ಚಾಗಿದೆ ಎಂಬ ಆರೋಪ ಸಾರ್ವಜನಿಕ ವಲಯದಲ್ಲಿ ಆಗಾಗ ಕೇಳಿ ಬರುತ್ತಿದೆ. ಇದನ್ನು ನಾನು ಒಪ್ಪುವುದಿಲ್ಲ. ಹಿಂದಿನ ಕಾಲದಲ್ಲಿ ಅಕ್ಷರಾಭ್ಯಾಸ ಮಾಡುವವರ ಸಂಖ್ಯೆ ಕಡಿಮೆ ಇತ್ತು. ಹಾಗಾಗಿ ಓದುಗರ ಸಂಖ್ಯೆ ಕಡಿಮೆ ಇತ್ತು. ಇದೀಗ ವಿದ್ಯಾವಂತರ ಸಂಖ್ಯೆ ಹೆಚ್ಚಾದಂತೆ ಓದುಗರ ಸಂಖ್ಯೆಯೂ ಹೆಚ್ಚಾಗಿದೆ. ಅಂತೆಯೇ ಬರಹಗಾರರ ಸಂಖ್ಯೆಯೂ ಹೆಚ್ಚಿದೆ. ಒಳ್ಳೆಯ ಲೇಖಕರ ಪುಸ್ತಕಗಳಿಗೆ ಇಂದಿಗೂ ಬೇಡಿಕೆ ಇದೆ. ಅದನ್ನು ಬುದ್ಧಿವಂತ ಓದುಗ ಆಯ್ಕೆ ಮಾಡಿಕೊಳ್ಳುತ್ತಾನೆ ಎಂದು ಅಭಿಪ್ರಾಯಪಟ್ಟರು.

ಇದಕ್ಕೂ ಮುನ್ನ ಮೈಸೂರು ವಿವಿ ಪ್ರಸಾರಾಂಗ ಮಳಿಗೆ, ಕೆಎಸ್‌ಓಯು, ಜಾನಪದ ವಿವಿ ಮಳಿಗೆ ಹಾಗೂ ಸಂಸ್ಕೃತಿ ಬುಕ್ ಹೌಸ್ ಮಳಿಗೆಗೆ ಭೇಟಿ ನೀಡಿದ್ದರು. ಈ ವೇಳೆ ರಾಜರ್ಷಿ ಶ್ರೀಮನ್ಮಹಾರಾಜ ಜಯ ಚಾಮರಾಜೇಂದ್ರ ಒಡೆಯರ್ ಅವರ ಜೀವನ ಮತ್ತು ಸಾಧನೆಗಳು (1919–1974) ಪುಸ್ತಕ, ಡಾ.ವಿ.ಶ್ರೀಮತಿ ರಚಿತ ಗುರು ಗುಹಾಂತರಂಗ, ಕೊಡಗಿನ ಗೌರಮ್ಮ ಸಮಗ್ರ ಸಣ್ಣ ಕಥೆಗಳು ಪುಸ್ತಕ ಸೇರಿದಂತೆ ಇತರೆ ಇತಿಹಾಸ ಪುರುಷರ ಪುಸ್ತಕಗಳ ತಿರುವಿ ಹಾಕಿದರಲ್ಲದೆ ಇತರೆ ಪ್ರಕಾಶಕರ ಮಳಿಗೆಗಳಿಗೂ ಭೇಟಿ ನೀಡಿ, ಆಯಾಯ ಪ್ರತಿನಿಧಿಗಳೊಂದಿಗೆ ಕುಶಲೋಪರಿ ನಡೆಸಿದರು.

ದಸರಾ ಮಹೋತ್ಸವದ ಭದ್ರತಾ ಕಾರ್ಯಕ್ಕೆ ಬಂದಿದ್ದ ಎಎಸ್‌ಐ ನಾಗರಾಜ್ ಎಂಬುವವರು ಕೆಲವು ಕಾನೂನು ಪುಸ್ತಕಗಳನ್ನು ವಿಜಯವಾಹಿನಿ ಪಬ್ಲಿಕೇಷನ್‌ನಲ್ಲಿ ಖರೀದಿಸಿ ಪುಸ್ತಕ ಪ್ರೇಮವನ್ನು ಮೆರೆದರು. ಈ ನಡುವೆ ಸ್ಪರ್ಧಾತ್ಮಕ ಪರೀಕ್ಷಾರ್ಥಿಗಳು ರಿಯಾಯಿತಿ ದರದಲ್ಲಿ ಸಿಗುವ ಪುಸ್ತಕಗಳನ್ನು ಮುಗಿಬಿದ್ದು ಖರೀದಿಸುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ಲೇಖಕ ಎಸ್.ರಮೇಶ್ ರಚಿತ ಕಾಶ್ಮೀರ ಡೈರಿ, ನಾಗಾ ರಹಸ್ಯ, ಮೆಲೂಹದ ಮೃತ್ಯುಂಜಯ ಹಾಗೂ ಗೌರಿಗೋಪಾಲ ದಾಸರ ಮಹಾ ವಿಸ್ಮಯ ಪುಸ್ತಕಗಳಿಗೆ ಓದುಗರಿಂದ ಬೇಡಿಕೆ ಬಂದಿದೆ ಎಂದು ಧಾತ್ರಿ ಬುಕ್ ಹೌಸ್ ಮಳಿಗೆ ಪ್ರತಿನಿಧಿ ಪತ್ರಿಕೆಗೆ ತಿಳಿಸಿದರು. ಈ ವೇಳೆ ಬೆಂಗಳೂರು ಗಾನ ಸೌರಭ ಯಕ್ಷಗಾನ ಶಾಲೆಯ ಕಲಾವಿದರಿಂದ ಪ್ರಸಂಗ: ಕಂಸವಧೆ ಪ್ರದರ್ಶನ ನೀಡಿ, ಪ್ರೇಕ್ಷಕರಿಂದ ಮೆಚ್ಚುಗೆಗಳಿಸಿದರು.

ನಕ್ಕರೆ ಅದೇ ಸ್ವರ್ಗ

ಹೆಂಡತಿ : "ಏನು ಕಾಲೇಜಿಗೆ ಹೋಗಲ್ವೆ? ತಲೆಬಾಚಲು ಕನ್ನಡಿ ಮುಂದೆ ನಿಂತು ಎಷ್ಟೋತ್ತಾಯ್ತು?"
ಮರೆಗುಳಿ ಪ್ರೊಫೆಸರ್ : "ಈ ಕನ್ನಡಿಯಲ್ಲಿರುವವರನ್ನು ಎಲ್ಲೋ ನೋಡಿದ ಹಾಗಿದೆ. ಅದು ಯಾರೆಂಬುದನ್ನು ಜ್ಞಾಪಿಸಿಕೊಳ್ತಾ ಇದ್ದೀನಿ!"

ಮೈಸೂರು ಮಿತ್ರ
ಬುಧವಾರ, 18 ಅಕ್ಟೋಬರ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಜೀವನವೆಂಬ ವಿದ್ಯಾಲಯದಲ್ಲಿ ಎಲ್ಲರೂ ವಿದ್ಯಾರ್ಥಿಗಳೇ. – ಸೂಕ್ತಿ


ವೇದ ಸುಳ್ಳಾದರೂ	ಎಲೆ ಎತ್ತು ಎಂದರೆ
ಗಾದೆ ಸುಳ್ಳಾಗದು	ಉಂಡವರೆಷ್ಟು ಅಂದ

ನಿಮ್ಮ ಪತ್ರಗಳು

ಸಾಧಕನಿಗೆ ಸಂದ ಗೌರವ

ಮಾನ್ಯರೆ,

ಹಿರಿಯ ಪತ್ರಕರ್ತರು, 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್'



ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಅವರಿಗೆ ಮೈಸೂರು ವಿಶ್ವವಿದ್ಯಾನಿಲಯ ಗೌರವ ಡಾಕ್ಟರೇಟ್ ಪ್ರಕಟಿಸಿರುವುದು ಸ್ವಾಗತಾರ್ಹ ವಿಚಾರವಾಗಿದೆ. ತಮ್ಮ ಸಮೀಪ ವಲಯದಲ್ಲಿ ಹಾಗೂ ಪತ್ರಿಕಾ ವಲಯದಲ್ಲಿ "ಕೆಬಿಜಿ" ಎಂದೇ ಖ್ಯಾತರಾದ ಗಣಪತಿಯವರು ಕಾನೂನು ಪದವೀಧರರು. ಆದರೆ ಪತ್ರಿಕಾ ಮಾಧ್ಯಮದತ್ತ ಅವರ ಆಸಕ್ತಿ ಅರಳಿತು. ಕೆಲವು ವರ್ಷಗಳ ಕಾಲ ಮುಂಬಯಿಯಲ್ಲಿ ಪತ್ರಕರ್ತರಾಗಿ ಸೇವೆ ಸಲ್ಲಿಸಿದ್ದ ಗಣಪತಿಯವರಿಗೆ ತಾವೇ ಒಂದು ಪತ್ರಿಕೆಯನ್ನು ಏಕೆ ಪ್ರಾರಂಭಿಸಬಾರದು ಎಂಬ ಹಂಬಲ ಚಿಗುರೊಡೆಯಿತು. ಅದರ ಪ್ರಥಮ ಪ್ರಯೋಗವೇ 1978ರ ಫೆಬ್ರವರಿಯಲ್ಲಿ ಪ್ರಾರಂಭವಾದ ಆಂಗ್ಲ ಭಾಷೆಯ 'ಸ್ಟಾರ್ ಆಫ್ ಮೈಸೂರ್' ಸಂಜೆ ದೈನಿಕ. ಇಂದು ಈ ಪತ್ರಿಕೆ 45 ಸುದೀರ್ಘ ವರ್ಷಗಳನ್ನು ದಾಟಿ ತನ್ನ ವಿಜಯಯಾತ್ರೆ ಮುಂದುವರೆಸಿದೆ. 'ಸ್ಟಾರ್ ಆಫ್ ಮೈಸೂರ್' ಅತೀ ಹೆಚ್ಚು ಪ್ರಸಾರವುಳ್ಳ ಸ್ಥಳೀಯ ಇಂಗ್ಲಿಷ್ ಪತ್ರಿಕೆಯಾಗಿದ್ದು, ಜೊತೆಗೆ ಜನಪ್ರಿಯತೆಯನ್ನು ಸಹ ಗಳಿಸಿದೆ. ಇನ್ನು 1980 ರಲ್ಲಿ ಪ್ರಾರಂಭವಾದ 'ಮೈಸೂರು ಮಿತ್ರ' 43 ವರ್ಷಗಳ ಸುದೀರ್ಘ ಪಯಣದಲ್ಲಿ ಅತೀ ಹೆಚ್ಚು ಪ್ರಸಾರವುಳ್ಳ ಪ್ರಾದೇಶಿಕ ದಿನಪತ್ರಿಕೆಯಾಗಿ ರೂಪುಗೊಂಡಿದೆ. ಯಾವ ರಾಜ್ಯಮಟ್ಟದ ಪತ್ರಿಕೆಯಲ್ಲೂ ಪ್ರಕಟವಾಗದ ಕೆಲವು ವಿಶಿಷ್ಟ ವರದಿ ಹಾಗೂ ಸುದ್ದಿಗಳು ಈ ಪತ್ರಿಕೆಯಲ್ಲಿ ಪ್ರಕಟವಾಗುತ್ತಿವೆ. ಈ ಪತ್ರಿಕೆಯನ್ನು ಸ್ಥಳೀಯ ಪತ್ರಿಕೆ ಎಂದು ಕರೆಯಲು ಸಾಧ್ಯವಿಲ್ಲ. ಏಕೆಂದರೆ ಇದರ ಪ್ರಸರಣ ಮೈಸೂರು ಜಿಲ್ಲೆ ಸೇರಿದಂತೆ ಐದು ಜಿಲ್ಲೆಗಳನ್ನು ವ್ಯಾಪಿಸಿದೆ. ವಿಶೇಷ ಲೇಖನಗಳ ಜೊತೆಗೆ ಪ್ರಸ್ತುತ ವಿದ್ಯಮಾನಗಳಿಗೆ ಸಂಬಂಧಿಸಿದ ಲೇಖನಗಳನ್ನು ಈ ಪತ್ರಿಕೆಯಲ್ಲಿ ಓದಬಹುದು.

ಕೆಬಿಜಿಯವರ ಸಾಧನೆಯ ಹಿಂದೆ ನಾನು ಕಂಡದ್ದು ಅವರ ಶಿಸ್ತು ಬದ್ಧ ಜೀವನ ಹಾಗೂ ನೇರ ನಡೆ ನುಡಿ. ಗಂಭೀರ ಚಿಂತನೆಗಳಿಗೆ ಹಾಸ್ಯದ ಲೇಪ ಹಚ್ಚಿ ಓದುಗರಿಗೆ ತಮ್ಮ ಭಾವನೆಗಳನ್ನು ಅಭಿವ್ಯಕ್ತಗೊಳಿಸುವ ಕೆಬಿಜಿಯವರನ್ನು ಅತೀ ಹತ್ತಿರದಿಂದ ನೋಡುವ ಅವಕಾಶ ಕೆಲವು ವರ್ಷಗಳ ಹಿಂದೆ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಯಲ್ಲಿ ಉಪ ಸಂಪಾದಕನಾಗಿ ಕೆಲಸ ಮಾಡುವ ಸಂದರ್ಭದಲ್ಲಿ ನನಗೆ ಒದಗಿ ಬಂದಿತ್ತು. ಕೆಬಿಜಿಯವರ ಸಮಯಪಾಲನೆ ಬೆರಗು ಹುಟ್ಟಿಸುವಂತಹುದು. ಅವರು 'ಸ್ಟಾರ್ ಆಫ್ ಮೈಸೂರು' ಮತ್ತು 'ಮೈಸೂರು ಮಿತ್ರ' ಪತ್ರಿಕೆಗಳಲ್ಲಿ ಬರೆಯುವ ಲೇಖನಗಳು ಕುತೂಹಲಕಾರಿಯಾಗಿರುವುದರ ಜೊತೆಗೆ ಓದುಗರನ್ನು ಸೆಳೆಯುವ ಶಕ್ತಿ ಹೊಂದಿವೆ. ಈ ಪತ್ರಿಕೆಗಳಲ್ಲಿ ಕೆಲಸ ಮಾಡಿದ ಹಲವಾರು ಪತ್ರಕರ್ತರು ಇಂದು ಸಮಾಜದ ಉನ್ನತ ಸ್ಥಾನಗಳಲ್ಲಿದ್ದಾರೆ. ಕಳೆದ ಐದು ದಶಕಗಳ ಅವಧಿಯಲ್ಲಿ ಮೈಸೂರಿನಲ್ಲಿ ನೂರಾರು ಪತ್ರಿಕೆಗಳು ಜನ್ಮ ತಾಳಿದ್ದರೂ ಸಹ, ಕೇವಲ ಬೆರಳೆಣಿಕೆಯಷ್ಟು ಪತ್ರಿಕೆಗಳು ಮಾತ್ರ ಸ್ಥಿರವಾಗಿ ಉಳಿದಿವೆ. ಅವುಗಳ ಪೈಕಿ 'ಸ್ಟಾರ್ ಆಫ್ ಮೈಸೂರ್' ಮತ್ತು 'ಮೈಸೂರು ಮಿತ್ರ' ಪತ್ರಿಕೆಗಳು ಮುಂಚೂಣಿಯಲ್ಲಿವೆ. ಕೆಬಿಜಿಯವರ ಈ ಎಲ್ಲಾ ಸಾಧನೆಗಳ ಹಿಂದೆ ಅವರ ಕುಟುಂಬದ ಸದಸ್ಯರು ಮತ್ತು ಇಡೀ ಪತ್ರಿಕಾ ಬಳಗವೇ ಇದೆ. ಕೆಬಿಜಿಯವರಿಗೆ ಈ ಸಂದರ್ಭದಲ್ಲಿ ಹೃತ್ಪೂರ್ವಕ ಅಭಿನಂದನೆಗಳು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಅರ್ಹ ವ್ಯಕ್ತಿತ್ವಕ್ಕೆ ದೊರೆತ ಡಾಕ್ಟರೇಟ್

ಮಾನ್ಯರೇ,

ರಾಜ್ಯದ ಪ್ರತಿಷ್ಠಿತ ಹಾಗೂ ಹೆಮ್ಮೆಯ ನಮ್ಮ ಮೈಸೂರು ವಿಶ್ವವಿದ್ಯಾನಿಲಯವು ನೀಡುವ ಗೌರವ ಡಾಕ್ಟರೇಟ್ ಪದವಿಗೆ ಭಾಜನರಾದ ನಾಡಿನ ಹಿರಿಯ ಪತ್ರಕರ್ತರು, ಹಳೇ ಮೈಸೂರು ಭಾಗದ ಪ್ರತಿಷ್ಠಿತ ದಿನಪತ್ರಿಕೆ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕರೂ ಆದ ಕೆಬಿ. ಗಣಪತಿ ಅವರಿಗೆ ಹೃದಯಪೂರ್ವಕ ಅಭಿನಂದನೆಗಳು. ನಿಷ್ಠಾವಂತ ಪತ್ರಿಕಾ ಧರ್ಮದ ಮುಖೇನ ಸಾಮಾಜಿಕ ಅಂಕುಡೊಂಕುಗಳನ್ನು ತಿದ್ದುತ್ತಾ, ವಿಶಿಷ್ಟ ಅಂಕಣಗಳು, ಸಮಯೋಚಿತ ಲೇಖನಗಳ ಮುಖೇನ ಓದುಗರ ಹೃದಯದಲ್ಲಿ ಸದಾ ಹಸಿರಾಗಿರುವ ಅತ್ಯಂತ ಕ್ರಿಯಾಶೀಲ ಹಾಗೂ ಕಲಾತ್ಮಕ ಬರಹಗಾರರು ಕೆ.ಬಿ. ಗಣಪತಿ. ನಿಮ್ಮಂತಹ ಅರ್ಹ ವ್ಯಕ್ತಿತ್ವಕ್ಕೆ ಗೌರವ ಡಾಕ್ಟರೇಟ್ ನೀಡುತ್ತಿರುವುದು ನಿಜಕ್ಕೂ ಪದವಿಯ ಮೌಲ್ಯ ಹೆಚ್ಚಿದಂತಾಗಿದೆ.

–ಎಂ. ಎನ್ ತುಕಾರಾಮ್ ರಾವ್, ಪ್ರಜ್ಞಾವಂತ ನಾಗರಿಕ ಬಳಗ, ಮೈಸೂರು.

ಇದು ಸರಿಯೇ

ಮಾನ್ಯರೆ,

ದೇವರು, ಅನ್ಯಧರ್ಮ ಅದರಲ್ಲೂ ಬ್ರಾಹ್ಮಣ ವರ್ಗದ ಬಗ್ಗೆ ಯಃಕಶ್ಚಿತ್ ಮಾತನಾಡಿ ಸುಲಭವಾಗಿ ಪ್ರಚಾರ ಪಡೆಯುತ್ತಿರುವ ಮಂದಿಯನ್ನು ವಿಚಾರವಾದಿ, ಪ್ರಗತಿಪರ, ಚಿಂತಕ ಎಂಬ ಪಟ್ಟ ಕಟ್ಟಲಾಗುತ್ತಿದೆ. ಹಾಗಾದ್ರೆ ದೇವರು ನಂಬುವನು, ನಮ್ಮ ಪೂರ್ವಜರ ಆಚಾರ ವಿಚಾರಗಳನ್ನು ಆಚರಿಸುವ, ಒಪ್ಪುವವರು ಅವಿಚಾರ ವಾದಿ, ಪ್ರತಿಗಾಮಿಗಳೇ? ಈ ಪ್ರಚಾರ ಬಿರುದಾಂಕಿತರನ್ನು ಏನೂ ಬಿರುದು ಕೊಡದೆ ಹೆಸರಿನಿಂದ ಗುರುತಿಸುವುದು ಸೂಕ್ತ.

–ಅಕ್ಕಿಹೆಬ್ಬಾಳ್ ವೆಂಕಟೇಶ್, ಮೈಸೂರು.

ಈ ಮಾರ್ಗಗಳಲ್ಲಿ ಬಸ್ ಸೇವೆ ಕಲ್ಪಿಸಿ

ಮಾನ್ಯರೆ,

ಈ ಹಿಂದೆ ಮೈಸೂರು ನಗರ ಬಸ್ ನಿಲ್ದಾಣದಿಂದ ಮಾರ್ಗ ಸಂಖ್ಯೆ 129, 130 ಬಸ್ ಮಾರ್ಗಗಳು ಸಿಬಿಎಸ್ ಮಾರ್ಗವಾಗಿ ಅಗ್ರಹಾರ, ಬಲ್ಲಾಳ್ ವೃತ್ತ, ಸರಸ್ವತಿಪುರಂ, ಗಂಗೋತ್ರಿ, ಎಸ್‌ಜೆಸಿಇ ಮಾರ್ಗವಾಗಿ ಸಂಚರಿಸುತ್ತಿದ್ದವು. ಗಂಗೋತ್ರಿಗೆ ಹೋಗುವ ವಿದ್ಯಾರ್ಥಿಗಳಿಗೆ, ಆಸ್ಪತ್ರೆಗೆ ತೆರಳುವ ರೋಗಿಗಳಿಗೆ, ಹಿರಿಯ ನಾಗರಿಕರಿಗೆ ಅನುಕೂಲವಾಗಿತ್ತು. ಈ ಮಾರ್ಗಗಳು ರದ್ದಾಗಿ ಅನೇಕ ವರ್ಷಗಳೇ ಕಳೆದಿವೆ. ಸಾರಿಗೆ ಅಧಿಕಾರಿಗಳು ಲಾಭದ ದೃಷ್ಟಿ ನೋಡದೇ ಸಾರ್ವಜನಿಕರಿಗೆ ಅನುಕೂಲವಾಗಿರುವ ಈ ಬಸ್ ಮಾರ್ಗಗಳಿಗೆ ಮರು ಚಾಲನೆ ನೀಡಲಿ.

– ನೊಂದ ನಾಗರಿಕರು, ಮೈಸೂರು.

ಕೆಆರ್‌ಎಸ್‌ನಲ್ಲಿ ವಾಹನಗಳಿಗೆ ಹೆಚ್ಚಿನ ಹಣ ವಸೂಲಿ

ಮಾನ್ಯರೆ,

ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲೂಕಿನ ಪ್ರಸಿದ್ಧ ಕೆಆರ್‌ಎಸ್ ಜಲಾಶಯ ವೀಕ್ಷಣೆಗೆ ಬರುವ ಸಾವಿರಾರು ಪ್ರಯಾಣಿಕರನ್ನು ಪ್ರತೀ ದಿನ ಸಾವಿರಾರು ವಾಹನಗಳು ಕರೆದು ತರುತ್ತವೆ. ಒಂದು ಕಾರಿಗೆ 100 ರೂ. ಹಣ ವಸೂಲಿ ಮಾಡುವ ಮೂಲಕ ದಂಧೆ ನಡೆಸುತ್ತಿದ್ದಾರೆ. ಇದರ ಬಗ್ಗೆ ಕೇಳಿದರೆ ಅವಾಚ್ಯ ಶಬ್ದಗಳ ಬಳಕೆ ಮಾಡುತ್ತಾರೆ. ಇಷ್ಟು ದುಬಾರಿ ಮೊತ್ತ ವಿಧಿಸಿದರೆ ಪ್ರವಾಸಿಗರ ಸಂಖ್ಯೆ ಕಡಿಮೆಯಾಗುವ ಸಾಧ್ಯತೆ ಇದೆ. ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನ ಹರಿಸಿ ಟೋಲ್ ಹಣ ಕಡಿಮೆ ಮಾಡಿದರೆ ಎಲ್ಲರಿಗೂ ಅನುಕೂಲವಾಗುತ್ತದೆ.

–ಎಸ್. ಆನಂದ ಕುಮಾರ್ ಎಸ್, ಕ್ವಾಲಿಟಿ ಹಾಲಿಡೇಸ್, ಮೈಸೂರು

ಜಗನ್ಮಾತೆ ಶ್ರೀ ಲಲಿತಾಂಬಿಕೆ

ಶ್ರೀ ವಿದ್ಯಾಂ ಜಗತಾಂ ಧಾತ್ರೀಂ
ಸರ್ಗಸ್ಥಿತಿಲಯೇಶ್ವರೀಮ್ ।
ನಮಾಮಿ ಲಲಿತಾಂ ನಿತ್ಯಾ
ಮಹಾತ್ರಿಪುರಸುಂದರೀಮ್ ॥
ಪಾಶಾಂಕುಶೇಕ್ಷು ಕೋದಂಡ
ಪ್ರಸೂನವಿಶಾಖಾಂ ಸ್ಮರೇತ್ ।
ಉದ್ಯತ್ಕೋಟಿರವಿಪ್ರಖ್ಯಾಂ
ಮಹಾತ್ರಿಪುರಸುಂದರೀಮ್ ॥



ಗುರುವಾರ (ಅ. 19) ನವರಾತ್ರಿಯ ಶ್ರೀ ಲಲಿತಾಪಂಚಮಿಯ ಆಚರಣೆ ತನ್ನಿಮಿತ್ತ ಈ ಲೇಖನ



ನಂ. ಶ್ರೀಕಂಠ ಕುಮಾರ್
ಮೊ: 9481067333

"ಮೈಸೂರಿನ ಅವಧೂತ ದತ್ತಪೀಠದ ಪೀಠಾಧಿಪತಿಗಳಾದ ಶ್ರೀ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿರವರ ಆಶಯ ಹಾಗೂ ಸಂಕಲ್ಪದಂತೆ ಶ್ರೀ ಲಲಿತಾ ಸಹಸ್ರನಾಮ ಲೇಖನ ಮಹಾಯಜ್ಞವನ್ನು ಕಿರಿಯ ಶ್ರೀಗಳವರಾದ ಶ್ರೀ ಶ್ರೀ ದತ್ತವಿಜಯಾನಂದ ತೀರ್ಥ ಸ್ವಾಮೀಜಿರವರ ಮಾರ್ಗದರ್ಶನದಲ್ಲಿ ಆಯೋಜಿಸಲಾಗಿದ್ದು ಶ್ರೀ ಲಲಿತಾ ಕೋಟಿನಾಮ ಯಜ್ಞದಲ್ಲಿ ಸ್ತ್ರೀ–ಪುರುಷ–ಬಾಲ–ವೃದ್ಧಾದಿಗಳು ಯಾವುದೇ ಭೇದವಿಲ್ಲದೆ ಭಾಗವಹಿಸಬಹುದಾಗಿದೆ. ಶ್ರೀ ಲಲಿತಾ ಸಹಸ್ರನಾಮ ಶ್ಲೋಕವನ್ನು ಶ್ರದ್ಧಾಭಕ್ತಿಯಿಂದ ಬರೆಯುವುದೇ ಈ ಯಜ್ಞದ ನಿಯಮ. ಸುಮಾರು 18 ಲಕ್ಷ ಪುಸ್ತಕಗಳಲ್ಲಿ ಬರೆದ ಸ್ತೋತ್ರವನ್ನು ಶ್ರೀ ಲಲಿತಾ ಮಾತೆಗೆ ಸಮರ್ಪಿಸಲಾಗುವುದು. ಈ ಪುಣ್ಯಕಾರ್ಯದಲ್ಲಿ ಆಸಕ್ತ ಆಸ್ತಿಕರು ಭಾಗವಹಿಸಿ ಶ್ರೀ ದೇವಿ ಕೃಪೆಗೆ ಪಾತ್ರರಾಗಬಹುದಾಗಿದೆ.

ನವರಾತ್ರಿ ಮಹೋತ್ಸವದ ಐದನೇ ದಿನವಾದ ಪಂಚಮಿಯಂದು ಶ್ರೀ ಲಲಿತಾಪಂಚಮಿ ಎಂದು ಆಚರಿಸಲಾಗುತ್ತದೆ. ಪಂಚಮ ಸಂಖ್ಯೆ ಅಮ್ಮನವರಿಗೆ ಬಹಳ ಪ್ರಿಯವಾದದ್ದು ಹಾಗಾಗಿ ಶ್ರೀದೇವಿಯ ಅನುಷ್ಠಾನ, ಪೂಜಾಧಿಗಳನ್ನು ಮಾಡಲು ವಿಶೇಷ ದಿನವೂ ಆಗಿದೆ. ಅಂದು ಶ್ರೀ ಲಲಿತಾದೇವಿಯನ್ನು ಎಲ್ಲೆಡೆ ಪೂಜಿಸಲಾಗುತ್ತದೆ.

ಸನಾತನ ಧರ್ಮದಲ್ಲಿ ಮುಕ್ಕೋಟಿ ದೇವತೆಗಳು, ದ್ವಾದಶ ಶಿವಪೀಠಗಳು, ಐವತ್ತನಾಲ್ಕು ಶಕ್ತಿ ಪೀಠಗಳು, ನಾಲ್ಕು ವೇದಗಳು, ಹನ್ನೊಂದು ಉಪನಿಷತ್ತುಗಳು, ಹದಿನೆಂಟು ಪುರಾಣಗಳು, ಎರಡು ಮಹಾಕಾವ್ಯಗಳು, ಅದ್ವೈತ, ದ್ವೈತ ಮತ್ತು ವಿಶಿಷ್ಟಾದ್ವೈತ ಸಿದ್ಧಾಂತಗಳು, ನೂರಾರು ಸಹಸ್ರನಾಮ ಸ್ತೋತ್ರಗಳು ಧರ್ಮದ ಸಾರವನ್ನು ನಿರಂತರವಾಗಿ ಮನುಕುಲಕ್ಕೆ ನೀಡುತ್ತಾ ಮಾರ್ಗದರ್ಶಿಯಾಗಿ ಬದುಕನ್ನು ಶಾಂತಿ, ನೆಮ್ಮದಿಯಿಂದ ಹಸನಾಗಿಸಿವೆ. ಅಂತಹವುಗಳಲ್ಲಿ ಪ್ರಮುಖವಾಗಿ ಹತ್ತು ಸಹಸ್ರನಾಮಗಳು ಶ್ರೇಷ್ಠವಾಗಿದೆ. ಅವೆಂದರೆ ಗಂಗಾ, ಭವಾನಿ, ಗಾಯಿತ್ರಿ, ಮಹಾಕಾಳಿ, ಲಕ್ಷ್ಮೀ, ಸರಸ್ವತಿ, ರಾಜರಾಜೇಶ್ವರಿ, ಬಾಲಾ, ಶ್ಯಾಮಲಾ ಹಾಗೂ ಶ್ರೀಲಲಿತಾ ಸಹಸ್ರನಾಮಗಳು. ಇವುಗಳಲ್ಲಿ ಶ್ರೀಲಲಿತಾ ಸಹಸ್ರನಾಮವು ಬರೀ ಸ್ತೋತ್ರವಲ್ಲ, ಶ್ರೇಷ್ಠ ಶಾಸ್ತ್ರವೂ ಆಗಿದೆ.

ಮಹರ್ಷಿ ವೇದವ್ಯಾಸ ಪ್ರಣೀತವಾದ ಬ್ರಹ್ಮಾಂಡ ಪುರಾಣದ ಉತ್ತರಖಂಡದಲ್ಲಿ ಶ್ರೀ ಹಯಗ್ರೀವರು ಅಗಸ್ತ್ಯ ಮಹರ್ಷಿಗಳಿಗೆ ಸಂವಾದ ರೂಪವಾಗಿ ಶ್ರೀಲಲಿತಾ ಸಹಸ್ರನಾಮವನ್ನು ವಿವರಿಸಿದ್ದಾರೆ. ಮಹರ್ಷಿ ಅಗಸ್ತ್ಯರು ಸಮುದ್ರವನ್ನೇ ಅಪೋಶಣಗೊಂಡವರು, ಸುಮೇರು ಪರ್ವತವನ್ನು ತಲೆತಗ್ಗಿಸುವಂತೆ ಮಾಡಿದವರು. ಮಾನವ ಜೀವನದ ವ್ಯರ್ಥಗತಿಯನ್ನು ತಡೆಯುವ ಉಪಾಯವನ್ನು ತಿಳಿಸುವಂತೆ ಶ್ರೀ ಹಯಗ್ರೀವರಲ್ಲಿ ಬೇಡಿದಾಗ ಶ್ರೀಲಲಿತೆಯ ಪ್ರೇರಣೆಯಂತೆ ಶ್ರೀ ಹಯಗ್ರೀವರು ಸಹಸ್ರನಾಮವನ್ನು ತಿಳಿಸಿಕೊಟ್ಟು ಇದನ್ನು ಲೋಕದಲ್ಲಿ ಹರಡಬೇಕೆಂದು ಅನುಗ್ರಹಿಸಿದರು. ಬಹುಜನರಿಂದ ಬಹುವಿಧವಾಗಿ ಪರಮೇಶ್ವರಿಯನ್ನು ಸ್ತುತಿಸಲ್ಪಟ್ಟಿದ್ದು ಶ್ರೀಲಲಿತಾ ಸಹಸ್ರನಾಮ. ಶ್ರೋತೃ ಅಗಸ್ತ್ಯ ಮಹರ್ಷಿಯ ಪತ್ನಿ ಕವೇರತನೆಯೆ ಲೋಪಾಮುದ್ರೆಯು ಶ್ರೀಲಲಿತಾ ಸಹಸ್ರನಾಮ ಪಾರಾಯಣ ಮಾಡಿದವರಲ್ಲಿ ಮೊದಲ ಶ್ರೇಷ್ಠರೆನಿಸಿ ಪಾವನವಾಗಿಸಿದ್ದಾರೆ. ಭವಸಾಗರದಲ್ಲಿ ದಡವ ಹುಡುಕುತ್ತಾ ಈಜುತ್ತಿರುವ ಮಾನವ ಮಾತ್ರವೇ ಆದ ನಮಗೆ ಹಲವು ಆಸರೆಗಳಲ್ಲಿ ಶ್ರೀಲಲಿತಾ ಸಹಸ್ರನಾಮವೂ ಸಹ ದಾರಿದೀಪವೆಂದು ನಿಸ್ಸಂಕೋಚದಿಂದ ಹೇಳಬಹುದು. ಕ್ರಿ.ಶ 788ರಲ್ಲಿ ಶ್ರೀ ಪರಮೇಶ್ವರನ ಅವತಾರಿಗಳಾದ ಶ್ರೀ ಶಂಕರ ಭಗವತ್ಪಾದರು ಜಗದ್ಗುರುಗಳಾಗಿ ವಿರಾಜಿಸಿ ಲಲಿತಾ ತ್ರಿಶತಿ ಭಾಷ್ಯವನ್ನು, ಶ್ರೀಲಲಿತಾ ಪಂಚರತ್ನಮ್, ಮೀನಾಕ್ಷಿ ಪಂಚರತ್ನಮ್ ಮೀನಾಕ್ಷಿ ಸ್ತೋತ್ರಮ್ ರಚಿಸಿ ಶ್ರೀಲಲಿತಾಂಬಿಕೆಯನ್ನು ಆರಾಧಿಸಿದ್ದಾರೆ.

ಸಾಮಾನ್ಯವಾಗಿ ಮಾನವ ಫಲಾಪೇಕ್ಷಿ ಎಂದರೆ ತಪ್ಪಾಗಲಾರದು. ಆದರೆ ಮಾನವನು ತಾನು ಪಡೆದ ಪಾಲಲ್ಲಿ ತನ್ನ ಪಾಲೆಷ್ಟು, ಸಮಾಜದ ಪಾಲೆಷ್ಟು ಎಂಬುದನ್ನು ಅರಿಯಬೇಕು. ಹಾಗೆಯೇ ತಾನು ಪಡೆದ ಫಲವನ್ನು ನ್ಯಾಯಬದ್ಧವಾಗಿ ಹಂಚಿಕೆ ಮಾಡಬೇಕು. ಆಗ ಇದು ಸತ್ಫಲ ಅನ್ನಿಸುವುದು. ಅಂತೆಯೇ ತನ್ನ ಸತ್ಫಲದ ಉದ್ದೇಶ ನೆರವೇರಿತೆಂದು ತೃಪ್ತಭಾವ ದೈವದ್ದಾಗಿದೆ. ಇದನ್ನೇ ದೈವೀರಕ್ಷಣೆ ಎಂದು ಹೇಳಬಹುದು. ಸತ್ಕಾರ್ಯ ಮಾಡಲು, ದೈವಭಕ್ತನಾಗಲು ಕುಲ, ಜಾತಿಗಳ, ಭೇದವಿಲ್ಲ. ಸ್ತ್ರೀ–ಪುರುಷರು ಇಲ್ಲಿ ಸಮಾನರು. ಯಾರೂ ನಿಷಿದ್ಧರಲ್ಲ. ಹಾಗಾಗಿ ಅರಿವು ಎಲ್ಲರ ಗುರು. ಶ್ರೀಲಲಿತೋಪಾಸನೆಯ ಮೂಲಕ, ಆಕೆಯಿಂದ ವರರೂಪದಲ್ಲಿ ಮಾನವ ಪಡೆಯುವ ಫಲವೇ ಅರಿವು. ಆ ಅರಿವೆಂದರೆ ಶ್ರೀಲಲಿತೆಯನ್ನು ಅರಿಯುವುದು. ಕೊಡುಗೈಯ ಸಾಮ್ರಾಜ್ಞಿಯಾದ ಶ್ರೀಲಲಿತಾ ಪರಮೇಶ್ವರಿಯು ಸುಗುಣ, ನಿಜ ಆರಾಧಕರ ರಕ್ಷಕಿ. ಅವಳ ಕೃಪೆಯಾದರೆ ಸಾಕು, ಅಧರ್ಮವಲ್ಲದ ಎಲ್ಲವೂ ಭಕ್ತರ ಮನೆಯಲ್ಲಿ ತುಂಬುವುದು. ಧರ್ಮ ತಪ್ಪಿದರೆ ಪಡೆದುದ್ದೆಲ್ಲ ಆಕೆಯ ಧರ್ಮ ಭಂಡಾರಕ್ಕೆ ಹಿಂತಿರುಗಿ ಬಿಡುವುದು. ಇದೇ ಶ್ರೀಲಲಿತಾ ಸಹಸ್ರನಾಮದ ಪಾರಾಯಣದ ಫಲ ಪ್ರಾಪ್ತಿಯ ಸಾರ. ಶ್ರೀ ಲಲಿತಾ ಸಹಸ್ರನಾಮ ಸ್ತೋತ್ರ ರತ್ನದ ಪಾರಾಯಣದ ಫಲ ನಿರೂಪಣೆಯು ಬ್ರಹ್ಮಾಂಡ ಪುರಾಣದ ಉತ್ತರ ಭಾಗದ ಮೂರನೇ ಅಧ್ಯಾಯದಲ್ಲಿ ಸರಳ ರೂಪದಲ್ಲಿದೆ ಎನ್ನಲಾಗಿದೆ. ಪಾರಾಯಣವು ಅಕಾಲ ಮೃತ್ಯುವನ್ನು ತಡೆಯುವಂತಹದು. ಮೃತ್ಯು ಭಯ ನಿವಾರಣೆ, ಬಹುವಿಧ ಜ್ವರ ತಾಪಾದಿಗಳನ್ನು ಶಾಂತಗೊಳಿಸುವುದು, ದೀರ್ಘಾಯುವನ್ನು ಕರುಣಿಸುವುದೂ ಆಗಿದೆ. ಈ ಸ್ತೋತ್ರಕ್ಕೆ ಸಮಾನವಾದುದು ಇದಕ್ಕೆ ಮುಂಚೆ ಇರಲಿಲ್ಲ, ಮುಂದೆಯೂ ಇರಲಾರದು ಎಂದು ಅಗಸ್ತ್ಯ ಮಹರ್ಷಿಗೆ ಶ್ರೀ ಹಯಗ್ರೀವರು ತಿಳಿಸುತ್ತಾರೆ. ಪಾರಾಯಣ ಮಾಡುವುದರಿಂದ ಧರ್ಮಾರ್ಥ, ಕಾಮ, ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳನ್ನು ದಯಪಾಲಿಸುವಂತಹದು. ಶ್ರೀಲಲಿತಾಂಬೆಗೆ ಸಂತೋಷವನ್ನುಂಟು ಮಾಡುವುದೂ ಆಗಿದೆ. ಪರಮಾತ್ಮನ ಇಚ್ಛೆಯನ್ನು ನೆರವೇರಿಸಲು ಅವನ ಸಾನ್ನಿಧ್ಯದಿಂದಲೇ ಶಕ್ತಿಯನ್ನು ಪಡೆದು ಪ್ರಕೃತಿ ಸೃಷ್ಟಿಶೀಲವಾಯಿತು. ಈ ಮೂಲ ಪ್ರಕೃತಿಯೇ ಸ್ತ್ರೀ. ಇದನ್ನು ಜ್ಞಾನಿಗಳು ಲಲಿತಾ ಎಂಬ ಹೆಸರಿನಿಂದ ಕರೆದಿದ್ದಾರೆ. ಇಂತಹ ಮೂಲ ಪ್ರಕೃತಿಯಾದ ಶ್ರೀಲಲಿತಾ ದೇವಿಯು ಸೌಂದರ್ಯ ಶಾಲಿನಿ, ನಿತ್ಯಾನಂದ ದಾಯಿನಿ. ಇವಳು ಶಕ್ತಿ ಸ್ವರೂಪಿಣಿಯೂ ಆಗಿರುವಳು. ಅಲ್ಲದೇ ಪ್ರಭಾಶಕ್ತಿ, ಮಂತ್ರಶಕ್ತಿ ಮತ್ತು ಉತ್ಸಾಹಶಕ್ತಿ ಎಂಬ ತ್ರಿಶಕ್ತ್ಯಾತ್ಮಕಳಾಗಿರುವಳು. ಹಾಗೂ ಇಚ್ಛಾ, ಜ್ಞಾನ, ಕ್ರಿಯಾಶಕ್ತಿ ಸಂಪನ್ನತೆಯನ್ನು ಹೊಂದಿ, ನಾಮರೂಪಾತ್ಮಕವಾಗಿ ಈ ಜಗತ್ತಿನ ಸೃಷ್ಟಿ, ಸ್ಥಿತಿ ಲಯಗಳಿಗೆ ಕಾರಣಳಾಗಿರುವಳೆಂಬುದು ಉಪನಿಷತ್ತಿನಲ್ಲಿ ತಿಳಿದು ಬರುತ್ತದೆ. ಆದುದರಿಂದ ಈ ದೇವಿಯನ್ನು ಜಗನ್ಮಾತೆಯೆಂದೂ ಕರೆದಿದ್ದಾರೆ.

ಒಮ್ಮೆ ದೇವತೆಗಳು ನಾರದ ಮಹರ್ಷಿಯ ಸಲಹೆಯಂತೆ ಮಹಾಯಾಗವನ್ನು ಕೈಗೊಂಡರು. ಆಗ ಶುಕಾಚಾರ್ಯರ ಸೂಚನೆಯಂತೆ ಭಂಡಾಸುರನು ದೇವತೆಗಳು ಕೈಗೊಂಡ ಯಾಗಕ್ಕೆ ತೊಡಕನ್ನುಂಟು ಮಾಡಲು ಬಂದನು. ಆಗ ಅವನನ್ನು ನಿಗ್ರಹಿಸಲು ಚಿದಗ್ನಿಕುಂಡದಿಂದ ಪರಾಶಕ್ತಿಯು ಉದಯಿಸಿದಳು. ಬ್ರಹ್ಮ, ವಿಷ್ಣು, ಶಿವಸ್ವರೂಪಳೂ, ಸೌಂದರ್ಯ ನಿಧಿಯೂ, ಆನಂದರಸ ಸಾಗರಳೂ, ಕಾಂತಿಯುಕ್ತಳೂ, ಸರ್ವಾಭರಣ ಭೂಷಿತೆಯೂ, ಪಾಶಾಂಕುಶ ಇಕ್ಷು ಕೋದಂಡಧರಳೂ ಆದ ಮಹಾದೇವಿಯ ತೇಜಸ್ಸಿಗೆ ಅಸುರರು ಅಂಜಿದರು. ಆಗ ದೇವಿಯು ದೇವತೆಗಳ ಮೊರೆ ಆಲಿಸಿ, ಅಭಯವಿತ್ತು ಭಂಡಾಸುರನೊಡನೆ ಘೋರ ಕಾಳಗ ನಡೆಸಿ ಅವನ ಸಂಹಾರ ಮಾಡಿದಳು. ಬ್ರಹ್ಮಾದಿ ದೇವತೆಗಳ ಪ್ರಾರ್ಥನೆಯಂತೆ ದೇವಿಯು ಕಾಮೇಶ್ವರನನ್ನು ಮದುವೆಯಾಗಿ ಮಹಾರಾಜ್ಞಿಯಾದಳು. ಬ್ರಹ್ಮನು ಅವಳನ್ನು ಕಾಮಾಕ್ಷಿ, ಕಾಮೇಶ್ವರಿ, ಲಲಿತಾ ಎಂದು ಸಂಬೋಧಿಸಿದನು. ದೇವತೆಗಳ ಪ್ರಾರ್ಥನೆಯಂತೆ ವಿಶ್ವಕರ್ಮರು ಶ್ರೀಮಾತೆ ಕಾಮೇಶ್ವರಿಗಾಗಿ ಮೇರು ಪರ್ವತದ ಮಧ್ಯಭಾಗದಲ್ಲಿ ಶ್ರೀಪುರವೆಂಬ ನಗರವನ್ನು ನಿರ್ಮಿಸಿದರು. ಶ್ರೀಪುರದಲ್ಲಿ ಚಿಂತಾಮಣಿಯೆಂಬ ಗೃಹದಲ್ಲಿ ಬಿಂದುಪೀಠವೆಂದು ಖ್ಯಾತವಾದ ದೇವಿಪೀಠದಲ್ಲಿ ಶ್ರೀ ಕಾಮೇಶ್ವರನು ಆಸೀನನಾಗಿರುವನು. ಅವನ ತೊಡೆಯ ಮೇಲೆ ನಿತ್ಯ ಷೋಡಶಿಯಾದ ಶ್ರೀಲಲಿತಾಂಬಿಕೆಯು ಕುಳಿತಿರುವಳು. ಇದುವೇ ಶ್ರೀಚಕ್ರವು. ಶ್ರೀಚಕ್ರವು ರೇಖಾಕೃತಿಯಲ್ಲಿ ಶ್ರೀಪುರವನ್ನು ರೂಪಿಸಿದೆ. ಶ್ರೀಚಕ್ರವು ಕೆಂದಾವರೆ, ಕದಂಬ, ಸಂಪಿಗೆ, ಜಾಜಿ, ಮಲ್ಲಿಗೆ, ಸುರಹೊನ್ನೆ ಮುಂತಾದ ಪರಿಮಳಯುಕ್ತ ಪುಷ್ಪಗಳಿಂದಲೂ, ತುಳಸೀದಳ, ಬಿಲ್ವಪತ್ರೆಗಳಿಂದಲೂ ಪೂಜಿಸಲ್ಪಡುವುದು.

ಪಂಚದಶಾಕ್ಷರಿ ಮಂತ್ರವು ಲಲಿತೋಪಾಸನೆಗೆ ಮೂಲಮಂತ್ರ, ಇದು ಹದಿನೈದು ಬೀಜಾಕ್ಷರಗಳಿರುವ ಮಂತ್ರವಾಗಿದೆ. ಈ ಬೀಜಾಕ್ಷರಗಳಿಗೆ ಮಾತೃಕೆಗಳೆಂದೂ ಹೇಳಲಾಗಿದೆ. ಇದು ಶ್ರೀಚಕ್ರ ಹಾಗೂ ಸಹಸ್ರನಾಮಗಳಂತೆ ಶ್ರೀಲಲಿತೋಪಾಸನೆಯ ಮುಖ್ಯ ಅಂಗವಾಗಿದೆ. ಈ ಮಂತ್ರವನ್ನು ವಾಗ್ಭಟ ಕೂಟ, ಕಾಮರಾಜಕೂಟ, ಶಕ್ತಿಕೂಟ ಎಂದು ಮೂರು ಭಾಗಗಳಾಗಿ ತಿಳಿಸಲಾಗಿದೆ. ಪಂಚದಶಾಕ್ಷರಿ ಮಂತ್ರಕ್ಕೆ ಅತೀ ರಹಸ್ಯವಾದ ನಾಲ್ಕನೇ ಪಾದವುಂಟು. ಅದು ಸೇರಿದರೆ ಷೋಡಶಾಕ್ಷರಿ ಮಂತ್ರವಾಗುತ್ತದೆ. ಸಹಸ್ರನಾಮದಲ್ಲಿ ಮಂತ್ರ, ತಂತ್ರ, ತಾತ್ವಿಕ ಭಾವನೆಗಳೊಂದಿಗೆ ವೈದಿಕ, ಪೌರಾಣಿಕ ಭಾವನೆಗಳನ್ನು ಅತ್ಯಂತ ಸುಸಂಗತವಾಗಿ ಒಟ್ಟುಗೂಡಿಸಿ ದೇವಿ ತತ್ವವನ್ನು ರಸಭರಿತವಾಗಿ ತಿಳಿಸಿದ್ದಾರೆ. ಇದು ನಾಮಬಲಕ್ಕೆ ಶ್ರೀಲಲಿತಾ ಸಹಸ್ರನಾಮವೆಂದಾದರೂ ಇದರಲ್ಲಿ ಕಾಮಾಕ್ಷಿ, ಪಾರ್ವತಿ, ದುರ್ಗ, ಮಹಾಕಾಳಿ, ಸರಸ್ವತಿ, ಭವಾನಿ, ನಾರಾಯಣಿ, ಕಲ್ಯಾಣಿ, ರಾಜರಾಜೇಶ್ವರಿ, ಮಹಾತ್ರಿಪುರಸುಂದರಿ, ವೈಷ್ಣವಿ, ಮಹೇಶ್ವರಿ, ಚಂಡಿಕೆ, ವಿಶಾಲಾಕ್ಷಿಯಂತಹ ಅನೇಕ ದೇವಿ ಸ್ವರೂಪಗಳು ಗೋಚರಿಸುತ್ತದೆ. ಆದರೂ ಪ್ರಧಾನವಾದುದು ಶ್ರೀಲಲಿತಾಂಬಿಕೆ ನಾಮವು. ನಿಜಕ್ಕೂ ಲಲಿತಾಂಬಿಕೆ ಸಹಸ್ರನಾಮವಿಡೀ ಶ್ರೀರಾಗ ರಂಜಿತವಾದ ಮಹಾಗಾನ. ಈ ಗಾನದಲ್ಲೇ ಜ್ಞಾನ ವಿಜ್ಞಾನಗಳು ಮಿಳಿತಗೊಂಡಿವೆ. ಇದು ಗಾನಕ್ಕೆ ಗಾನ, ಜ್ಞಾನಕ್ಕೆ ಜ್ಞಾನ, ಸ್ತೋತ್ರಕ್ಕೆ ಸ್ತೋತ್ರ, ಶಾಸ್ತ್ರಕ್ಕೆ ಶಾಸ್ತ್ರವೂ ಆಗಿದೆ. ಶ್ರೀಲಲಿತಾ ಸ್ತೋತ್ರ ನಾಮವು ಶ್ರೀಮಾತಾ ಎಂಬ ನಾಮದಿಂದ ಆರಂಭವಾಗಿ ಶ್ರೀಲಲಿತಾಂಬಿಕಾ ಎಂಬ ನಾಮದಿಂದ ಅಂತಿಮಗೊಳ್ಳುತ್ತದೆ. ಇಚ್ಛಾ ಜ್ಞಾನ, ಕ್ರಿಯಾ ಶಕ್ತಿಯುಕ್ತಳೂ, ತ್ರಿಗುಣಾತೀತಳೂ ಆದ ಈ ದೇವಿಯಿಂದಲೇ ದುರ್ಗೆ, ಮಹಾಲಕ್ಷ್ಮಿ, ವಾಣಿದೇವಿಯರು, ಹರಿಹರ ಬ್ರಹ್ಮಾದಿ ದೇವತೆಗಳು ಪ್ರಭಾವಿತರಾಗಿದ್ದರೆಂದು ಶಾಸ್ತ್ರಗಳು ಹೇಳಿವೆ. ಇಂತಹ ಪರಮ ಪವಿತ್ರವಾದ ಶ್ರೀ ದೇವಿಯನ್ನು ಕೀರ್ತಿಸುವ ಮಂತ್ರರಾಜವೇ ಶ್ರೀಲಲಿತಾ ಸಹಸ್ರನಾಮ ಮಂತ್ರವು. ಶಿವ, ವಿಷ್ಣುವಾದಿ ದೇವತೆಗಳು, ಸೂರ್ಯ, ಚಂದ್ರ, ಇಂದ್ರಾದಿಗಳು, ಸಪ್ತಋಷಿಗಳು, ಲೋಪಾಮುದ್ರಾದಿ ಪತಿವ್ರತಾ ಶಿರೋಮಣಿಗಳು ಶ್ರೀಲಲಿತಾಂಬಿಕೆಯನ್ನು ಉಪಾಸನೆ ಮಾಡಿ ಧನ್ಯರಾಗಿದ್ದಾರೆ.

ಪರಮಶ್ರೇಷ್ಠವಾದ ಶ್ರೀಲಲಿತಾ ಸಹಸ್ರನಾಮವನ್ನು ಯಾರು ಪ್ರತಿದಿನ ಪಾರಾಯಣ ಮಾಡುವರೋ ಅಂತಹವರ ಸಕಲ ಅಭೀಷ್ಟಗಳನ್ನು ಶ್ರೀಲಲಿತೆಯು ಆನಂದದಿಂದ ಈಡೇರಿಸುವಳು. ಪ್ರತಿನಿತ್ಯ ಸಾಧ್ಯವಾಗದವರು ಪುಣ್ಯದಿನಗಳಲ್ಲಾದರೂ ಪಾರಾಯಣ ಮಾಡುವುದು ಉತ್ತಮ. ಪ್ರತಿ ಹುಣ್ಣಿಮೆಯ ಚಂದ್ರೋದಯ ಸಮಯದಲ್ಲಿ ಶ್ರೀಚಕ್ರಾರ್ಚನೆ ಮಾಡುವವರು ಶ್ರೀಲಲಿತಾದೇವಿಯ ಸ್ವರೂಪರಾಗಿರುವರು. ಆ ಮಾತೆಯು ಅವರ ರೂಪದಲ್ಲಿರುವಳು. ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸನ್ಯಾಸಾಶ್ರಮವನ್ನು ಸ್ವೀಕರಿಸಿದವರೆಲ್ಲರೂ ಸದಾ ಈ ನಾಮ ಜಪವನ್ನು ಮಾಡಬಹುದು. ಇದರಿಂದ ಆಯಾ ಧರ್ಮಾಚರಣೆಯಲ್ಲಿ ಸಂಭವಿಸಬಹುದಾದ ಲೋಪಗಳನ್ನು ನಿವಾರಿಸಿಕೊಳ್ಳಬಹುದು. ಕಲಿಯುಗದಲ್ಲಿ ಪಾಪಗಳು ಹೆಚ್ಚಾಗಿ ಸ್ವಧರ್ಮ ಬಾಹಿರರಾಗುವ ಮಾನವರ ಉದ್ಧಾರಕ್ಕೆ ಶ್ರೀಲಲಿತಾ ಸಹಸ್ರನಾಮ ಪಾರಾಯಣಕ್ಕಿಂತ ಮಿಗಿಲಾಗಿದ್ದು ಇನ್ನೊಂದಿಲ್ಲ. ಸಂಪೂರ್ಣ ನಂಬಿಕೆ ಹಾಗೂ ಭಕ್ತಿಯಿಂದ ಸಹಸ್ರನಾಮ ಪಾರಾಯಣ ಮಾಡಿ ಶ್ರೀಲಲಿತೆಯನ್ನು ಪೂಜಿಸಬೇಕು. ಪಾರಾಯಣ ಮಾಡುವುದರಿಂದ ಮಾನವನು ತನ್ನ ಬಯಕೆಗಳನ್ನು ಈಡೇರಿಸಿಕೊಳ್ಳುವುದಲ್ಲದೇ ಅಂತಿಮ ಧ್ಯೇಯವಾದ ಕೈವಲ್ಯದ ಸಾರ್ಥಕತೆಯನ್ನು ಪಡೆಯುವನು ಎಂದು ನಂಬಲಾಗಿದೆ.

ಮೈಸೂರಿನ ಅವಧೂತ ದತ್ತಪೀಠದ ಪೀಠಾಧಿಪತಿಗಳಾದ ಶ್ರೀ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿರವರ ಆಶಯ ಹಾಗೂ ಸಂಕಲ್ಪದಂತೆ ಶ್ರೀ ಲಲಿತಾ ಸಹಸ್ರನಾಮ ಲೇಖನ ಮಹಾಯಜ್ಞವನ್ನು ಕಿರಿಯ ಶ್ರೀಗಳವರಾದ ಶ್ರೀ ಶ್ರೀ ದತ್ತವಿಜಯಾನಂದ ತೀರ್ಥ ಸ್ವಾಮೀಜಿರವರ ಮಾರ್ಗದರ್ಶನದಲ್ಲಿ ಆಯೋಜಿಸಲಾಗಿದ್ದು ಶ್ರೀ ಲಲಿತಾ ಕೋಟಿನಾಮ ಯಜ್ಞದಲ್ಲಿ ಸ್ತ್ರೀ–ಪುರುಷ–ಬಾಲ–ವೃದ್ಧಾದಿಗಳು ಯಾವುದೇ ಭೇದವಿಲ್ಲದೆ ಭಾಗವಹಿಸಬಹುದಾಗಿದೆ. ಶ್ರೀ ಲಲಿತಾ ಸಹಸ್ರನಾಮ ಶ್ಲೋಕವನ್ನು ಶ್ರದ್ಧಾಭಕ್ತಿಯಿಂದ ಬರೆಯುವುದೇ ಈ ಯಜ್ಞದ ನಿಯಮ. ಸುಮಾರು 18 ಲಕ್ಷ ಪುಸ್ತಕಗಳಲ್ಲಿ ಬರೆದ ಸ್ತೋತ್ರವನ್ನು ಶ್ರೀ ಲಲಿತಾ ಮಾತೆಗೆ ಸಮರ್ಪಿಸಲಾಗುವುದು. ಈ ಪುಣ್ಯಕಾರ್ಯದಲ್ಲಿ ಆಸಕ್ತ ಆಸ್ತಿಕರು ಭಾಗವಹಿಸಿ ಶ್ರೀ ದೇವಿ ಕೃಪೆಗೆ ಪಾತ್ರರಾಗಬಹುದಾಗಿದೆ.

ಹೆಚ್ಚುತ್ತಿರುವ ಸೈಬರ್ ಕ್ರೈಮ್‌ಗಳ ಬಗ್ಗೆ ಎಚ್ಚರ... ಎಚ್ಚರ...!

ಟೋಪಿ ಹಾಕಿಸಿಕೊಳ್ಳುವವರು ಇರುವವರೆಗೂ ಟೋಪಿ ಹಾಕುವವರು ಇದ್ದೇ ಇರುತ್ತಾರೆ...!

ಪ್ರತೀ ದಿನ ದಿನಪತ್ರಿಕೆಯಲ್ಲಿ ಅನೇಕ ಮೋಸ,ವಂಚನೆ ಪ್ರಕರಣ ಓದುತ್ತೇವೆ. ಬ್ಯಾಂಕಿನಲ್ಲಿ ತಮ್ಮ ಖಾತೆಯಲ್ಲಿರುವ ಹಣ ಕಳೆದುಕೊಳ್ಳುವುದರಿಂದ ಹಿಡಿದು ಎಲ್ಲಾ ತರಹದ ವಂಚನೆಗಳಿಗೂ ಮುಗ್ಧ ಜನರು ಬಲಿಯಾಗುತ್ತಿದ್ದಾರೆ. ಇಂದು ಎಲ್ಲಾ ಡಿಜಿಟಲೀಕರಣಗೊಂಡಿದೆ. ಅದರಲ್ಲೂ ಬ್ಯಾಂಕ್ ವ್ಯವಹಾರಗಳಂತೂ ಬಹುತೇಕ ಡಿಜಿಟಲ್ ಮೂಲಕವೇ ನಡೆಯುತ್ತಿದೆ. ಇದರಿಂದ ಜನರಿಗೆ ಬಹಳ ಅನುಕೂಲವಾಗಿದೆ,ಹಾಗೂ ದೇಶದ ಪ್ರಗತಿಗೂ ಇದರ ಕೊಡುಗೆ ಬಹಳಷ್ಟು ಇದೆ. ಆದರೆ ಇದನ್ನೇ ತಮ್ಮ ಬಂಡವಾಳ ಮಾಡಿಕೊಂಡ ಕೆಲವು ವಂಚಕರು ಅಮಾಯಕರಿಗೆ ವಂಚಿಸಿ ಹಣ ದೋಚುವುದನ್ನೇ ತಮ್ಮ ಕಾಯಕ ಮಾಡಿಕೊಂಡಿದ್ದಾರೆ. ಸುಲಭದಲ್ಲಿ ಹಣ ಮಾಡಲು ಅಡ್ಡ ದಾರಿ ಹಿಡಿದಿದ್ದಾರೆ.

ಇಂತಹ ಮೋಸಗಾರರಿಂದ ಮೋಸ ಹೋಗುವುದನ್ನು ತಪ್ಪಿಸಿಕೊಳ್ಳಲು ಕೆಲವು ಮುಂಜಾಗ್ರತಾ ಕ್ರಮಗಳನ್ನು ಅನುಸರಿಸುವುದು ಒಳ್ಳೆಯದು.ಅಂತಹ ಕೆಲವು ಮುಂಜಾಗ್ರತಾ ಕ್ರಮಗಳನ್ನು ಇಲ್ಲಿ ಪಟ್ಟಿ ಮಾಡಲಾಗಿದೆ.



1. ಯಾವುದೇ ಅಪರಿಚಿತರು ಲಾಟರಿ ಬಂದಿದೆ,ಬಹುಮಾನ ಬಂದಿದೆ ಲಿಂಕ್ ಕ್ಲಿಕ್ ಮಾಡಿ ಎಂಬ ಸಂದೇಶ ಕಳಿಸಿದರೆ ಕ್ಲಿಕ್ ಮಾಡಬೇಡಿ.ಯಾರೂ ಯಾರಿಗೂ ಸುಮ್ಮ ಸುಮ್ಮನೆ ಹಣ ಕಳಿಸುವುದಿಲ್ಲ ಎನ್ನುವ ಸಾಮಾನ್ಯ ಜ್ಞಾನ ಇರಲಿ.

2.ಸಾಮಾಜಿಕ ಜಾಲತಾಣದಲ್ಲಿ ಹೊಸಬರೊಂದಿಗೆ ಸ್ನೇಹ ಮಾಡಿಕೊಳ್ಳುವ ಮುನ್ನ ಅವರ ಬಗ್ಗೆ ಸಾಕಷ್ಟು ಮಾಹಿತಿ ಕಲೆಹಾಕಿ ಯೋಚಿಸಿ, ಜಾಗ್ರತೆ ವಹಿಸುವುದು ಮುಖ್ಯ.ಹೊಸ ಪರಿಚಯ ಆದವರೆಲ್ಲಾ ಮೋಸಗಾರರಾಗಿಲ್ಲದಿರಬಹುದು. ಆದರೆ ಹೊಸ ಪರಿಚಯ ಆದವರಲ್ಲಿ ವಂಚಕರು ಕೂಡ ಇರಬಹುದು. ಜಾಗ್ರತೆಯಿಂದ ಇರುವುದು ಅವಶ್ಯಕ. ಹದಿಹರೆಯದ ಹುಡುಗ–ಹುಡುಗಿಯರು ಸಾಮಾಜಿಕ ಜಾಲತಾಣಗಳಲ್ಲಿ ಪರಿಚಯ ಆದವರಿಂದ ಮೋಸ ಹೋದ ಪ್ರಕರಣಗಳು ಸಾಕಷ್ಟಿವೆ.ಜಾಗ್ರತೆ ಅವಶ್ಯಕ.

3.ಕೆಲಸ ಕೊಡಿಸುತ್ತೇನೆ, ಸ್ವಂತ ಉದ್ಯೋಗದ ಅವಕಾಶ ಇದೆ ಹಣ ಕಳಿಸಿ ಎಂದು ಸುಳ್ಳು ಹೇಳಿ ಹಣ ದೋಚುವವರ ಸಂಖ್ಯೆ ಹೆಚ್ಚುತ್ತಿದೆ.ಇಂತಹ ಖದೀಮರ ಬಲೆಗೆ ಬೀಳದಿರಿ. .

4.ನಿಮಗೆ ಸಾಲದ ಅವಶ್ಯಕತೆ ಇದ್ದಲ್ಲಿ ಆರ್.ಬಿ.ಐ ಯಿಂದ ಮಾನ್ಯತೆ ಪಡೆದ ಬ್ಯಾಂಕುಗಳಿಗೆ ಭೇಟಿ ನೀಡಿ ಸಾಲ ಪಡೆಯಿರಿ ಇಲ್ಲದಿದ್ದಲ್ಲಿ ಬ್ಯಾಂಕಿನ ಅಧಿಕೃತ ವೆಬ್ಸೈಟ್ ಅಥವಾ ಮೊಬೈಲ್ ಆ್ಯಪ್ ಮೂಲಕವೇ ಸಾಲಕ್ಕೆ ಮನವಿ ಮಾಡಿ.ಕಂಡ ಕಂಡ ಆ್ಯಪ್ ಮೂಲಕ ಸಾಲ ಮಾಡಿ ಕೈ ಸುಟ್ಟುಕೊಳ್ಳಬೇಡಿ.

5.ಯಾವ ಬ್ಯಾಂಕಿನವರೂ ನಿಮ್ಮ ಡೆಬಿಟ್ ಕಾರ್ಡ್, ಕ್ರೆಡಿಟ್ ಕಾರ್ಡ್‌ಗಳ ವಿವರ,ಪಿನ್, ಸಿವಿವಿ ನಂ ,ಯುಪಿಐ ಪಿನ್ ಇತ್ಯಾದಿ ವಿವರಗಳನ್ನು ಕೇಳುವುದಿಲ್ಲ.ಈ ತರಹದ ವಿವರಗಳನ್ನು ಕೇಳಿ ಬರುವ ಸಂದೇಶಗಳಿಗೆ ಹಾಗೂ ಕರೆಗಳಿಗೆ ಸ್ಪಂದಿಸಿ ಯಾವುದೇ ತರಹದ ಮಾಹಿತಿ ಹಂಚಿಕೊಳ್ಳುವುದು ಬೇಡ.ಇದರಿಂದ ಕೂಡಲೇ ಹಣ ಕಳೆದುಕೊಳ್ಳುವುದು ಖಚಿತ.

6.ನಿಮ್ಮ ಮೊಬೈಲ್‌ಗೆ ಬಂದ ಒಟಿಪಿಯನ್ನು ಯಾವುದೇ ಕಾರಣಕ್ಕೂ ಬೇರೆಯವರೊಂದಿಗೆ ಹಂಚಿಕೊಳ್ಳಬೇಡಿ. ಆವಾಗಲೂ ಕೂಡಲೇ ನಿಮ್ಮ ಖಾತೆಯಿಂದ ಹಣ ಕಳೆದುಕೊಳ್ಳುವುದು ಖಚಿತ.

7.ನಿಮ್ಮ ಎಟಿಎಮ್ ಕಾರ್ಡ್, ಕ್ರೆಡಿಟ್ ಕಾರ್ಡ್ ಕಳೆದು ಹೋದರೆ ಕಸ್ಟಮರ್ ಕೇರ್‌ಗೆ ತಿಳಿಸಿ ಕೂಡಲೇ ಬ್ಲಾಕ್ ಮಾಡಿಸಿ.

8.ನಿಮ್ಮ ಬ್ಯಾಂಕ್ ಖಾತೆಯನ್ನು ಆನ್‌ಲೈನ್‌ನಲ್ಲಿ ವ್ಯವಹರಿಸುವಾಗ ಸಾಧ್ಯವಾದಷ್ಟು ಸೈಬರ್ ಸೆಂಟರ್‌ಗಳಿಂದ ವ್ಯವಹಾರ ಮಾಡುವುದು ಕಡಿಮೆ ಮಾಡಿ.

9.ಮೊಬೈಲ್‌ಗಳನ್ನು ಸಾರ್ವಜನಿಕ ಸ್ಥಳಗಳಲ್ಲಿರುವ ಸಾಕೆಟ್/ಚಾರ್ಜರ್ ಮೂಲಕ ಚಾರ್ಜ್ ಮಾಡುವುದನ್ನು ಸಾಧ್ಯವಾದಷ್ಟು ಕಡಿಮೆ ಮಾಡಿ.ಇದರಿಂದ ಮೊಬೈಲ್‌ನಲ್ಲಿರುವ ಡಾಟಾ ಹ್ಯಾಕ್ ಆಗುವ ಸಾಧ್ಯತೆಗಳು ಹೆಚ್ಚು.

ಒಂದು ಚಲನಚಿತ್ರದಲ್ಲಿ ಅನಂತ್ ನಾಗ್ ಅವರು ಹೇಳುತ್ತಾರೆ 'ನೀವು ಟೋಪಿ ಹಾಕಿಸಿಕೊಳ್ಳುವವರು ಇರುವವರೆಗೂ ನಾವು ಟೋಪಿ ಹಾಕುವವರು ಇದ್ದೇ ಇರ್ತೀವಿ' ಅಂತ. ಇತ್ತೀಚಿನ ದಿನಗಳಲ್ಲಿ ಟೋಪಿ ಹಾಕಿಸಿಕೊಳ್ಳುವವರ ಸಂಖ್ಯೆ ಜಾಸ್ತಿ ಆಗ್ತಾ ಇದೆ.ಹಾಗಾಗಿ ಟೋಪಿ ಹಾಕುವವರೂ ಜಾಸ್ತಿ ಆಗ್ತಾ ಇದ್ದಾರೆ. ಅಮಾಯಕರು ಒಂದಲ್ಲ ಒಂದು ಕಾರಣದಿಂದ ಮೋಸದ ಬಲೆಗೆ ಬಿದ್ದು ತಾವು ಕಷ್ಟ ಪಟ್ಟು ದುಡಿದು,ಉಳಿಸಿದ ಹಣವನ್ನು ಕಳೆದುಕೊಂಡು ತಲೆಮೇಲೆ ಕೈ ಹೊತ್ತು ಕುಳಿತುಕೊಳ್ಳುವುದು ಸಾಮಾನ್ಯವಾಗಿದೆ.ಕೆಲವು ಮೋಸದ ಪ್ರಕರಣಗಳು ಸೈಬರ್ ಪೊಲೀಸ್‌ಗೆ ಕಂಪ್ಲೆಂಟು ಕೊಟ್ಟರೆ ಕಳೆದುಹೋದ ಹಣ ವಾಪಸ್ಸು ಬರುತ್ತದೆ. ಆದರೆ ಅದು ಎಲ್ಲಾ ಸಮಯದಲ್ಲೂ ಸಾಧ್ಯವಾಗುವುದಿಲ್ಲ ಹಾಗೂ ಅದು ಅಷ್ಟು ಸುಲಭದ ಕೆಲಸವೂ ಅಲ್ಲ.ಆದ್ದರಿಂದ ಮೇಲೆ ತಿಳಿಸಿದ ಕೆಲವು ಮುಂಜಾಗ್ರತಾ ಕ್ರಮ ಅನುಸರಿಸುವುದರಿಂದ ಟೋಪಿ ಹಾಕಿಸಿಕೊಳ್ಳುವುದನ್ನು ತಪ್ಪಿಸಿಕೊಳ್ಳಬಹುದು.

ರಾಘವೇಂದ್ರ ಜೋಯಿಸ್
ಮೊ. 9880398355

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಕೊಡಗು ಹೆಗ್ಗಡೆ ಸಮಾಜದ ವಾರ್ಷಿಕ ಮಹಾಸಭೆ



ಮೈಸೂರು: ನಗರದ ಬೋಗಾದಿ ರಿಂಗ್‌ರಸ್ತೆ ಬಳಿಯ ಕೋಸ್ಟಲ್ ರಾಕ್ ರೆಸ್ಟೋರೆಂಟ್‌ನಲ್ಲಿ ಮೈಸೂರಿನ ಕೊಡಗು ಹೆಗ್ಗಡೆ ಸಮಾಜದ 2022–23 ಮತ್ತು 2023–24ನೇ ಸಾಲಿನ ವಾರ್ಷಿಕ ಮಹಾಸಭೆ ನಡೆಯಿತು.

ಸಭೆಯಲ್ಲಿ ಸಮಿತಿಯ ಅಧ್ಯಕ್ಷರಾಗಿ ಪಂದಿಕಂಡ ಸಿ.ವಿಠಲ, ಉಪಾಧ್ಯಕ್ಷರಾಗಿ ಪುದಿಯತಂಡ ಪೆಮ್ಮಯ್ಯ, ಕಾರ್ಯದರ್ಶಿಯಾಗಿ ಪೊಟ್ಟಂಡ ದಿಲೀಪ್ ಉತ್ತಯ್ಯ, ಜಂಟಿ ಕಾರ್ಯದರ್ಶಿಯಾಗಿ ಪೊಟ್ಟಂಡ ಅಶ್ವಿನಿ ದಿಲೀಪ್, ಖಜಾಂಚಿಯಾಗಿ ಕೊಕ್ಕೇರ ಅಜಿತ್ ಹಾಗೂ ಸದಸ್ಯರಾಗಿ ಪಾಣಿಕುಟ್ಟೀರ ನಿತ್ಯ, ಕೊಂಗೆಪಂಡ ಕಾವೇರಿ, ಚಟ್ಟಂಡ ಗಣಪತಿ, ಅಜ್ಜೇಟಿರ ಮಂಜು ನಾಣಯ್ಯ, ತೊತ್ತೇರ ತಿಮ್ಮಯ್ಯ, ಪೊಟ್ಟಂಡ ನಾಚಪ್ಪ ಅವರನ್ನು ಆಯ್ಕೆ ಮಾಡಲಾಯಿತು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ನಿವೃತ್ತ ಪೊಲೀಸ್ ಅಧಿಕಾರಿ ಪೊಳ್ಳಂಡ ಡಿ.ಸುರೇಶ್ ಸಂಘದ ಪ್ರಗತಿ ಕುರಿತು ಶ್ಲಾಘಿಸಿದರು. ವಿರಾಜಪೇಟೆಯ ಮಹಿಳಾ ಕಾಂಗ್ರೆಸ್ ಹಾಗೂ ಟೈಲರ್ ಅಸೋಸಿಯೇಷನ್ ಅಧ್ಯಕ್ಷೆ ತೋರೆರ ಪೊನ್ನಕ್ಕಿ ಗಣೇಶ್, ಮಹಿಳೆಯರು ತಮಗೆ ಆಸಕ್ತಿ ಇರುವ ಕ್ಷೇತ್ರದಲ್ಲಿ ಕೈಲಾದಷ್ಟು ಕೆಲಸ ಮಾಡಲು ಮುಂದಾಗಬೇಕು ಎಂದರು. ಇದೇ ವೇಳೆ ಪೊಟ್ಟಂಡ ಭವಿಷ್ಯಾ ದಿಲೀಪ್, ಪೊಟ್ಟಂಡ ಭವಿತಾ ದಿಲೀಪ್ ಹಾಗೂ ಪುದಿಯ ತಂಡ ನಿಧಿ ನೀಲಮ್ಮ ಸಾಂಸ್ಕೃತಿಕ ಕಾರ್ಯಕ್ರಮ ನೀಡಿ ಎಲ್ಲರನ್ನು ರಂಜಿಸಿದರು.

ವಿದ್ಯಾರ್ಥಿನಿಯರು ನಾಯಕತ್ವದ ಗುಣ ಬೆಳೆಸಿಕೊಳ್ಳಿ; ಸಿ.ಎನ್.ಮಂಜೇಗೌಡ



ಮೈಸೂರು, ಅ.17(ಎಂಕೆ)– ವಿದ್ಯಾರ್ಥಿನಿಯರು ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳುವುದರ ಜೊತೆಗೆ ಕಿತ್ತೂರು ರಾಣಿ ಚೆನ್ನಮ್ಮ, ಒನಕೆ ಓಬವ್ವ, ಇಂದಿರಾಗಾಂಧಿ, ಕಿರಣ್ ಅವರಂತಹ ಆದರ್ಶ ಮಹಿಳೆಯರ ಗುಣಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಕಿವಿಮಾತು ಹೇಳಿದರು.

ಮೈಸೂರಿನ ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಉದ್ಘಾಟನೆ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭದ ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು, ನಾನು ಚಿಕ್ಕವನಿದ್ದಾಗ ತುಂಬಾ ಬಡತನವಿತ್ತು ಪುಸ್ತಕ ತೆಗೆದುಕೊಳ್ಳಲು ಹಣವಿಲ್ಲದೆ ಬೇರೆಯವರಿಂದ ಎರವಲು ಪಡೆದು ಓದುತ್ತಿದ್ದೆ ಎಂದು ಸ್ಮರಿಸಿದರು.

ಈಗ ಕಾಲ ಬದಲಾಗಿದೆ. ನಿಮಗೆ ಬೇಕಾದ ಎಲ್ಲಾ ಸೌಲಭ್ಯಗಳನ್ನು ನಿಮ್ಮ ತಂದೆ–ತಾಯಿ ಮಾಡಿಕೊಡುತ್ತಿದ್ದಾರೆ. ಆದ್ದರಿಂದ ನೀವು ಮಹಾತ್ಮ ಗಾಂಧಿ, ಅಂಬೇಡ್ಕರ್, ಅಬ್ದುಲ್ ಕಲಾಂ, ರಾಮಕೃಷ್ಣ ಪರಮಹಂಸ, ವಿವೇಕಾನಂದರಂತಹವರ ಪುಸ್ತಕವನ್ನು ಓದಿ ನಿಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕು. 12ನೇ ಶತಮಾನದ ಬಸವಣ್ಣನವರ ವಚನಗಳನ್ನು ನಾವಿಂದು ಮೆಲುಕು ಹಾಕುತ್ತಿದ್ದೇವೆ. ಬಸವಣ್ಣನವರು ಹೆಣ್ಣಿಗೆ ಅನುಭವ ಮಂಟಪದಲ್ಲಿ ವಿಶೇಷ ಸ್ಥಾನ ನೀಡಿ ಗೌರವಿಸುತ್ತಿದ್ದರು. ವಿದ್ಯಾರ್ಥಿಗಳು ಇಂತಹ ಮಹನೀಯರ ಬಗ್ಗೆ ತಿಳಿದುಕೊಂಡಿರಬೇಕು ಎಂದರಲ್ಲದೆ, ಓದಿನ ಜೊತೆಗೆ ವಿನಯ ರೂಢಿಸಿಕೊಳ್ಳಬೇಕು. ಗುರಿ ಇಟ್ಟುಕೊಂಡು ಚೆನ್ನಾಗಿ ಓದಿ ಈ ದೇಶದ ಭವಿಷ್ಯದ ಉತ್ತಮ ಪ್ರಜೆಗಳಾಗಬೇಕು ಎಂದು ಸಲಹೆ ನೀಡಿದರು.

ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ, ಎಸ್.ಎಂ.ಲಿಂಗಪ್ಪಣ್ಣಿ ನಂಜುಂಡಯ್ಯ, ಡಾ.ಎ.ಪುಷ್ಪ ಅಯ್ಯಂಗಾರ್, ಎ.ವೈದೇಹಿ, ಪ್ರೊ.ಎಸ್. ಶಿವರಾಜಪ್ಪ ಪ್ರಾಂಶುಪಾಲರಾದ ಡಾ.ಎಂ.ಶಾರದಾ, ಡಾ.ಜಿ.ಪ್ರಸಾದ ಮೂರ್ತಿ, ಎಂ.ಎಸ್. ಸಂಧ್ಯಾರಾಣಿ, ಗುರುಶಾಂತಮ್ಮ, ದಿನೇಶ್ ಗೌಡ ಮತ್ತಿತರರು ಉಪಸ್ಥಿತರಿದ್ದರು.

ತಮಿಳುನಾಡಿನಲ್ಲಿ ಮತ್ತೊಂದು ಪಟಾಕಿ ದುರಂತ; 11 ಬಲಿ

ಚೆನ್ನೈ: ವಾರದ ಹಿಂದೆಯಷ್ಟೇ ತಮಿಳುನಾಡಿನಲ್ಲಿ ಸಂಭವಿಸಿದ್ದ ಪಟಾಕಿ ದುರಂತದಲ್ಲಿ 9 ಮಂದಿ ಸಾವಿಗೀಡಾಗಿದ್ದರು. ಇದೀಗ ಆ ಪ್ರಕರಣದ ನೆನಪು ಜನರ ಮನಸಲ್ಲಿ ಹಸಿಯಾಗಿರುವಾಗಲೇ ತಮಿಳುನಾಡಿನಲ್ಲಿ ಇನ್ನೊಂದು ಪಟಾಕಿ ದುರಂತ ಸಂಭವಿಸಿದ್ದು, ಇದರಲ್ಲೂ 11 ಮಂದಿ ಸಾವಿಗೀಡಾಗಿದ್ದಾರೆ. ತಮಿಳುನಾಡಿನ ವಿರುಧುನಗರ ಜಿಲ್ಲೆಯ ಕಮ್ಮಪಟ್ಟಿ ಗ್ರಾಮದಲ್ಲಿರುವ ಪಟಾಕಿ ಕಾರ್ಖಾನೆಯಲ್ಲಿ ಈ ದುರಂತ ಸಂಭವಿಸಿದ್ದು, ಕನಿಷ್ಠ 11 ಮಂದಿ ಸಾವಿಗೀಡಾಗಿದ್ದಾರೆ ಎನ್ನಲಾಗಿದೆ. ತುರ್ತು ಹಾಗೂ ಅಗ್ನಿಶಾಮಕ ದಳ ಮತ್ತು ಪೊಲೀಸರು ಸ್ಥಳಕ್ಕೆ ಧಾವಿಸಿದ್ದು, ಬೆಂಕಿ ಆರಿಸುವ ಜತೆಗೆ ರಕ್ಷಣಾ ಕಾರ್ಯಾಚರಣೆ ನಡೆಯುತ್ತಿದೆ.

ಕುಮಾರಸ್ವಾಮಿ ವಿರುದ್ಧ ಹರಿಹಾಯ್ದ ಡಿಕೆಶಿ ಮೇಲೆ ಜೆಡಿಎಸ್ ಆಕ್ರೋಶ

ಬೆಂಗಳೂರು,ಅ.17(ಕೆಎಂಶಿ)–ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರ ಮೇಲೆ ಹರಿಹಾಯ್ದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ವಿರುದ್ಧ ಜೆಡಿಎಸ್ ತೀವ್ರ ಟೀಕಾ ಪ್ರಹಾರ ನಡೆಸಿದೆ.



ಈ ವ್ಯಕ್ತಿ ರಾಜ್ಯದ ಉಪ ಮುಖ್ಯಮಂತ್ರಿ, ಅದೇ ಕನ್ನಡಿಗರ ಪಾಲಿನ ದೌರ್ಭಾಗ್ಯ ಎಂದು ಜೆಡಿಎಸ್ ಎಕ್ಸ್ ಜಾಲತಾಣದಲ್ಲಿ ಕಿಡಿಕಾರಿದೆ

ಅವರು ರಾಜ್ಯಕ್ಕೆ ಉಪಮುಖ್ಯಮಂತ್ರಿ ಅವರನ್ನು 'ಮೂರ್ಖ ಶಿಖಾಮಣಿ' ಎನ್ನುವುದು ತರವಲ್ಲ. ಅಸಲಿಗೆ, ಹಾಗೆಂದು ಹೇಳಲು ನಮಗೂ ಇಷ್ಟವಿಲ್ಲ ಬಿಡಿ.

ಲೂಟಿಯನ್ನೇ ನಿತ್ಯಕಾಯಕ, ದಂಧೆಯನ್ನೇ ದಿನವಹಿ ಧನಾರ್ಜನೆಗೆ ರಹದಾರಿ ಮಾಡಿಕೊಂಡಿರುವ, ಕಂಡ ಕಂಡವರ ಜಮೀನುಗಳಿಗೆ ಬೇಲಿ ಬಿಗಿದು ಅವರ ರಕ್ತ ಹಿರುತ್ತಿರುವ ವ್ಯಕ್ತಿ ರಾಜ್ಯಕ್ಕೆ ಉಪ ಮುಖ್ಯಮಂತ್ರಿ. ಇದಲ್ಲವೇ ಕನ್ನಡಿಗರ ದೌರ್ಭಾಗ್ಯ ಎಂದು ಜೆಡಿಎಸ್ ಆಕ್ರೋಶ ವ್ಯಕ್ತಪಡಿಸಿದೆ.

ಅವರ 'ಅಂತ್ಯವಿಲ್ಲದ ಹೈಕಮಾಂಡ್ ಕೃಪಾಪೋಷಿತ ಅಕ್ರಮ'ಗಳಿಗೆ ಕೊನೆ ಎಂಬುದಿಲ್ಲವೇ? ಎಂದು ಜನ ಕೇಳುತ್ತಿದ್ದಾರೆ. ಕೊನೆ ಇದೆ, ಇದ್ದೇ ಇರುತ್ತದೆ.. ಕಾಯಬೇಕಷ್ಟೇ. ವಾಕ್ಯ ಎಂದ ಮೇಲೆ ಫುಲ್ ಸ್ಟಾಪ್ ಇರಲೇಬೇಕು ಎಂದು ಜೆಡಿಎಸ್ ಮಾರ್ಮಿಕವಾಗಿ ಹೇಳಿದೆ.

ಸೂರ್ಯ ಪಶ್ಚಿಮಕ್ಕೆ ವಾಲಿದೊಡನೆ ಕಂಡವರ ಪಕ್ಷಗಳವರ ಮನೆ ಬಾಗಿಲ ಮುಂದೆ ಪರ್ಸಂಟೇಜ್ ಪಟಾಲಂ ಪ್ರತ್ಯಕ್ಷ! ಇಂಥಾ ಕಲುಷಿತ ರಾಜಕಾರಣ ಶೋಭೆಯೇ? ನುಡಿದಂತೆ ನಡೆಯುತ್ತೇವೆ ಎಂದರೆ ಇದೇನಾ? ಜನರ ದುಡ್ಡು, ಇವರದ್ದು ಜಾತ್ರೆ. ಇದೇ ಇವತ್ತಿನ ಕರ್ನಾಟಕದ ಚಿತ್ರಣ.

ರಾಜ್ಯದ ಜನರಿಗೆ ಇವರ ಭಂಡಾರವೆಲ್ಲ ಗೊತ್ತಾಗಿದೆ. ಆ ಭಂಡಾರ ಬಿಚ್ಚಿಕೊಂಡ ಕೂಡಲೇ ಬಾಲಸುಟ್ಟ ಬೆಕ್ಕಿನಂತೆ ವಿಲವಿಲನೆ ಒದ್ದಾಡಿದರೆ ಹೇಗೆ? ಅವರ ಫಸಲು, ಅವರವರ ಫಲ ಎಂದು ಡಿಸಿಎಂ ಮೇಲೆ ಜೆಡಿಎಸ್ ಚಾಟಿ ಬೀಸಿದೆ.

ಕರ್ನಾಟಕವನ್ನು ಹೈಕಮಾಂಡ್‌ಗೆ ಒತ್ತೆ ಇಟ್ಟ ಭೂಪತಿ, ಆಧುನಿಕ ಈಸ್ಟ್ ಇಂಡಿಯಾ ಕಂಪನಿಗಳ ಪೊಲಿಟಿಕಲ್ ಏಜೆಂಟ್, ಕುನಾಡಿನ ಕರೋಡ್‌ಪತಿ, ಬದುಕೆಲ್ಲ ಬ್ರೋಕರೇಜ್ ಮಾಡಿಕೊಂಡೇ ಕೊಳ್ಳೆ ಹೊಡೆದ ವ್ಯಕ್ತಿ, ಈಗ ಕುಮಾರಸ್ವಾಮಿ ಅವರ ಬಗ್ಗೆ ಲಘುವಾಗಿ ಮಾತನಾಡುವುದೇ? ಅರೆರೆ.. ಇವರ SST, YST ಅಬ್ಬರ ಕಂಡು GSTಯೇ ಬೆಚ್ಚಿದೆ. ಇದೇ ನೋಡಿ ಕರ್ನಾಟಕದ ಮಾದರಿ ಎಂದು ಜೆಡಿಎಸ್ ಕಿಡಿಕಾರಿದೆ.

ಕಾಂಗ್ರೆಸ್ ಪಕ್ಷವೇ ಪರ್ಸಂಟೇಜ್ ಪಟಾಲಂ. ಕಮಿಷನ್ ಕೈಂಕರ್ಯವೇ ಅದರ ರಾಜಧರ್ಮ. ಲೂಟಿ, ದಂಧೆ, ಅಕ್ರಮವೇ ಅದರ ಗ್ಯಾರಂಟಿ. ಅನ್ಯರಾಜ್ಯಗಳ ಚುನಾವಣೆ ಇವರಿಗೆ ಚಿನ್ನದ ಗಣಿ. ಹೈಕಮಾಂಡ್ ಆಸರೆಯೇ ಅಕ್ಷಯ ಪಾತ್ರೆ

ಇಂಥವರಿಗೆ ಕುಮಾರಸ್ವಾಮಿಯವರ ಕೂಗು ಕೇಳುವುದೇ? ಇಲಾಖೆಗೊಂದು ಹಿಟಾಚಿ ಇಟ್ಟುಕೊಂಡು 24/7 ಬಾಚುತ್ತಿದ್ದಾರೆ ಎಂದು ಜೆಡಿಎಸ್ ಕೈ ಪಕ್ಷದ ವಿರುದ್ಧ ಆರೋಪ ಮಾಡಿದೆ.

ಸ್ವತಃ ತಾನೇ ಕೊಳೆತು ನಾರುತ್ತಿದೆ. ಆದರೆ, ಪಕ್ಕದ ಮನೆ ಕಾಂಪೌಂಡಿನ ಮೇಲೆ ಮರದೆಲೆ ಬಿದ್ದಿದೆ ಎಂದು ಕಾಂಗ್ರೆಸ್ ಅಂಗೈ ಪರಚಿಕೊಳ್ಳುತ್ತಿದೆ. ಪರಚಿಕೊಳ್ಳುವುದರ ಜತೆಗೆ, ಕರ್ನಾಟಕವನ್ನು ಪಾಪರ್ ಮಾಡುವುದೇ ಪರ್ಸಂಟೇಜ್ ಪಟಾಲಂ ಹಾಕಿಕೊಂಡಿರುವ ಏಕೈಕ ಗುರಿ. ಅದರ ಪಾಲಿಗೆ ಹೈಕಮಾಂಡ್ ಸೇವೆಯೇ ಆನಂದದಾಯಕ ಸೇವೆ! ಕಾಲಕ್ಕೆ ತಕ್ಕ ಕಾಂಗ್ರೆಸ್ ಎಂದು ಜೆಡಿಎಸ್ ಆ ಪಕ್ಷದ ಕಾಲೆಳೆದಿದೆ.

ಯಶಸ್ವಿಯಾಗಿ ನಡೆದ ಅಂತಿಮ ಹಂತದ ಕುಶಾಲತೋಪು ತಾಲೀಮು

● ಅಂತಿಮ ತಾಲೀಮಿನಲ್ಲಿ 14ರಲ್ಲಿ 12 ಆನೆಗಳು ಭಾಗಿ ● ಅರಮನೆಯಲ್ಲೇ ಉಳಿದ ಬಂಡೀಪುರದ ರೋಹಿತ್, ಹಿರಣ್ಯ





ವಸ್ತುಪ್ರದರ್ಶನ ಆವರಣದಲ್ಲಿ ಮಂಗಳವಾರ 3ನೇ ಹಂತದ ಸಿಡಿಮದ್ದು ಸಿಡಿಸುತ್ತಿರುವ ಫಿರಂಗಿ ದಳದ ಸಿಬ್ಬಂದಿ. ತಾಲೀಮಿನ ಬಳಿಕ ಗಜಪಡೆ ಮುಂದೆ ಜಮಾಯಿಸಿರುವ ಪ್ರವಾಸಿಗರನ್ನು ಬಲಚಿತ್ರದಲ್ಲಿ ಕಾಣಬಹುದು.

ಮೈಸೂರು,ಅ.17(ಎಂಟಿವೈ)– ದಸರಾ ಮಹೋತ್ಸವದ ರೂವಾರಿಗಳಾದ ಗಜಪಡೆ ಹಾಗೂ ಅಶ್ವಪಡೆಗೆ ಮಂಗಳವಾರ ಮೂರನೇ, ಅಂತಿಮ ಹಂತದ ಕುಶಾಲತೋಪು ಸಿಡಿಸುವ ತಾಲೀಮನ್ನು ಯಶಸ್ವಿಯಾಗಿ ನಡೆಸಲಾಯಿತು.

ಮೈಸೂರಿನ ದಸರಾ ವಸ್ತುಪ್ರದರ್ಶನದ ಆವರಣದಲ್ಲಿನ ಪಾರ್ಕಿಂಗ್ ಸ್ಥಳಕ್ಕೆ ಅರಮನೆ ಆವರಣದಲ್ಲಿ ಬೀಡು ಬಿಟ್ಟಿರುವ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ ಗಜಪಡೆಯನ್ನು ಜಯಮಾರ್ತಾಂಡ ದ್ವಾರದ ಮೂಲಕ ಕರೆತಂದು ತಾಲೀಮಿಗೆ ಅಣಿಗೊಳಿಸಲಾಯಿತು. ಗಜಪಡೆಯ 14 ಆನೆಗಳಲ್ಲಿ ಮೊದಲ ತಾಲೀಮಿನಲ್ಲಿ ಸಿಡಿಮದ್ದು ಶಬ್ದಕ್ಕೆ ಬೆದರಿದ್ದ ಬಂಡೀಪುರದ ರಾಂಪುರ ಕ್ಯಾಂಪ್‌ನ ರೋಹಿತ್ ಹಾಗೂ ಹಿರಣ್ಯರಿಗೆ ವಿನಾಯಿತಿ ನೀಡಿ, ಅರಮನೆಯ ಕ್ಯಾಂಪ್‌ನಲ್ಲೇ ಕಟ್ಟಿಹಾಕಲಾಗಿತ್ತು.

ಜಂಬೂಸವಾರಿ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಗಜಪಡೆ ಹಾಗೂ ಅಶ್ವಪಡೆಯನ್ನು ಸಜ್ಜುಗೊಳಿಸುವ ನಿಟ್ಟಿನಲ್ಲಿ ಮೂರು ಹಂತದ ತಾಲೀಮು ನಡೆಸುವ ಪದ್ಧತಿ ರೂಢಿಯಲ್ಲಿದ್ದು, ಇಂದು ನಡೆದ ಅಂತಿಮ ಹಂತದ ತಾಲೀಮಿನಲ್ಲಿ ಮೂರು ಆನೆಗಳು ಸಣ್ಣ ಪ್ರಮಾಣದಲ್ಲಿ ಬೆಚ್ಚಿದ್ದನ್ನು ಹೊರತುಪಡಿಸಿದರೆ, ಉಳಿದ ಆನೆಗಳು ಧೈರ್ಯದಿಂದ ನಿಲ್ಲುವ ಮೂಲಕ ಗಮನ ಸೆಳೆದವು. 27 ಕುದುರೆಗಳಲ್ಲಿ ಐದಾರು ಕುದುರೆಗಳು ಸಿಡಿಮದ್ದಿನ ಶಬ್ದಕ್ಕೆ ಬೆಚ್ಚಿದವು.

ಫಿರಂಗಿ ದಳದ 30 ಸಿಬ್ಬಂದಿ ತಂಡ 7 ಫಿರಂಗಿ ಬಳಸಿ ಮೂರು ಸುತ್ತಿನಲ್ಲಿ ಒಟ್ಟು 21 ಸಿಡಿಮದ್ದನ್ನು ಸಿಡಿಸಿದರು. ಅಂಬಾರಿ ಆನೆ ಅಭಿಮನ್ಯು, ಕುಮ್ಕಿ ಆನೆಗಳಾದ ವರಲಕ್ಷ್ಮೀ, ವಿಜಯ, ಅರ್ಜುನ, ಮಹೇಂದ್ರ, ಧನಂಜಯ, ಗೋಪಿ, ಭೀಮ, ಸುಗ್ರೀವ, ಕಂಜನ್, ಪ್ರಶಾಂತ, ಲಕ್ಷ್ಮೀ ಆನೆ ಪಾಲ್ಗೊಂಡು ತಾಲೀಮನ್ನು ಯಶಸ್ವಿಗೊಳಿಸಿದವು.

> “ಜಂಬೂಸವಾರಿಯಲ್ಲಿ ಪಾಲ್ಗೊಳ್ಳಲು ಗಜಪಡೆ ಸರ್ವಸನ್ನದ್ಧವಾಗಿದೆ. ಅಂಬಾರಿ ಆನೆ ಅಭಿಮನ್ಯು ಸೇರಿದಂತೆ ಎಲ್ಲಾ ಆನೆಗಳೂ ಆರೋಗ್ಯದಿಂದ ಕೂಡಿವೆ. ಸಮರ್ಥವೂ ಆಗಿವೆ. ಇಂದು ಗಜಪಡೆ, ಅಶ್ವದಳಕ್ಕೆ ಮೂರೂ ಹಂತದ ಕುಶಾಲತೋಪು ತಾಲೀಮನ್ನು ಯಶಸ್ವಿಯಾಗಿ ನಡೆಸಲಾಗಿದೆ. ಯಾವ ಆನೆಯೂ ಬೆದರಿಲ್ಲ. ಕುಶಲತೋಪು ಶಬ್ದಕ್ಕೆ ಎಲ್ಲಾ ಆನೆಗಳು ಹೊಂದಿಕೊಂಡಿದ್ದು, ದಸರಾ ಜಂಬೂಸವಾರಿಗೆ ಗಜಪಡೆ ಸನ್ನದ್ಧವಾಗಿದೆ.
> –ಸೌರಭ್‌ಕುಮಾರ್,
> ಡಿಸಿಎಫ್ ವನ್ಯಜೀವಿ ವಿಭಾಗ.

ಸುಧಾರಿಸಿದ ಆನೆಗಳ ವರ್ತನೆ: ಮೊದಲ ತಾಲೀಮಿನ ವೇಳೆ ಬೆದರಿದ್ದ ಸುಗ್ರೀವ, ಪ್ರಶಾಂತ ಮತ್ತು ಧನಂಜಯ ಈ ಬಾರಿಯೂ ಮೊದಲು ಸಣ್ಣದಾಗಿ ಮಿಸುಕಾಡಿದವು. ಮೊದಲ ಸುತ್ತು ಪೂರ್ಣಗೊಳ್ಳುತ್ತಿದ್ದಂತೆ ಸುಧಾರಿಸಿಕೊಂಡ ಆನೆಗಳು, ಎರಡನೇ ಹಾಗೂ ಮೂರನೇ ಸುತ್ತಿನಲ್ಲಿ ದೃಢವಾಗಿ ನಿಲ್ಲುವ ಮೂಲಕ ಸಿಡಿಮದ್ದಿನ ಶಬ್ದಕ್ಕೆ ಒಗ್ಗಿಕೊಂಡವು.

ಜನಜಂಗುಳಿ: ಕೊನೆ ಹಂತದ ಸಿಡಿಮದ್ದು ತಾಲೀಮು ವೀಕ್ಷಣೆಗಾಗಿ ಪ್ರವಾಸಿಗರು ಮುಗಿಬಿದ್ದರು. ಮೃಗಾಲಯ ವೀಕ್ಷಣೆಗೆಂದು ಬಂದಿದ್ದ ಹೊರ ರಾಜ್ಯದ ಪ್ರವಾಸಿಗರು ಸೇರಿದಂತೆ ಸ್ಥಳೀಯರು, ಆನೆ ಪ್ರೇಮಿಗಳು ಸಿಡಿಮದ್ದು ತಾಲೀಮು ನಡೆಯುತ್ತಿದ್ದ ಸ್ಥಳಕ್ಕೆ ಬಂದು ಕುಶಾಲತೋಪು ಸಿಡಿಸುವ ಫಿರಂಗಿ ದಳದ ಚಾಕಚಕ್ಯತೆ, ಆನೆಗಳ ದಿಟ್ಟತನ ಕಣ್ತುಂಬಿಕೊಂಡರು. ಸಿಡಿಮದ್ದು ತಾಲೀಮು ಮುಗಿದ ನಂತರ ಪ್ರವಾಸಿಗರು ಆನೆ ಹಾಗೂ ಫಿರಂಗಿ ಮುಂದೆ ಫೋಟೋ ತೆಗೆಸಿಕೊಂಡು ಸಂಭ್ರಮಿಸಿದರು. ಈ ಸಂದರ್ಭ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಡಿಸಿಎಫ್ ಸೌರಭ್‌ಕುಮಾರ್, ಡಿಸಿಪಿ ಮುತ್ತುರಾಜ್, ಆರ್‌ಎಫ್‌ಓ ಸಂತೋಷ್ ಹೂಗಾರ್, ಪಶು ವೈದ್ಯ ಡಾ.ಮುಜೀಬ್ ರೆಹಮಾನ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ದಸರಾದಲ್ಲಿ ಆಟಿಕೆ ಸೇರಿ ಹಲವು ವಸ್ತುಗಳ ಮಾರಾಟ ಜೋರು



ಮೈಸೂರು, ಅ.17(ಬಿಎಲ್‌ಯು)– ಮೈಸೂರು ದಸರಾದ ಹಲವು ವರ್ಣರಂಜಿತ ಕಾರ್ಯಕ್ರಮಗಳ ವೀಕ್ಷಣೆಗೆ ದೇಶ–ವಿದೇಶದ ಅಪಾರ ಪ್ರಮಾಣದ ಪ್ರವಾಸಿಗರು ಸಾಂಸ್ಕೃತಿಕ ನಗರಿಗೆ ಆಗಮಿಸುತ್ತಿದ್ದಾರೆ. ಇದರಿಂದ ಸಹಜವಾಗಿಯೇ ಮೈಸೂರಲ್ಲಿ ವ್ಯಾಪಾರ ವಹಿವಾಟು ಹೆಚ್ಚಾಗಿದೆ.

ಮೈಸೂರಿನಲ್ಲಿ ಆಟಿಕೆಗಳು, ತಮಟೆ, ಬಲೂನು, ಕಾಟನ್ ಕ್ಯಾಂಡಿ ಸೇರಿದಂತೆ ಇತರೆ ಆಕರ್ಷಕ ವಸ್ತುಗಳ ಮಾರಾಟಕ್ಕೆ ಉತ್ತರ ಭಾರತದ ವ್ಯಾಪಾರಸ್ಥರು ಮೈಸೂರಿಗೆ ಆಗಮಿಸಿದ್ದಾರೆ.

ಬಿಹಾರ, ಉತ್ತರ ಪ್ರದೇಶ ಸೇರಿದಂತೆ ಹಲವು ರಾಜ್ಯಗಳ ಬಹಳಷ್ಟು ವ್ಯಾಪಾರಸ್ಥರು ಬೆಂಗಳೂರಿನ ಯಲಹಂಕ ಸೇರಿದಂತೆ ಇತರೆಡೆ ಮೈದಾನದಲ್ಲಿ ಟೆಂಟ್ ಹಾಕಿಕೊಂಡು ವಾಸ ಮಾಡುತ್ತಿದ್ದಾರೆ. ಕರ್ನಾಟಕದ ಯಾವುದೇ ಮೂಲೆಯಲ್ಲಿ ಜಾತ್ರೆ, ಉತ್ಸವಗಳಾದರೆ ಅಲ್ಲಿಗೆ ಧಾವಿಸುತ್ತಾರೆ. ಹಾಗೆಯೇ ದಸರಾ ಆರಂಭದಿಂದಲೇ ಮೈಸೂರಿಗೆ ಬಂದು ಠಿಕಾಣಿ ಹೂಡಿದ್ದಾರೆ.

ಹೊರ ರಾಜ್ಯಗಳ ವ್ಯಾಪಾರಸ್ಥರಿಗೂ ಭರ್ಜರಿ ಸೇಲ್

ಕೆಲವರು ದೊಡ್ಡಕೆರೆ ಮೈದಾನದಲ್ಲಿ ಟೆಂಟ್ ಹಾಕಿಕೊಂಡು ವಾಸ್ತವ್ಯ ಹೂಡಿದ್ದರೆ, ಮತ್ತೆ ಕೆಲವರು ಹೋಟೆಲ್‌ಗಳಲ್ಲಿ ತಂಗಿ, ವ್ಯಾಪಾರ ಮಾಡುತ್ತಿದ್ದಾರೆ. ಬೆಳಗ್ಗೆ ತಮ್ಮ ತಮ್ಮ ಮಾರಾಟ ವಸ್ತುಗಳ ಜೊತೆ ಹೊರಡುವ ವ್ಯಾಪಾರಸ್ಥರು ರಾತ್ರಿ 11.30ರ ತನಕ ವ್ಯಾಪಾರ ಮಾಡುತ್ತಿದ್ದಾರೆ. ಮಹಿಳೆಯರು, ಪುರುಷರು ಸೇರಿದಂತೆ ಮಕ್ಕಳು ಕೂಡ ಹಲವು ವಸ್ತುಗಳನ್ನು ಮಾರಾಟ ಮಾಡುತ್ತಿದ್ದಾರೆ.

ಮಕ್ಕಳನ್ನು ಆಕರ್ಷಿಸುವ ಆಟಿಕೆಗಳು, ತಮಟೆ, ಬಲೂನು, ಕಾಟನ್ ಕ್ಯಾಂಡಿ ಸೇರಿದಂತೆ ಹಲವು ಮನರಂಜನಾ ವಸ್ತುಗಳನ್ನು ಜನಸಂದಣಿ ಹೆಚ್ಚಾಗಿರುವ ಅರಮನೆ ಪ್ರವೇಶ ದ್ವಾರ, ಕೆ.ಆರ್.ವೃತ್ತ, ಚಾಮರಾಜೇಂದ್ರ ಒಡೆಯರ್ ವೃತ್ತ, ಹಾರ್ಡಿಂಗ್ ಸರ್ಕಲ್, ಸಯ್ಯಾಜಿರಾವ್ ರಸ್ತೆ, ಆಹಾರ ಮೇಳ, ವಸ್ತುಪ್ರದರ್ಶನ ಸೇರಿದಂತೆ ಬಹಳಷ್ಟು ಕಡೆ ವ್ಯಾಪಾರ ಮಾಡುತ್ತಿದ್ದಾರೆ. ಹೊರ ರಾಜ್ಯದ ವ್ಯಾಪಾರಸ್ಥರು ಮಾತ್ರವಲ್ಲದೆ ಸ್ಥಳೀಯರಿಗೂ ವ್ಯಾಪಾರ ಜೋರಾಗಿದೆ. ಫಾಸ್ಟ್ ಫುಡ್, ಪಾನಿಪುರಿ, ಚುರುಮುರಿ, ಗೋಬಿ ಸೇರಿದಂತೆ ಇತರೆ ತಿಂಡಿ ತಿನಿಸುಗಳ ವ್ಯಾಪಾರ ಸಖತ್ತಾಗಿದೆ. ಎಲ್ಲೇ ನೋಡಿದರೂ ಅಲ್ಲಿ ತಿಂಡಿಗಳನ್ನು ಸವಿಯಲು ಜನರು ಮುತ್ತಿರುತ್ತಾರೆ.

ಮೈಸೂರು ಯುವ ದಸರಾ ಸಿದ್ಧತಾ ಸಭೆ



ಮೈಸೂರು, ಅ.17–ಅ.18ರಿಂದ 21ರವರೆಗೆ ಮಹಾರಾಜ ಕಾಲೇಜಿನ ಮೈದಾನದಲ್ಲಿ ನಡೆಯುವ ಯುವ ದಸರಾ ಸಿದ್ಧತೆಯ ಬಗ್ಗೆ ಜಲದರ್ಶಿನಿಯಲ್ಲಿ ಅಧಿಕಾರೇತರ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರೊಂದಿಗೆ ಸಭೆ ನಡೆಯಿತು. ಈ ಸಂದರ್ಭದಲ್ಲಿ ಯುವ ದಸರಾ ಉಪಸಮಿತಿಯಿಂದ ಮಾಡಿಕೊಂಡಿರುವ ಸಿದ್ಧತೆ ಬಗ್ಗೆ ಸಮಿತಿಯ ಅಧ್ಯಕ್ಷರಿಗೆ, ಉಪಾಧ್ಯಕ್ಷರಿಗೆ ಹಾಗೂ ಸದಸ್ಯರಿಗೆ ಯುವ ದಸರಾ ಆಹ್ವಾನ ಪತ್ರಿಕೆ ನೀಡಿ ಕಾರ್ಯಕ್ರಮಕ್ಕೆ ಆಹ್ವಾನ ನೀಡಿ ಅಗತ್ಯ ಸಹಕಾರ ನೀಡುವಂತೆ ಕೋರಲಾಯಿತು. ಈ ಸಂದರ್ಭದಲ್ಲಿ ಅಧಿಕಾರೇತರ ಸಮಿತಿಯ ಸದಸ್ಯರು ಕಾರ್ಯಕ್ರಮದಲ್ಲಿ ಸೂಕ್ತವಾದ ಆಸನ ವ್ಯವಸ್ಥೆ ಮಾಡಿಕೊಡುವಂತೆ ಸಭೆಯಲ್ಲಿ ತಿಳಿಸಿದರು. ಸಭೆಯಲ್ಲಿ ಯುವ ದಸರಾ ಉಪಸಮಿತಿ ಸಮನ್ವಯಾಧಿಕಾರಿ ಹಾಗೂ ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕಿ ಎಂ.ಕೆ.ಸವಿತಾ, ಸಮಿತಿ ಕಾರ್ಯಾಧ್ಯಕ್ಷ, ಉಪವಿಭಾಗಾಧಿಕಾರಿ ರಕ್ಷಿತ್, ಸಮಿತಿ ಅಧ್ಯಕ್ಷ ಆರ್.ಚೆಲುವರಾಜು, ಉಪಾಧ್ಯಕ್ಷರಾದ ಹಿನಕಲ್ ನಂಜುಂಡ, ರಂಜಿತ್ ಹಾಗೂ ಕೆ.ಬಿ.ಸ್ವಾಮಿ ಮತ್ತು ಸಮಿತಿಯ ಸದಸ್ಯರು ಉಪಸ್ಥಿತರಿದ್ದರು.

ಅ.19, ಹಿರಿಯ ನಾಗರಿಕರಿಗೆ ಕ್ರೀಡಾ ಸ್ಪರ್ಧೆ

ಮೈಸೂರು, ಅ.17– ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ ಮಹಿಳಾ ಮತ್ತು ಮಕ್ಕಳ ದಸರಾ ಕಾರ್ಯಕ್ರಮದ ಪ್ರಯುಕ್ತ ಅ.19ರಂದು ಬೆಳಗ್ಗೆ 10ರಿಂದ 11:30 ರವರೆಗೆ ಹಿರಿಯ ನಾಗರಿಕರಿಗಾಗಿ ಜೆ.ಕೆ ಮೈದಾನದಲ್ಲಿ ಕ್ರೀಡಾ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ. ಮಡಿಕೆ ಹೊಡೆಯುವುದು, ಬಕೆಟ್ ಇನ್ ದಿ ಬಾಲ್ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಆಸಕ್ತ ಹಿರಿಯ ನಾಗರಿಕರು ಭಾಗವಹಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ. ಸಂಖ್ಯೆ 0821–2490333, ಮೊ. 9448425408, ಹಾಗೂ 9886476142 ಅನ್ನು ಸಂಪರ್ಕಿಸಬಹುದಾಗಿದೆ.

ಮೈಸೂರಲ್ಲಿ ಹೆಸರಾಂತ ಎಂ.ಎಸ್.ನಾರಾಯಣ ಸ್ವೀಟ್ಸ್ ನೂತನ ಮಳಿಗೆಗಳ ಉದ್ಘಾಟನೆ...





ಮೈಸೂರಿನ ಕುವೆಂಪುನಗರ ಹಾಗೂ ಜೆ.ಪಿನಗರ ಬಡಾವಣೆಗಳಲ್ಲಿ ಹೊಸದಾಗಿ ಪ್ರಾರಂಭಿಸಿರುವ ನಗರದ ಹೆಸರಾಂತ ಎಂ.ಎಸ್.ನಾರಾಯಣ ಸ್ವೀಟ್ಸ್ ಮಳಿಗೆಗಳನ್ನು ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಸೋಮವಾರ ಉದ್ಘಾಟಿಸಿದರು. ಈ ವೇಳೆ ಕಾಂಗ್ರೆಸ್ ಯುವ ಮುಖಂಡ ರವಿಕುಮಾರ್, ಎಂ.ಎಸ್.ನಾರಾಯಣ ಸ್ವೀಟ್ಸ್ ಸಂಸ್ಥಾಪಕರು ಹಾಗೂ ಮಾಲೀಕರಾದ ಎಂ.ಎಸ್.ನಾರಾಯಣ ಹಾಗೂ ಅವರ ಪುತ್ರ, ಮ್ಯಾನೇಜಿಂಗ್ ಡೈರೆಕ್ಟರ್ ಹೃತ್ವಿಕ್ ಇನ್ನಿತರರು ಉಪಸ್ಥಿತರಿದ್ದಾರೆ.

ಅ.28, ಮಹಿಳಾ ಕವಿಗೋಷ್ಠಿ

ಮೈಸೂರು: ಮೈಸೂರಿನ ನಾಗನವ ಕಲಾ ಸಾಹಿತ್ಯ ವೇದಿಕೆ ವತಿಯಿಂದ ಪ್ರತಿ ವರ್ಷದಂತೆ ಈ ಬಾರಿಯೂ ದಸರಾ ಮಹಿಳಾ ಕವಿಗೋಷ್ಠಿಯನ್ನು ಏರ್ಪಡಿಸಲಾಗಿದೆ. ಅ.28ರಂದು ಬೆಳಗ್ಗೆ 10 ಗಂಟೆಗೆ ಮೈಸೂರಿನ ಅಗ್ರ ಹಾರದಲ್ಲಿರುವ ಅಕ್ಕನ ಬಳಗ ಶಾಲೆಯಲ್ಲಿ ಕವಿಗೋಷ್ಠಿ ನಡೆಯಲಿದೆ. ಭಾಗವಹಿಸಲಿಚ್ಛಿಸುವ ಕವಯಿತ್ರಿಯರು ತಮ್ಮ ಹೆಸರನ್ನು ಹೊಮ್ಮ ಮಂಜುನಾಥ್ ಅವರ ಮೊ.ಸಂಖ್ಯೆ 9845926973, 9019076842ಗೆ ಕರೆ ಮಾಡಿ ತಮ್ಮ ಹೆಸರು ನೋಂದಾಯಿಸಿಕೊಳ್ಳಬಹುದು. 20 ಮಂದಿಗೆ ಮಾತ್ರ ಅವಕಾಶವಿದೆ. ಅಲ್ಲದೆ ಹೆಸರು ನೋಂದಾಯಿಸಿದವರು ಸಕಾಲದಲ್ಲಿ ಹಾಜರಿರಬೇಕು. ಕವನಗಳು 22 ಸಾಲು ಮೀರಬಾರದು ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಐಟಿ ದಾಳಿಯಲ್ಲಿ ಸಿಕ್ಕ ಡೈರಿ ಬುಕ್‌ಗಳ ಮಾಹಿತಿ ಬಹಿರಂಗವಾದರೆ ಹಣದ ರಹಸ್ಯ ಬಯಲು

● ಡಿಸಿಎಂ ಡಿ.ಕೆ.ಶಿವಕುಮಾರ್ ತಿರುಗೇಟು ● ಭ್ರಷ್ಟಾಚಾರಕ್ಕೆ ಬಿಜೆಪಿಯೇ ಅಡಿಪಾಯ ಹಾಕಿದೆ

ಬೆಂಗಳೂರು, ಅ.17(ಕೆಎಂಶಿ)–ಕಳೆದ ಮೂರು ದಿನಗಳಿಂದ ನಡೆದ ಐಟಿ ದಾಳಿಯಲ್ಲಿ ಕೆಲವು ಡೈರಿ, ಪುಸ್ತಕಗಳು ಪತ್ತೆಯಾಗಿರುವ ಬಗ್ಗೆ ನನಗೆ ಮಾಹಿತಿ ಬಂದಿದೆ. ಈ ದಾಖಲೆಗಳು ಬಹಿರಂಗಗೊಂಡರೆ, ದಾಳಿಯಲ್ಲಿ ಸಿಕ್ಕಿರುವ ಹಣ ಯಾರಿಗೆ ಸಂಬಂಧಿಸಿದ್ದು ಎಂಬ ಸತ್ಯಾಂಶ ಹೊರ ಬರುತ್ತದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿರುಗೇಟು ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಆಗಿರುವ ಭ್ರಷ್ಟಾಚಾರಗಳನ್ನು ಮಾಡಿರುವುದು ಬಿಜೆಪಿ ಪಕ್ಷ. ಇಡೀ ಭ್ರಷ್ಟಾಚಾರಕ್ಕೆ ಬಿಜೆಪಿಯೇ ಅಡಿಪಾಯ ಹಾಕಿದೆ. ಅದು ಭ್ರಷ್ಟಾಚಾರದ ಹಿಮಾಲಯ ಇದ್ದಂತೆ. ಹೀಗಾಗಿ ಕರ್ನಾಟಕದ ಜನತೆ ಅವರನ್ನು ಅಧಿಕಾರದಿಂದ ಕಿತ್ತೆಸೆದಿದ್ದಾರೆ. ಈಗ ನಡೆದಿರುವ ಐಟಿ ದಾಳಿಯಲ್ಲಿ ಸಿಕ್ಕಿರುವ ಹಣ ಬಿಜೆಪಿಗೆ ಸೇರಿದ್ದು, ಈ ಹಣಕ್ಕೂ ಕಾಂಗ್ರೆಸ್ ಪಕ್ಷಕ್ಕೂ ಯಾವುದೇ ರೀತಿಯ ಸಂಬಂಧವಿಲ್ಲ.



ಈ ಗುತ್ತಿಗೆದಾರರಿಗೆ ಕಾಮಗಾರಿಗಳನ್ನು ನೀಡಿರುವುದು ಬಿಜೆಪಿ ಸರ್ಕಾರ. ಇದು ಬಿಜೆಪಿಯ ಪಾಪದ ಕೂಸು ಎಂದರು.

ಕಾಂಗ್ರೆಸ್ ಹೈಕಮಾಂಡ್ ನಡುಗುತ್ತಿದೆ ಎಂಬ ಮಾಜಿ ಉಪಮುಖ್ಯಮಂತ್ರಿ ಆರ್.ಅಶೋಕ್ ಅವರ ಹೇಳಿಕೆ ವಿಚಾರವಾಗಿ ಕೇಳಿದಾಗ, ನಡುಗುತ್ತಿರುವುದು ಕಾಂಗ್ರೆಸ್ ಹೈಕಮಾಂಡ್ ಅಲ್ಲ, ಬಿಜೆಪಿ ಹೈಕಮಾಂಡ್. ಈ ಭ್ರಷ್ಟಾಚಾರಕ್ಕೆಲ್ಲ ಅಡಿಪಾಯವೇ ಆರ್.ಅಶೋಕ್, ನಕಲಿ ಸ್ವಾಮಿ, ಲೂಟಿ ರವಿ, ನವರಂಗಿ ನಾರಾಯಣ, ಬ್ಲಾಕ್ ಮೇಲರ್‌ಗಳು. ಈ ಅಕ್ರಮಗಳ ಹಿಂದೆ ಇವರ ಹೆಸರಿದೆ. ಅವರು ಯಾರಿಂದ ತನಿಖೆ ಮಾಡಿಸುತ್ತಾರೋ ಮಾಡಿಸಲಿ.

ಈ ವಿಚಾರವಾಗಿ ತನಿಖೆ ಆಗಲಿ. ಅದನ್ನೇ ನಾವು, ನಮ್ಮ ನಾಯಕರು ಹೇಳುತ್ತಿದ್ದೇವೆ. ಅವರ ಕಾಲದಲ್ಲಿ ಆಗಿರುವ ಬ್ರಹ್ಮಾಂಡ ಭ್ರಷ್ಟಾಚಾರವೇ ಇದಕ್ಕೆ ಅಡಿಪಾಯ. ಆದಾಯ ತೆರಿಗೆ ಅಧಿಕಾರಿಗಳು ತಮ್ಮ ದಾಳಿ ಮುಗಿಸಿ ಅಧಿಕೃತ ಹೇಳಿಕೆ ಪ್ರಕಟಿಸಲಿ ಎಂದು ನಾವು ಇಷ್ಟು ದಿನ ಮಾತನಾಡಿರಲಿಲ್ಲ. ನಿನ್ನೆ ಐಟಿ ಅಧಿಕಾರಿಗಳು ಹೇಳಿಕೆ ಪ್ರಕಟಿಸಿದ್ದಾರೆ. ಐಟಿ, ಇಡಿ ಎಲ್ಲಾ ತನಿಖಾ ಸಂಸ್ಥೆಗಳು ಅವರ ಕೈಯಲ್ಲೇ ಇವೆ. ಈಗ ಎಲ್ಲಾ ದಾಖಲೆಗಳು ಅವರ ಬಳಿಯೇ ಇವೆ. ಅವುಗಳನ್ನು ಬಿಚ್ಚಿಡಲಿ ಎಂದು ಸವಾಲೆಸೆದರು.

ಬಿಜೆಪಿಯ ಕಲೆಕ್ಷನ್ ಮಾಸ್ಟರ್ ಎಂಬ ಪೋಸ್ಟರ್ ಬಿಡುಗಡೆ ವಿಚಾರವಾಗಿ ಕೇಳಿದ ಪ್ರಶ್ನೆಗೆ, ಬಿಜೆಪಿಯ ಭ್ರಷ್ಟಾಚಾರ ಹಿಮಾಲಯ ಪರ್ವತದಷ್ಟಿದೆ. ಮುಖ್ಯಮಂತ್ರಿ ಹುದ್ದೆಗೆ 2500 ಕೋಟಿ ಕಲೆಕ್ಷನ್ ಮಾಡಲಾಗಿತ್ತು. ಮುಖ್ಯಮಂತ್ರಿ ಕಚೇರಿಯಲ್ಲೇ ಎಷ್ಟು ಭ್ರಷ್ಟಾಚಾರ ನಡೆದಿತ್ತು ಎಂದು ಬಿಜೆಪಿಯ ಶಾಸಕರು, ಮಾಜಿ ಮಂತ್ರಿಗಳೇ ಹೇಳಿದ್ದಾರೆ. ಈಗ ಮಾತಾಡುತ್ತಿರುವವರು ಅದನ್ನು ಒಮ್ಮೆ ನೋಡಲಿ ಎಂದು ಡಿಕೆಶಿ ಕುಟುಕಿದರು.

ಇದೊಂದು ಎಡವಟ್ಟುಗಳ ಸರ್ಕಾರ; ಸಂಪೂರ್ಣ ಆಡಳಿತ ವೈಫಲ್ಯ

ಮಾಜಿ ಡಿಸಿಎಂ ಡಾ.ಅಶ್ವತ್ಥನಾರಾಯಣ ಆರೋಪ

ಬೆಂಗಳೂರು, ಅ.17(ಕೆಎಂಶಿ)– ರಾಜ್ಯದ ಕಾಂಗ್ರೆಸ್ ಸರ್ಕಾರ ಎಡವಟ್ಟುಗಳ ಸರ್ಕಾರವಾಗಿದ್ದು, ಆಡಳಿತ ನಿರ್ವಹಣೆಯಲ್ಲಿ ಸಂಪೂರ್ಣ ವಿಫಲವಾಗಿದೆ ಎಂದು ರಾಜ್ಯದ ಮಾಜಿ ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥ್‌ನಾರಾಯಣ ಇಂದಿಲ್ಲಿ ಟೀಕಿಸಿದರು.



ನಗರದ "ಸ್ವಾತಂತ್ರ್ಯ ಉದ್ಯಾನವನ"ದಲ್ಲಿ ಬಿಜೆಪಿ ವತಿಯಿಂದ ಮಂಗಳವಾರ ನಡೆದ ಬೃಹತ್ ಪ್ರತಿಭಟನೆಯ ಸಂದರ್ಭದಲ್ಲಿ ಮಾತನಾಡಿದ ಅವರು, ಐಟಿ ದಾಳಿ ಸಂಬಂಧ ಸಿಬಿಐ ತನಿಖೆ ಮಾಡಿ ಹಣದ ಮೂಲವನ್ನು ಪತ್ತೆ ಮಾಡಬೇಕು ಎಂದು ಆಗ್ರಹಿಸಿದರು.

ನಾಚಿಕೆ ಇಲ್ಲದ ಸರ್ಕಾರವಿದು. ಪ್ರತಿಯೊಂದು ವಿಚಾರದಲ್ಲೂ ನಾಡಿಗೇ ಸಂಕಷ್ಟ ತಂದಿಟ್ಟ ಕಾಂಗ್ರೆಸ್ ಸರ್ಕಾರ ಇದೆ. ಈ ಸರ್ಕಾರ ತೊಲಗುವುದನ್ನೇ ಜನ ಬಯಸುತ್ತಿದ್ದಾರೆ. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಮತ್ತು ಸಂಪುಟದ ಸಚಿವರ ರಾಜೀನಾಮೆಗೆ ಅವರು ಆಗ್ರಹಿಸಿದರು. ಸಾಕಷ್ಟು ಆಡಳಿತ ಅನುಭವ, ಪರಿಣತಿ ಇದ್ದರೂ, ಭಾರಿ ಬಹುಮತ ಸಿಕ್ಕಿದರೂ ಜನಾಶೀರ್ವಾದಕ್ಕೆ ತಕ್ಕ ಗೌರವವನ್ನು ನೀಡಿಲ್ಲ. ನಾಮಕಾವಾಸ್ತೆಗೆ ಕೆಲವು ಭಾಗ್ಯಗಳನ್ನು ತೋರಿಸಿ ಲೂಟಿ ಸರ್ಕಾರವನ್ನು ಕೊಟ್ಟಿದ್ದಾರೆ ಎಂದು ಸಿ.ಎನ್.ಅಶ್ವಥ್ ನಾರಾಯಣ್ ಆರೋಪಿಸಿದರು.

ರಾಜ್ಯವನ್ನು ಲೂಟಿ ಮಾಡಲು ಮತ್ತು ಸ್ವಾರ್ಥದಾಹ ಇಂಗಿಸಲು ಈ ಸರ್ಕಾರ ಮುಂದಾಗಿದೆ. ಯಾವುದೇ ಆಪಾದನೆಗೂ ಅದು ಜಗ್ಗುತ್ತಿಲ್ಲ. ಭಂಡತನದ ಉತ್ತರವನ್ನು ನೀಡುತ್ತಿದ್ದಾರೆ. ಗುತ್ತಿಗೆದಾರರು, ಬಿಲ್ಡರ್‌ಗಳಿಂದ ಹಣ ಲೂಟಿ ಮಾಡುತ್ತಿದ್ದಾರೆ. ಭ್ರಷ್ಟಾಚಾರ ಮಿತಿ ಮೀರಿದೆ ಎಂದು ಆಕ್ಷೇಪಿಸಿದರು.

ಮೈಸೂರು ಮಿತ್ರ

ಕಾವೇರಿ ಹೋರಾಟಕ್ಕೆ ಹಲವು ಸಂಘಟನೆಗಳ ಬೆಂಬಲ



ಮಂಡ್ಯ, ಅ.17– ರೈತರ ಪ್ರತಿಭಟನೆ ಧಿಕ್ಕರಿಸಿ ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವ ರಾಜ್ಯ ಸರ್ಕಾರದ ಕ್ರಮ ಖಂಡಿಸಿ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಹೋರಾಟ ಮುಂದುವರೆಸಿದ್ದು, ಮಂಗಳವಾರ ಹೋರಾಟಕ್ಕೆ ವಿವಿಧ ಸಂಘಟನೆಗಳು ಬೆಂಬಲ ಸೂಚಿಸಿ, ರಸ್ತೆ ತಡೆ ನಡೆಸಿದವು.

ನಗರದ ಸರ್‌ಎಂವಿ ಪ್ರತಿಮೆ ಎದುರು 44ನೇ ದಿನದ ಧರಣಿಯಲ್ಲಿ ಆಟೋ ಚಾಲಕರು, ರೈತ ಮಹಿಳೆಯರು, ವಿವಿಧ ಸಂಘಟನೆಯ ಕಾರ್ಯಕರ್ತರು ಭಾಗಿಯಾಗಿ ಬೆಂಬಲ ಸೂಚಿಸಿ ಕೆಲಕಾಲ ಧರಣಿ ನಡೆಸಿದರು. ಕಾವೇರಿ ನದಿ ನೀರು ವಿಚಾರದಲ್ಲಿ ಕರ್ನಾಟಕಕ್ಕೆ ನ್ಯಾಯ ದೊರಕಿಸಿಕೊಡಲು ಮುಂದಾಗಬೇಕು ಎಂದು ಒತ್ತಾಯಿಸಿದರು.

ಕಾವೇರಿ–ಹೇಮಾವತಿ ರೈತ ಹಿತರಕ್ಷಣಾ ಸಮಿತಿ ಆಶ್ರಯದಲ್ಲಿ ಕೆ.ಆರ್.ಪೇಟೆ ಹೇಮಾವತಿ ರೈತ ಒಕ್ಕಲಿಗ ಹೋರಾಟ ಸಂಘ, ಅಖಿಲ ಕರ್ನಾಟಕ ಒಕ್ಕಲಿಗ ಮಹಿಳಾ ಸಂಘದ ಕಾರ್ಯಕರ್ತೆಯರು ನಿರಂತರ ಧರಣಿಯಲ್ಲಿ ಭಾಗಿಯಾಗಿ ಕಾವೇರಿ ವಿಚಾರದಲ್ಲಿ ಕರ್ನಾಟಕಕ್ಕೆ ಆಗುತ್ತಿರುವ ನಿರಂತರ ಅನ್ಯಾಯ ಖಂಡಿಸಿದರು.

ರೈತರ ಜೊತೆಗೂಡಿ ಜನತೆ ಹೋರಾಟ ಮಾಡುತ್ತಿದ್ದರೂ ಸಹ ನೆರೆ ರಾಜ್ಯಕ್ಕೆ ಸರ್ಕಾರ ನೀರು ಹರಿಸುತ್ತಿದೆ. ನೀರು ನಿಲ್ಲಿಸಿ ಎಂಬ ಹೋರಾಟಗಾರರ ಕೂಗಿಗೆ ಬೆಲೆ ಇಲ್ಲದಂತಾಗಿದೆ. ಯಾವ ಕಾರಣಕ್ಕಾಗಿ ನಿರಂತರ ನೀರು ಹರಿಸಲಾಗುತ್ತಿದೆ. ಜಲಾಶಯಗಳಿಂದ ಹರಿಸುತ್ತಿರುವ ನೀರನ್ನು ಮೊದಲು ನಿಲ್ಲಿಸಬೇಕು. ಅಲ್ಲಿವರೆಗೂ ಹೋರಾಟ ಮುಂದುವರೆಯಲಿದೆ ಎಂದು ಎಚ್ಚರಿಸಿದರು.

ಇದೇ ವೇಳೆ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಜೊತೆಗೂಡಿದ ವಿವಿಧ ಸಂಘಟನೆಯ ಕಾರ್ಯಕರ್ತರು ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ವಾಹನ ಸಂಚಾರ ತಡೆದು ಕೇಂದ್ರ, ರಾಜ್ಯ ಸರ್ಕಾರ, ಸಂಸದರು, ಶಾಸಕರ ವಿರುದ್ಧ ಧಿಕ್ಕಾರ ಕೂಗಿದರು. ಧರಣಿಯಲ್ಲಿ ಹೋರಾಟಗಾರರಾದ ಸುನಂದಾ ಜಯರಾಂ, ಕೆಬೋರಯ್ಯ, ಚಂದ್ರಶೇಖರ್, ಮುದ್ದೇಗೌಡ, ಕೃಷ್ಣ ಪ್ರಕಾಶ್, ಪ್ರೊ.ಶಂಕರೇಗೌಡ, ಸುಜಾತಕೃಷ್ಣ, ಜ್ಯೋತಿ, ವಸಂತಮ್ಮ, ಎನ್.ಎಸ್.ಗಂಗಾಧರ್, ಪಾರ್ವತಮ್ಮ, ಪಂಕಜ ಪ್ರಕಾಶ್, ಮಧುಶ್ರೀ, ಪ್ರೇಮಮ್ಮ, ನೇತ್ರಾವತಿ, ಭಾಗ್ಯಮ್ಮ, ಮಹದೇವಮ್ಮ, ಮಹೇಶ್ವರಿ, ವಿಮಲಾಕ್ಷಮ್ಮ, ಸುಜಾತ, ರೇಣುಕಮ್ಮ, ವಿಮಲಾ ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

ಪ್ರತಿಯೊಬ್ಬರೂ ಯೋಗ ಮಾಡಿ ಆರೋಗ್ಯ ಕಾಪಾಡಿಕೊಳ್ಳಿ

ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡ



ಶ್ರೀರಂಗಪಟ್ಟಣ, ಅ.17– ನಮ್ಮ ದಿನನಿತ್ಯದ ಬದುಕಿನಲ್ಲಿ ಯೋಗ ಪ್ರಮುಖವಾಗಿದೆ. ಆದ್ದರಿಂದ ಪ್ರತಿಯೊಬ್ಬರೂ ಯೋಗ ಮಾಡುವ ಮೂಲಕ ಆರೋಗ್ಯ ಕಾಪಾಡಿಕೊಳ್ಳಬಹುದು ಎಂದು ಶಾಸಕ ಎ.ಬಿ.ರಮೇಶ್‌ಬಾಬು ಬಂಡಿಸಿದ್ದೇಗೌಡ ತಿಳಿಸಿದರು.

ನಾಡಹಬ್ಬ ಶ್ರೀರಂಗಪಟ್ಟಣ ದಸರಾ ಅಂಗವಾಗಿ ಪಟ್ಟಣದ ಶ್ರೀರಂಗನಾಥಸ್ವಾಮಿ ದೇವಸ್ಥಾನದ ಮುಂಭಾಗ ಜಿಲ್ಲಾಡಳಿತ ಮತ್ತು ಜಿಪಂ, ಆಯುಷ್ ಇಲಾಖೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಆಯೋಜಿಸಿದ್ದ ದಸರಾ ವೈವಿಧ್ಯಮಯ ಯೋಗ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಯೋಗ ಶಾಲೆಗಳು ಹೆಚ್ಚುತ್ತಿರುವುದು ಗಮನಾರ್ಹ ವಿಷಯ. ಪ್ರತಿಯೊಬ್ಬರೂ ನಿತ್ಯ ಯೋಗ ಮಾಡುವ ಮೂಲಕ ಆರೋಗ್ಯವನ್ನು ಹತೋಟಿಯಲ್ಲಿಟ್ಟುಕೊಂಡು ದೈಹಿಕ ಸದೃಢತೆ ಕಾಪಾಡಿಕೊಳ್ಳುವಂತೆ ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜ್ ಮಾತನಾಡಿ, ಯೋಗ ದೇಹ ಮತ್ತು ಮನಸ್ಸನ್ನು ಸಮನ್ವಯಗೊಳಿಸುವ ಒಂದು ಪ್ರಕ್ರಿಯೆ. ಇದೊಂದು ದಿವ್ಯ ಔಷಧ ಪ್ರಸಾರಣವಾಗಿದೆ ಯೋಗ ಭಾರತೀಯರು ಪ್ರಪಂಚಕ್ಕೆ ನೀಡಿದ ಅತ್ಯುತ್ತಮ ಸಂಶೋಧನೆ ಎಂದರು.

ಈ ವೇಳೆ ಜಿಲ್ಲಾ ಆಯುಷ್ ವೈದ್ಯಾಧಿಕಾರಿ ಡಾ.ಸೀತಾಲಕ್ಷ್ಮಿ, ವಾರ್ತಾಧಿಕಾರಿ ಎಸ್.ಹೆಚ್.ನಿರ್ಮಲ, ಎಎಫ್‌ಐನ ಅಧ್ಯಕ್ಷ ಕಲಾಧರ್, ಶ್ರೀರಂಗಪಟ್ಟಣ ಆಯುಷ್ ವೈದ್ಯಾಧಿಕಾರಿ ವೆಂಕಟೇಶ್, ಯೋಗ ಗುರು ಸತ್ಯನಾರಾಯಣ ಶಾಸ್ತ್ರಿ ಸೇರಿದಂತೆ ವಿವಿಧ ಸಂಘ–ಸಂಸ್ಥೆಗಳು, ಯೋಗ ಪಟುಗಳು ಹಾಜರಿದ್ದರು.

ಜೀವನ ಮೌಲ್ಯ ಕಲಿಯಲು ಎನ್‌ಎಸ್‌ಎಸ್ ಸಹಕಾರಿ

ಚನ್ನೇಗೌಡ ವಿದ್ಯಾಸಂಸ್ಥೆ ಕಾರ್ಯದರ್ಶಿ ಅಪೂರ್ವಚಂದ್ರ



ಮದ್ದೂರು, ಅ.17– ಶಿಬಿರಾರ್ಥಿಗಳು ಸೇವಾ ಮನೋಭಾವ ಹಾಗೂ ಜೀವನ ಮೌಲ್ಯ ಕಲಿಯಲು ರಾಷ್ಟ್ರೀಯ ಸೇವಾ ಯೋಜನೆ ಸಹಕಾರಿಯಾಗಿದೆ. ಹೀಗಾಗಿ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಶಿಬಿರಗಳಲ್ಲಿ ಭಾಗವಹಿಸಬೇಕು ಎಂದು ಎಂ.ಹೆಚ್.ಚನ್ನೇಗೌಡ ವಿದ್ಯಾಸಂಸ್ಥೆ ಕಾರ್ಯದರ್ಶಿ ಸಿ.ಅಪೂರ್ವಚಂದ್ರ ತಿಳಿಸಿದರು.

ತಾಲೂಕಿನ ಬೆಳತ್ತೂರು ಗ್ರಾಮದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಹೆಚ್.ಕೆ. ವೀರಣ್ಣಗೌಡ ಪದವಿಪೂರ್ವ ಕಾಲೇಜಿನ ಸಹಯೋಗದಲ್ಲಿ ನಡೆದ ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ವಿಶೇಷ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಭಾರತವು ಗ್ರಾಮೀಣ ಪ್ರದೇಶಗಳಿಂದ ಕೂಡಿದ್ದು, ಗಾಂಧೀಜಿಯವರ ಪರಿಕಲ್ಪನೆಯಲ್ಲಿ ಪ್ರಾರಂಭವಾದ ರಾಷ್ಟ್ರೀಯ ಸೇವಾ ಯೋಜನೆಯ ಶಿಬಿರಗಳಲ್ಲಿ ವಿದ್ಯಾರ್ಥಿಗಳು ಸಮರ್ಪಣಾ ಮನೋಭಾವದಿಂದ ತೊಡಗಿಸಿಕೊಳ್ಳುವ ಮೂಲಕ ಭಾವೈಕ್ಯತೆ, ಸೌಹಾರ್ದತೆ, ಸಹಕಾರ, ಸಂಯಮ, ವ್ಯಕ್ತಿತ್ವ ವಿಕಸನ, ಸ್ವಚ್ಛತೆ ಒಳಗೊಂಡ ಜೀವನದ ಮೌಲ್ಯಗಳನ್ನು ಕಲಿಯುವ ಮೂಲಕ ಸಮಾಜಮುಖಿ ವ್ಯಕ್ತಿಯಾಗಿ ರೂಪುಗೊಳ್ಳಬೇಕೆಂದು ಕಿವಿಮಾತು ಹೇಳಿದರು.

ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ಜೀವನದಲ್ಲಿ ಕೇವಲ ಅಂಕ ಗಳಿಕೆಗೆ ಸೀಮಿತವಾಗುತ್ತಿರುವುದು ವಿಷಾದನೀಯ. ಪಠ್ಯೇತರ ಚಟುವಟಿಕೆಗಳಾದ ಕ್ರೀಡೆ, ಸಾಂಸ್ಕೃತಿಕ ಹಾಗೂ ಸೇವಾ ಶಿಬಿರಗಳಲ್ಲಿ ಭಾಗವಹಿಸಿ ಮಾನವೀಯ ಗುಣಗಳನ್ನು ಮೈಗೂಡಿಸಿಕೊಳ್ಳಬೇಕು ಎಂದರು.

ಹೊಸಕೆರೆ ಗ್ರಾಪಂ ಅಧ್ಯಕ್ಷೆ ಶಾಂತಮ್ಮ ಮಾತನಾಡಿದರು. ಗ್ರಾಪಂ ಉಪಾಧ್ಯಕ್ಷೆ ನಿರ್ಮಲಾ, ಸದಸ್ಯರಾದ ಡಿ.ನಳಿನ ಕುಮಾರಿ, ಅನಂತರಾಮು, ಮುಖಂಡರಾದ ಬಿ.ಎಂ.ಶಿವರಾಮು, ಎಂ.ಶಿವರಾಜು ಪ್ರಾಂಶುಪಾಲರಾದ ಯು.ಎಸ್.ಶಿವಕುಮಾರ್, ಜಿ.ಎಸ್.ಶಂಕರೇಗೌಡ, ಶಿಬಿರಾಧಿಕಾರಿಗಳಾದ ಹೆಚ್. ಎಸ್.ಪಂಚಲಿಂಗೇಗೌಡ ಹಾಗೂ ಸಹ ಶಿಬಿರಾರ್ಥಿಗಳಾದ ಎನ್.ರೇವಣ್ಣ, ಸಿ.ಜಯವರ್ಧನ್, ಎಂ.ಟಿ.ಮೋಹನ್‌ಕುಮಾರ್, ಜಿ.ಸುರೇಂದ್ರ, ಬಿ.ಸಿ.ಶಿವಕುಮಾರ್ ಇದ್ದರು.

ಹೋರಾಟಗಾರರ ಮೇಲಿನ ಪ್ರಕರಣ ಹಿಂಪಡೆಯಲು ಒತ್ತಾಯ

ಮಂಡ್ಯ, ಅ.17– ಕಾವೇರಿ, ಮೇಕೆದಾಟು ಪಾದಯಾತ್ರೆ ಸೇರಿದಂತೆ ನಾಡಿನ ಹಿತರಕ್ಷಣೆ ಹೋರಾಟಗಳಲ್ಲಿ ಭಾಗವಹಿಸಿದ ಹೋರಾಟಗಾರರ ಮೇಲೆ ದಾಖಲಿಸಿರುವ ಪ್ರಕರಣಗಳನ್ನು ಹಿಂಪಡೆಯಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರನ್ನು ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಒತ್ತಾಯಿಸಿದ್ದಾರೆ.



ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ರಾಜ್ಯದಲ್ಲಿ ಈ ಹಿಂದೆ ನಡೆದ ನಾಡಿನ ನೆಲ, ಜಲ ಮತ್ತು ಭಾಷೆ ಹಿತರಕ್ಷಣೆಗಾಗಿ ಹಲವಾರು ಹೋರಾಟಗಳು ನಡೆದಿದ್ದು, ಸದರಿ ಹೋರಾಟಗಳಿಗೆ ಸಂಬಂಧಿಸಿದಂತೆ ಜನಪ್ರತಿನಿಧಿಗಳು, ಹಿರಿಯ ರಾಜಕಾರಣಿಗಳು, ಕನ್ನಡಪರ ಹೋರಾಟಗಾರರು, ಕಾಂಗ್ರೆಸ್ ಕಾರ್ಯಕರ್ತರು ನಿರಂತರ ಪ್ರತಿಭಟನೆ ನಡೆಸಿದ್ದರು. ಕಾವೇರಿ ನೀರಿಗೆ ಸಂಬಂಧಿಸಿದಂತೆ ಮೇಕೆದಾಟು ಹಾಗೂ ಇನ್ನಿತರೆ ವಿಷಯಗಳಿಗೆ ಸಾಕಷ್ಟು ಧರಣಿಗಳು, ಪ್ರತಿಭಟನೆಗಳು ಹಾಗೂ ಪಾದಯಾತ್ರೆಗಳು ನಡೆದಿದ್ದು, ಅಂದಿನ ಬಿಜೆಪಿ ಸರ್ಕಾರ ಹೋರಾಟದ ಕಿಚ್ಚನ್ನು ನಿಯಂತ್ರಿಸಲು ಶಾಸಕರು, ಮಾಜಿ ಶಾಸಕರು, ಹಿರಿಯ ರಾಜಕಾರಣಿಗಳು, ಮುಖಂಡರು, ರೈತ ಹೋರಾಟಗಾರರು, ಕನ್ನಡಪರ ಸಂಘಟನೆಗಳು ಹಾಗೂ ಸಾರ್ವಜನಿಕರ ಮೇಲೆ ಸುಳ್ಳು ಪ್ರಕರಣ ದಾಖಲಿಸ ಲಾಗಿದೆ. ಇದರಿಂದಾಗಿ ಹಲವರು ಇಂದಿಗೂ ವಿನಾಕಾರಣ ನ್ಯಾಯಾಲಯಗಳಿಗೆ ಅಲೆದಾಡುತ್ತಿದ್ದು, ಹೀಗಾಗಿ ಪ್ರಕರಣದಲ್ಲಿರುವವರು ಸೇರಿದಂತೆ ಕುಟುಂಬದವರು ಇದರಿಂದ ಸಾಕಷ್ಟು ಸಮಸ್ಯೆ ಎದುರಿಸುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಪ್ರತಿಭಟನೆ, ಧರಣಿ ನಡೆಸುವುದು ಪ್ರಜಾ ಪ್ರಭುತ್ವ ವ್ಯವಸ್ಥೆಯ ಭಾಗವಾಗಿದ್ದು, ಜನರ ಹಾಗೂ ನಾಡಿನ ಹಿತದೃಷ್ಟಿಯಿಂದ ಒಳ್ಳೆಯ ಉದ್ದೇಶಕ್ಕಾಗಿ ನಡೆಸುವ ಹೋರಾಟಗಳು ಹಾಗೂ ಪ್ರತಿಭಟನಾ ಮಾರ್ಗದ ಮೂಲಕ ಸರ್ಕಾರದ ಕಣ್ಣು ತೆರೆಸಿ ಜನೋಪಯೋಗಿ ಯೋಜನೆಗಳ ಹಾಗೂ ಕಾಮಗಾರಿಗಳ ಅನುಷ್ಠಾನಗೊಳಿಸುವ ಸಂಬಂಧ ಒತ್ತಡ ಹೇರಲು ಪಕ್ಷಾತೀತವಾಗಿ ಎಲ್ಲರೂ ಹೋರಾಟಗಳಲ್ಲಿ ಭಾಗಿಯಾಗಿದ್ದು, ಇದನ್ನು ಗಂಭೀರವಾಗಿ ಪರಿಗಣಿಸಿ ಎಂದು ಮನವಿ ಮಾಡಿದ್ದಾರೆ.

ಇಂತಹ ಸಂದರ್ಭದಲ್ಲಿ ಇವರ ಮೇಲೆ ಅಂದಿನ ಸರ್ಕಾರ ರಾಜ್ಯದ ವಿವಿಧ ಠಾಣೆಗಳಲ್ಲಿ ಪ್ರತಿಭಟನೆಗಳನ್ನು ಹತ್ತಿಕ್ಕಲು ಹಲವು ಕೇಸ್‌ಗಳನ್ನು ದಾಖಲಿಸಿದೆ. ಇದರಿಂದ ಹಲವಾರು ಜನರು ಇಂದಿಗೂ ಸಹ ಸಂಕಷ್ಟ ಪರಿಸ್ಥಿತಿ ಎದುರಿಸುತ್ತಿದ್ದಾರೆ. ಮೇಕೆದಾಟು ಯೋಜನೆಗಾಗಿ ಕಾಂಗ್ರೆಸ್ ಪಕ್ಷ ಒಂದು ಉಗ್ರ ಹೋರಾಟವನ್ನೇ ನಡೆಸಿ, ಪಾದಯಾತ್ರೆ ಮಾರ್ಗವಾಗಿ ಸರ್ಕಾರದ ಗಮನ ಸೆಳೆದಿತ್ತು. ಈ ಪಾದಯಾತ್ರೆಯಲ್ಲಿ ಭಾಗಿಯಾದ ಹಲವರ ಮೇಲೆ ವಿನಾಕಾರಣ ಸುಳ್ಳು ಪ್ರಕರಣ ದಾಖಲಾಗಿದ್ದು, ಕನ್ನಡಪರ ಹೋರಾಟಗಾರರು, ರೈತರ ಮೇಲೆ ಪ್ರಕರಣ ದಾಖಲಿಸಲಾಗಿದೆ. ಈ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ಚರ್ಚೆಗೆ ತಂದು ಮರು ಪರಿಶೀಲನೆ ನಡೆಸಿ ದಾಖಲಾಗಿರುವ ಪ್ರಕರಣಗಳನ್ನು ಜರೂರಾಗಿ ಕೈಬಿಡುವಂತೆ ಅವರು ಕೋರಿದ್ದಾರೆ.

ಯುವ ಜನತೆ ಗಾಂಧೀಜಿ ಆದರ್ಶ ಮರೆಯುತ್ತಿದ್ದಾರೆ



ಭಾರತೀನಗರ, ಅ.17– ಗಾಂಧೀಜಿಯವರ ಆದರ್ಶಗಳನ್ನು ಯುವ ಜನತೆ ಮರೆಯುತ್ತಿದ್ದಾರೆ. ಶಾಂತಿ, ಪ್ರೀತಿ, ಸಹಬಾಳ್ವೆಯಿಂದ ಬದುಕಬೇಕೆನ್ನುವುದು ಗಾಂಧೀಜಿಯವರ ತತ್ವವಾಗಿತ್ತು ಎಂದು ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ತಿಳಿಸಿದರು.

ಭಾರತೀ ಕಾಲೇಜಿನ ಕುವೆಂಪು ಸಭಾಂಗಣದಲ್ಲಿ ಕೇಂದ್ರ ಸಂವಹನ ಇಲಾಖೆ ಮೈಸೂರು, ವಾರ್ತಾ ಮತ್ತು ಪ್ರಸಾರ ಸಚಿವಾಲಯ, ಭಾರತಿ ಕಾಲೇಜು ಭಾರತೀನಗರ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಮಂಡ್ಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮದ್ದೂರು, ಅಸೋಸಿಯೇಷನ್ ಆಫ್ ಅಲೈಯನ್ಸ್ ಕ್ಲಬ್, ಇಂಟರ್‌ನ್ಯಾಷನಲ್, ನಾರಾಯಣ ಹೃದಯಾಲಯ, ಅನ್ನಪೂರ್ಣ ಕಣ್ಣಿನ ಆಸ್ಪತ್ರೆ ಮೈಸೂರು, ಐಕ್ಯೂಎಸ್ ಸಾಂಸ್ಕೃತಿಕ ಸಮಿತಿ, ಗ್ರಂಥಾಲಯ, ಮತ್ತು ಮಾಹಿತಿ ಕೇಂದ್ರ, ಮಾನವಿಕ ವಿಭಾಗ ಇವರ ಸಂಯುಕ್ತಾಶ್ರಯದಲ್ಲಿ ನಡೆದ ಸ್ವಚ್ಛ ಭಾರತ ಮಿಷನ್ ಅಭಿಯಾನ 3.0 ಸ್ವಾತಂತ್ರ್ಯದ ಅಮೃತ ಮಹೋತ್ಸವ ಹಾಗೂ ಮಹಾತ್ಮ ಗಾಂಧೀಜಿ ಕುರಿತು ವಿಶೇಷ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಭ್ರಷ್ಟಾಚಾರ, ಅಸ್ಪೃಶ್ಯತೆ ಹೋಗಲಾಡಿಸಲು ಗಾಂಧೀಜಿ ಸಾಕಷ್ಟು ಹೋರಾಟ ನಡೆಸಿದ್ದಾರೆ. ಇಂದಿನ ಯುವ ಜನತೆ ಅವರ ಆದರ್ಶ ಮರೆತು ದುಶ್ಚಟಗಳಿಗೆ ಬಲಿಯಾಗುತ್ತಿದ್ದಾರೆ ಎಂದು ವಿಷಾದಿಸಿದರು.

ಗಾಂಧೀಜಿ ಹಾದಿಯಲ್ಲೇ ದಿ.ಜಿ.ಮಾದೇಗೌಡರು ಸಹ ನಡೆದಿದ್ದಾರೆ. ಗಾಂಧಿ ಅವರ ಆದರ್ಶದಲ್ಲಿ ಮಂಡ್ಯ ತಾಲೂಕು ಎಚ್.ಮಲ್ಲಿಗೆರೆ ಗ್ರಾಮದ 20 ಎಕರೆಯಲ್ಲಿ ಗಾಂಧಿಗ್ರಾಮ ನಿರ್ಮಾಣವಾಗುತ್ತಿದ್ದು, ಇದರಿಂದ ತಾಲೂಕಿನ ಸುತ್ತಮುತ್ತಲಿನ ಗ್ರಾಮ ಜನರಿಗೆ ಅನುಕೂಲವಾಗಲಿದೆ ಎಂದರು.

ಅಧ್ಯಕ್ಷತೆಯನ್ನು ಡಾ.ಪಿ. ನಾಗೇಂದ್ರ ವಹಿಸಿದ್ದರು. ಗಾಂಧಿಚಿತ್ರ ಬಿಡಿಸುವುದು, ಗಾಂಧಿ ಭಾಷಣ ಸ್ಪರ್ಧೆ, ರಂಗೋಲಿ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಲಾಯಿತು.

ಈ ವೇಳೆ ಭಾರತೀ ಎಜುಕೇಷನ್ ಟ್ರಸ್ಟ್ ಕಾರ್ಯದರ್ಶಿ ಬಿ.ಎಂ.ನಂಜೇಗೌಡ, ಭಾರತೀ ಕಾಲೇಜು ಸ್ನಾತಕೋತ್ತರ ಮತ್ತು ಸಂಶೋಧನಾ ಕೇಂದ್ರ ನಿರ್ದೇಶಕ ಎಸ್.ನಾಗರಾಜು, ಸಾಹಿತಿ ಡಾ.ಮ.ರಾಮಕೃಷ್ಣ, ನೋಡಲ್ ಅಧಿಕಾರಿ ಜಿ.ತುಕಾರಾಮೇಗೌಡ, ಬಿಇಡಿ ಪ್ರಾಂಶುಪಾಲ ಡಾ.ಸುರೇಶ್, ಡಾ.ತಮಿಜ್‌ಮಣಿ, ಡಾ.ಶ್ವೇತಾ, ಡಾ.ಬಾಲಕೃಷ್ಣ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿ ಉಮಾ, ಕ್ಷೇತ್ರ ಪ್ರಚಾರ ಸಹಾಯಕರು ಪಿ.ದರ್ಶನ್, ಪ್ರಾಧ್ಯಾಪಕ ಬಿ.ಎಲ್.ಪೃಥ್ವಿರಾಜ್, ಎಂ.ಪುಟ್ಟಸ್ವಾಮಿಗೌಡ, ಎಂ.ಎಸ್. ಮಹದೇವಸ್ವಾಮಿ, ಸಂಜೀವ್, ಕೆ.ಟಿ.ಶ್ರೀನಿವಾಸ್ ಸೇರಿದಂತೆ ಹಲವರಿದ್ದರು.

ಹಿರಿಯ ನಾಗರಿಕರು ತಮ್ಮ ರಕ್ಷಣೆಗೆ ಜಾರಿಗೊಂಡಿರುವ ಕಾಯ್ದೆ ಕುರಿತು ಅರಿತುಕೊಳ್ಳಬೇಕು

● ಜಿಲ್ಲಾ ಪ್ರಧಾನ ನ್ಯಾಯಾಧೀಶ ಜಿ.ಎಸ್.ಸಂಗ್ರೇಶಿ ಸಲಹೆ ● ಹಿರಿಯರಿಗೆ ರಕ್ಷಣೆ ಸಂದೇಶ ನೀಡುವ ಹೊಂಗಿರಣ ನಾಟಕ ವೀಕ್ಷಣೆ ● ದಸರಾ ವಿವಿಧ ವೇದಿಕೆಗಳಲ್ಲಿನ ಸಂಗೀತ, ನಾಟಕ, ನೃತ್ಯಕ್ಕೆ ಮಾರು ಹೋದ ಜನತೆ

ಮೈಸೂರು, ಅ.17(ಎಸ್‌ಪಿಎನ್)–ಅರವತ್ತು ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು 2007ರ ರಕ್ಷಣಾ ಕಾಯ್ದೆ ಕುರಿತು ಸಂಪೂರ್ಣವಾಗಿ ತಿಳಿದುಕೊಳ್ಳಲು ಪ್ರಯತ್ನಿಸಬೇಕು ಎಂದು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರೂ ಆದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಜಿ.ಎಸ್.ಸಂಗ್ರೇಶಿ ಸಲಹೆ ನೀಡಿದರು.

ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಕಲಾಮಂದಿರ ಆವರಣದ ಕಿರು ರಂಗಮಂದಿರದಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಮೈಸೂರು ವಕೀಲರ ಸಂಘ ಹಾಗೂ ಸಾಂಸ್ಕೃತಿಕ ದಸರಾ ಉಪ ಸಮಿತಿ ಸಹಯೋಗದೊಂದಿಗೆ ನಡೆದ ಮೂರನೇ ದಿನದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡು 'ಹೊಂಗಿರಣ' ನಾಟಕ ವೀಕ್ಷಿಸಿ ಮಾತನಾಡಿದರು. 2007ರ ಹಿರಿಯ ನಾಗರಿಕ ರಕ್ಷಣಾ ಕಾಯ್ದೆಯು ವಯಸ್ಸಾದ ಪೋಷಕರು ಮತ್ತು ಹಿರಿಯ ನಾಗರಿಕರ ನಿರ್ವಹಣೆ ಕುರಿತು ಮಾಹಿತಿ ನೀಡುತ್ತದೆ. ಅಲ್ಲದೆ, ಈ ಕಾಯ್ದೆಯು ವಯಸ್ಕ ಮಕ್ಕಳು ತಮ್ಮ ವಾರಸುದಾರರಿಗೆ ಮಾಸಿಕ ಭತ್ಯೆಯನ್ನು ನೀಡುವುದನ್ನು ಈ ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಈ ಕುರಿತು ಉಪ ವಿಭಾಗಾಧಿಕಾರಿ ನ್ಯಾಯಾಲಯದಲ್ಲಿ ದೂರು ದಾಖಲಿಸಿ, ಪರಿಹಾರ ಪಡೆಯಬಹುದು ಎಂದು ತಿಳಿಸಿದರು.

'ಹೊಂಗಿರಣ' ನಾಟಕದಲ್ಲಿ ಹಿರಿಯ ನಾಗರಿಕರ ರಕ್ಷಣಾ ಕಾಯ್ದೆ–2007 ಕುರಿತು ಕಲಾವಿದರಾದ ಎನ್.ಸುಂದರ್



ರಾಜ್, ಎಸ್.ಮಂಜುನಾಥ್, ವಿಶಾಲಾಕ್ಷಮ್ಮ, ಟಿ.ಪಿ. ಬಸವಶೆಟ್ಟಿ, ಎನ್.ತುಳಸಿ, ಪಿ.ಶ್ರದ್ಧ, ಟಿ.ಎನ್.ನಾಗನಂದ, ಆರ್.ಜಗದೀಶ್, ಎಸ್.ನವೀನ್ ಅಮೋಘವಾಗಿ ಅಭಿನಯಿಸಿದ್ದು, ಈ ಕಲಾವಿದರಲ್ಲಿ ಕೆಲವರು ವಕೀಲಿ ವೃತ್ತಿಯಲ್ಲಿ ತೊಡಗಿಸಿಕೊಂಡಿರುವುದು ಹೆಮ್ಮೆಯ ವಿಷಯ ಎಂದರು.

ಈ ಕಾಯ್ದೆಯನ್ನು ಜಾರಿಗೊಳಿಸಿದಾಗಿನಿಂದ, ತಮ್ಮ ಚರ ಅಥವಾ ಸ್ಥಿರ ಆಸ್ತಿಯನ್ನು ವರ್ಗಾಯಿಸಿದ ಹಿರಿಯ ನಾಗರಿಕರು, ವರ್ಗಾವಣೆದಾರರು ಅವರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು ಮತ್ತು ಅವರ ಭೌತಿಕ ಅಗತ್ಯಗಳನ್ನು ನೋಡಿಕೊಳ್ಳಬೇಕು ಎಂಬ ಷರತ್ತನ್ನು ವಿಧಿಸಿದೆ. ಮಕ್ಕಳು ಹಾಗೆ ಮಾಡಲು ನಿರಾಕರಿಸಿದರೆ, ಅಂತಹ ವರ್ಗಾವಣೆಯನ್ನು ಅನೂರ್ಜಿತಗೊಳಿಸುವ ಅವಕಾಶವನ್ನು ಕಲ್ಪಿಸಿದ್ದು ಈ ಎಲ್ಲಾ ಪ್ರಸಂಗವನ್ನು ನಾಟಕ ರೂಪದಲ್ಲಿ ಸಾರ್ವಜನಿಕರಲ್ಲಿ ಅರಿವು ಮೂಡುತ್ತಿರುವ ಮೈಸೂರು ವಕೀಲರ ಸಂಘದ ಕಾರ್ಯ ಶ್ಲಾಘನೀಯ ಎಂದರು.

ಈ ವೇಳೆ ಐದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಗುರುರಾಜ್ ಸೋಮಕ್ಕಲವರ್, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಂ.ಮಹಾದೇವಸ್ವಾಮಿ, ಉಪಾಧ್ಯಕ್ಷ ಪುಟ್ಟಸಿದ್ದೇಗೌಡ, ಕಾರ್ಯದರ್ಶಿ ಎಸ್.ಉಮೇಶ್, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಬಿ.ಜಿ.ದಿನೇಶ್, ಹಿರಿಯ ರಂಗಕರ್ಮಿ ದೀಪಕ್ ಮೈಸೂರು ಉಪಸ್ಥಿತರಿದ್ದರು. ಇದಕ್ಕೂ ಮುನ್ನ ಇದೇ ವೇದಿಕೆಯಲ್ಲಿ ಸುತ್ತೂರು ಗುರುಶಾಂತಪ್ಪ ಶಿವರಾತ್ರೀಶ್ವರ ಕಲಾಸಂಘದಿಂದ ಶಿವಶರಣ ಹರಳಯ್ಯ ನಾಟಕ, ಮೈಸೂರಿನ ಕಲಾವಿದೆ ಕೆ.ಅನನ್ಯ ಅವರಿಂದ ಭರತನಾಟ್ಯ ಪ್ರದರ್ಶನಗೊಂಡಿತು.

ಕಲಾಮಂದಿರ: ವೇದಿಕೆಯಲ್ಲಿ ಸಿದ್ಧಾರ್ಥ ಮತ್ತು ತಂಡದಿಂದ ವೀರಗಾಸೆ, ಮೈಸೂರು ಮಹಾಬೋಧಿ ಶಾಲೆ ವಿದ್ಯಾರ್ಥಿಗಳಿಂದ ಲಡಾಖಿ ಮತ್ತು ಅಸ್ಸಾಮಿ ನೃತ್ಯ, ಚಿಕ್ಕಮಗಳೂರು ಮಲ್ಲಿಗೆ ಸುಧೀರ್ ಮತ್ತು ತಂಡದಿಂದ ಅಶ್ವತ್ ಗಾಯನದ ಗೀತಗಾಯನ,ಕೊಪ್ಪಳದ ಅಕ್ಷರದವ್ವ ಸಾವಿತ್ರಿ ಬಾಯಿ ಫುಲೆ ಕಲಾತಂಡದಿಂದ ಜಾನಪದ ನೃತ್ಯ, ಬೆಂಗಳೂರು ಕವಿತಾ ಮತ್ತು ತಂಡದಿಂದ ಶಾಸ್ತ್ರೀಯ ನೃತ್ಯ ಪ್ರದರ್ಶನಗೊಂಡು ಕಲಾರಸಿಕರ ಮೆಚ್ಚುಗೆ ಪಡೆಯಿತು.

'ಕಿಂದರ ಜೋಗಿ' ನಾಟಕ ಮೆಚ್ಚಿದ ಡಿಸಿ ಪುತ್ರಿ, ಪತ್ನಿ:



ವನರಂಗ ಈ ವೇದಿಕೆಯಲ್ಲಿ ಕುವೆಂಪು ರಚಿತ ನೂರ್ ಅಹಮದ್ ಶೇಖ್ ನಿರ್ದೇಶನ ಹಾಗೂ ಹಾರ್ಡ್ವಿಕ್ ಸ್ವತಂತ್ರ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಂದ ಕಿಂದರಿ ಜೋಗಿ ನಾಟಕ ಪ್ರದರ್ಶನಗೊಂಡಿತು. ಈ ನಾಟಕವನ್ನು ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರ ಪತ್ನಿ ವರ್ಷಿತ, ಪುತ್ರಿ ಆದ್ರಿತಾ ಪ್ರೇಕ್ಷಕರ ಗ್ಯಾಲರಿಯಲ್ಲಿ ಕುಳಿತು ವೀಕ್ಷಿಸಿದರು. ಇವರಿಗೆ ರಂಗಾಯಣ ಉಪ ನಿರ್ದೇಶಕಿ ನಿರ್ಮಲಾ ಮಠಪತಿ ಸಾಥ್ ನೀಡಿದರು.

ಜಗನ್ಮೋಹನ ಅರಮನೆ ವೇದಿಕೆಯಲ್ಲಿ ಯಾದಗಿರಿಯ ಹಿರಿಯ ಕಲಾವಿದ ಹೊನ್ನಪ್ಪ ಬಿ.ಮಾನ್ವಡೆ ಶಹನಾಯಿ ವಾದನ ನುಡಿಸಿದರು. ಬೆಂಗಳೂರು ನೃತ್ಯ ಭಾರತಿ ಶುಭಕರಿ ಶಂಕರಿ ಶುಭಕರಿ ನೃತ್ಯರೂಪಕ ಪ್ರದರ್ಶಿಸಿದರೆ, ಮಂಡ್ಯದ ವಿದುಷಿ ಎನ್.ಶಾರದ ಮತ್ತು ತಂಡದಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ನಡೆಸಿಕೊಟ್ಟರು. ಬೆಂಗಳೂರಿನ ಆರಾಧನ ಭರತನಾಟ್ಯ ಕೇಂದ್ರದ ಡಾ.ಸುಧಾನಾಗರಾಜ್ ನೃತ್ಯಪ್ರದರ್ಶಿಸಿದರು.

ಗಾನಭಾರತಿ ವೇದಿಕೆಯಲ್ಲಿ ರಾಮನಗರದ ಚೆಕ್ಕೆರೆ ಸಿದ್ದರಾಜ ತಂಡದಿಂದ ಕಂಸಾಳೆ, ಕಮಲವ್ವ ನಾರಾಯಣ ಲಮಾಣಿ ಮತ್ತು ತಂಡದಿಂದ ಲಂಬಾಣಿ ನೃತ್ಯ, ಬೆಂಗಳೂರು ವನಿಷ್ ಮತ್ತು ತಂಡದಿಂದ ಮಹಿಳಾ ಡೊಳ್ಳುಕುಣಿತ, ಮೈಸೂರಿನ ವಿದ್ವಾನ್ ಮಹೇಶ್ ಮತ್ತು ತಂಡದಿಂದ ಶಾಸ್ತ್ರೀಯ ನೃತ್ಯ ಪ್ರದರ್ಶನ, ಬೆಂಗಳೂರು ಸೃಜನ ಆರ್ಟ್ಸ್ ಅಕಾಡೆಮಿ ಕಲಾವಿದರಿಂದ ಕಥಕ್ ನೃತ್ಯ ಪ್ರದರ್ಶಿಸಿದರು. ಆರ್.ಎಸ್.ಉಜ್ಜನಕೊಪ್ಪ ಅವರಿಂದ ಸುಗಮ ಸಂಗೀತ ನಡೆಸಿಕೊಟ್ಟರು.

ನಾದಬ್ರಹ್ಮ ಸಂಗೀತಸಭಾ ವೇದಿಕೆಯಲ್ಲಿ ಬೆಂಗಳೂರಿನ ಶ್ರೀ ವಿನಾಯಕ ಕಲಾವೃಂದದ ಬೆಳಕವಾಡಿಯ ಎಂ.ಕೃಷ್ಣಮೂರ್ತಿ ತಾಳವಾದ್ಯ ಜುಗಲ್‌ಬಂದಿ, ಧಾರವಾಡದ ಕಲಾರ್ಪಣ ಟ್ರಸ್ಟ್‌ನ ಕನಕ ಕಂಡ ಕೇಶವ ನೃತ್ಯರೂಪಕ, ಬೆಂಗಳೂರು ಸಂಹಿತ ಮತ್ತು ತಂಡದಿಂದ ದೇವಿ ಕೃತಿಗಳ ನೃತ್ಯರೂಪಕ ವಿಜಯಪುರದ ಉಮೇಶ್ ಪತ್ತಾರ ಅವರಿಂದ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ನಡೆಸಿಕೊಟ್ಟರು.

ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರದಾನ: ಅಲ್ಲು ಅರ್ಜುನ್ ಅತ್ಯುತ್ತಮ ನಟ, ಆಲಿಯಾ ಭಟ್, ಕೃತಿ ಸನೋನ್ ಅತ್ಯುತ್ತಮ ನಟಿ ಪ್ರಶಸ್ತಿ ಸ್ವೀಕಾರ









ಅಲ್ಲು ಅರ್ಜುನ್ ಅತ್ಯುತ್ತಮ ನಟ, ಆಲಿಯಾ ಭಟ್, ಕೃತಿ ಸನೋನ್, ಆರ್.ಮಾಧವನ್ ಅವರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು 69ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರದಾನ ಮಾಡಿದರು.

ಕನ್ನಡದ 'ಚಾರ್ಲಿ', ನಟ ಅನಿರುದ್ಧ್‌ಗೆ ರಾಷ್ಟ್ರೀಯ ಪ್ರಶಸ್ತಿ





ನವದೆಹಲಿ: ವಿಜ್ಞಾನ ಭವನದಲ್ಲಿ ಆಯೋಜಿಸಲಾಗಿದ್ದ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು 69ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರದಾನ ಮಾಡಿದರು. ನಟ ಅಲ್ಲು ಅರ್ಜುನ್, ಪುಷ್ಪ: ದಿ ರೈಸ್ ಚಿತ್ರಕ್ಕಾಗಿ ಅತ್ಯುತ್ತಮ ನಟ ಪ್ರಶಸ್ತಿಯನ್ನು ಪಡೆದರು.

ಆಲಿಯಾ ಭಟ್ ಮತ್ತು ಕೃತಿ ಸನೋನ್ 'ಗಂಗೂಬಾಯಿ ಕಥಿಯಾವಾಡಿ' ಮತ್ತು 'ಮಿಮಿ'ಗಾಗಿ ಅತ್ಯುತ್ತಮ ನಟಿ, ಆರ್. ಮಾಧವನ್ 'ರಾಕೆಟರಿ' ಸಿನಿಮಾಗಾಗಿ ಅತ್ಯುತ್ತಮ ಸಿನಿಮಾ, ರಾಜಮೌಳಿ ಆರ್‌ಆರ್‌ಆರ್ ಸಿನಿಮಾ ನಿರ್ದೇಶನಕ್ಕಾಗಿ ಪ್ರಶಸ್ತಿ ಪಡೆದರು. ರಣಬೀರ್ ಕಪೂರ್, ಕರಣ್ ಜೋಹರ್ ಸೇರಿದಂತೆ ಖ್ಯಾತ ತಾರೆಯರು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. ಸ್ಯಾಂಡಲ್ ವುಡ್ ನಟ ಅನಿರುದ್ಧ್, ಭಾರತಿ ವಿಷ್ಣುವರ್ಧನ್ ಅವರ ಜೀವನ ಕುರಿತಾದ ಸಾಕ್ಷ್ಯಚಿತ್ರ 'ಬಾಳೆ ಬಂಗಾರ'ಕ್ಕಾಗಿ ಅತ್ಯುತ್ತಮ ನಿರ್ದೇಶನ ಪ್ರಶಸ್ತಿ ಪಡೆದುಕೊಂಡರು. ಜೊತೆಗೆ ಅತ್ಯುತ್ತಮ ಕನ್ನಡ ಚಿತ್ರ ವಿಭಾಗದಲ್ಲಿ 'ಚಾರ್ಲಿ 777' ಸಿನಿಮಾ ಪ್ರಶಸ್ತಿ ಪಡೆಯಿತು. ನಿರ್ಮಾಪಕ, ನಟ ರಕ್ಷಿತ್ ಶೆಟ್ಟಿ ನಟ ಕಿರಣ್‌ರಾಜ್ ಪ್ರಶಸ್ತಿ ಪಡೆದರು. ಈ ಸಂಬಂಧ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಟ್ವೀಟ್ (ಎಕ್ಸ್) ಮಾಡಿ ಪ್ರಶಸ್ತಿ ಪಡೆದಿರುವವರಿಗೆ ಅಭಿನಂದಿಸಿದ್ದಾರೆ. ಅತ್ಯುತ್ತಮ ಕನ್ನಡ ಚಿತ್ರ ವಿಭಾಗದಲ್ಲಿ ಪ್ರಶಸ್ತಿ ಪಡೆದ ಚಾರ್ಲಿ 777 ಸಿನಿಮಾ ತಂಡ, ನಾನ್–ಫೀಚರ್ ಸಿನಿಮಾ ವಿಭಾಗದಲ್ಲಿ ಪ್ರಶಸ್ತಿ ಪಡೆದ 'ಬಾಳೇ ಬಂಗಾರ' ಸಾಕ್ಷ್ಯಚಿತ್ರ ತಂಡಕ್ಕೂ ಹೃದಯಪೂರ್ವಕ ಶುಭಾಶಯಗಳು. ಕನ್ನಡ ಚಿತ್ರರಂಗವು ಇನ್ನಷ್ಟು ಎತ್ತರಕ್ಕೆ ಬೆಳೆಯಲಿ ಎಂದು ಹಾರೈಸುತ್ತೇನೆ ಎಂದಿದ್ದಾರೆ.

ಪೌರಾಣಿಕ ನಾಟಕಗಳಿಗೆ ನೂಕುನುಗ್ಗಲು

ಸದ್ಯ, ಆಧುನಿಕತೆ ಭರಾಟೆಯಲ್ಲೂ ಬೇಡಿಕೆ ಕಾಯ್ದುಕೊಂಡ ನಾಟಕ ರಂಗ



ಮೈಸೂರು, ಅ.17(ಎಸ್‌ಬಿಡಿ)– ತುದಿ ಬೆರಳಲ್ಲಿ ಮನರಂಜನೆ ಜಗತ್ತು ತೆರೆದುಕೊಳ್ಳುವ ಈ ಹೊತ್ತಲೂ ಪೌರಾಣಿಕ ನಾಟಕಗಳನ್ನು ಆಸ್ವಾದಿಸುವ ರಂಗ ಪ್ರೇಮಿಗಳ ಸಂಖ್ಯೆ ಕ್ಷೀಣಿಸಿಲ್ಲ.

ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಪುರಭವನ ಸಾಂಸ್ಕೃತಿಕ ವೇದಿಕೆಯಲ್ಲಿ ಪೌರಾಣಿಕ, ಐತಿಹಾಸಿಕ ಹಾಗೂ ಸಾಮಾಜಿಕ ನಾಟಕಗಳು ಪ್ರದರ್ಶನವಾಗುತ್ತಿವೆ. ಬೆಳಗ್ಗೆ 10.30ರಿಂದ ರಾತ್ರಿ 9 ಗಂಟೆವರೆಗೆ ಮೂರು ನಾಟಕಗಳನ್ನು ಅಭಿನಯಿಸುತ್ತಿದ್ದಾರೆ. ಇಡೀ ದಿನ ಪುರಭವನ ಸಭಾಂಗಣ ಕಲಾಸಕ್ತರಿಂದ ಭರ್ತಿಯಾಗಿರುವುದು ಗಮನಾರ್ಹ. ಅದರಲ್ಲೂ ಪೌರಾಣಿಕ ನಾಟಕ ಪ್ರದರ್ಶನದ ವೇಳೆ ಎಷ್ಟೋ ಜನ ಆಸನವಿಲ್ಲದೆ ನಿಂತೇ ನಾಟಕ ನೋಡುತ್ತಾರೆ. ದೃಶ್ಯ, ಸಂಭಾಷಣೆ, ಅಭಿನಯ ತುಂಬಾ ಇಷ್ಟವಾದಾಗ ಶಿಳ್ಳೆ, ಚಪ್ಪಾಳೆ, ಕೇಕೆ ಮೂಲಕ ಕಲಾವಿದರ ಹುಮ್ಮಸ್ಸು ಹೆಚ್ಚಿಸುತ್ತಾರೆ.

ವರ್ಣರಂಜಿತ ವೇದಿಕೆ, ಹಾರ್ಮೋನಿಯಂ ನಾದ, ಪಾತ್ರದಾರಿಗಳ ವೇಷ ಭೂಷಣ, ಅವರ ಅಬ್ಬರದ ಸಂಭಾಷಣೆ, ಆಗಾಗ್ಗೆ ಇಣುಕುವ ಗಾಯನ, ಒಟ್ಟಾರೆ ಪೌರಾಣಿಕ ನಾಟಕ ರಸಾಯನವಿದ್ದಂತೆ. ಹಾಸ್ಯ ಮಿಶ್ರಿತ ಸಾಮಾಜಿಕ ನಾಟಕಗಳೂ ಪ್ರೇಕ್ಷಕರನ್ನು ರಂಜಿಸುವಲ್ಲಿ ಯಶಸ್ವಿಯಾಗಿವೆ. ಮೊಬೈಲ್, ಕಂಪ್ಯೂಟರ್, ಇಂಟರ್‌ನೆಟ್ ಯುಗದಲ್ಲಿ ಸಿನಿಮಾ ನೋಡುವವರೂ ಕಡಿಮೆಯಾಗಿದ್ದಾರೆ ಎನ್ನಲಾಗುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಕಲಾಸಕ್ತರು ಪುರಭವನದಲ್ಲಿ ಕಿಕ್ಕಿರಿದು ನಾಟಕ ಪರಂಪರೆಯನ್ನು ಪ್ರೋತ್ಸಾಹಿಸುತ್ತಿರುವುದು ಅಭಿನಂದನಾರ್ಹ.

ದಸರಾ ಆಹಾರ ಮೇಳದಲ್ಲಿ ಭೋಜನ ಪ್ರಿಯರ ಜಾತ್ರೆ

ಬಾಡೂಟ ಸವಿಯುತ್ತ ಸಂಗೀತ ಆಲಿಸುತ್ತಿದ್ದರೆ... ಆಹಾ, ಏನ್ ಚಂದ!





ಮೈಸೂರು, ಅ.17(ಎಂಕೆ)– ಕಿವಿಗೆ ಇಂಪು ನೀಡುವ ಸಂಗೀತದೊಂದಿಗೆ ಬಾಯಲ್ಲಿ ನೀರೂರಿಸಿದ ಬಗೆ ಬಗೆಯ ಖಾದ್ಯಗಳನ್ನು ಸವಿದು ಸಂಭ್ರಮಿಸಿದ ಆಹಾರ ಪ್ರಿಯರು...!

ನಗರದ ಸ್ಕೌಟ್ ಅಂಡ್ ಗೈಡ್ಸ್ ಮೈದಾನದಲ್ಲಿ ನಡೆಯುತ್ತಿರುವ ದಸರಾ ಆಹಾರ ಮೇಳಕ್ಕೆ ಜನ ಸಾಗರವೇ ಹರಿದು ಬರುತ್ತಿದ್ದು, ಮಂಗಳ ವಾರ ರಾತ್ರಿ ಭರ್ಜರಿ ಬಾಡೂಟ ಸವಿದು ಫೋಟೋ ಕ್ಲಿಕ್ಕಿಸಿಕೊಂಡು ಸಂಭ್ರಮಿಸಿದರಲ್ಲದೆ ಇಂಪಾದ ಸಂಗೀತಕ್ಕೆ ತಲೆ ಆಡಿಸುತ್ತಾ ಕಾಲ ಕಳೆದರು. ಸಂಜೆಯಾಗುತ್ತಿದ್ದಂತೆ ಆಹಾರ ಮೇಳಕ್ಕೆ ಸಾಗರೋಪಾದಿಯಲ್ಲಿ ಧಾವಿಸಿದ ಖಾದ್ಯ ಪ್ರಿಯರು ತಮ್ಮಿಷ್ಟದ ತಿಂಡಿ–ತಿನಿಸುಗಳ ರುಚಿ ಸವಿದರು.

ಅದರಲ್ಲೂ ಮಾಂಸಾಹಾರ ಸಾಲಿನ ಮಳಿಗೆಗಳು ಸಂಪೂರ್ಣ ಭರ್ತಿಯಾಗಿತ್ತು. ಧಮ್ ಬಿರಿಯಾನಿ, ಪೆಪ್ಪರ್ ಚಿಕನ್ ಬಿರಿಯಾನಿ, ಚಿಕನ್ ಕಬಾಬ್, ಫಿಸ್ ಕಬಾಬ್, ಚಿಕನ್ ಲಾಲಿಪಪ್, ಕಲ್ಮಿ ಕಬಾಬ್, ಚಿಕನ್ ಫ್ರೈ ತಿಂದು ತೇಗಿದರು. ಅದರಲ್ಲೂ ಬಿರಿಯಾನಿ, ಒಂದು ಮೊಟ್ಟೆ, ಕಬಾಬ್ ಮತ್ತು ನೀರಿನ ಬಾಟಲ್ ಒಳಗೊಂಡ ಕಾಂಬೋ ಆಫರ್(100 ರಿಂದ 150) ಮಾಂಸಾಹಾರ ಪ್ರಿಯರ ನೆಚ್ಚಿನದಾಗಿತ್ತು. ಹಾಗೆಯೇ ಮಟನ್ ಬಂಬೂ ಬಿರಿಯಾನಿ, ಲೆಗ್ ಸೂಪ್, ಅಂಜಲ್ ಫಿಸ್ ತವಾ ಫ್ರೈ ರುಚಿ ನೋಡಿದರು.

ಆಹಾರ ಮೇಳದ ವಿಶೇಷ ಆಕರ್ಷಣೆಯಾದ ಬೊಂಬು ಬಿರಿಯಾನಿ, ಗೆಣಸು, ಜೇನುತುಪ್ಪ, ಬಿದಿರಕ್ಕಿ ಪಾಯಸ, ನಳ್ಳಿ ಸಾರು, ಕಾಡುಸೊಪ್ಪು, ಕರಳೇ ಪಲ್ಯಕ್ಕೆ ಎಲ್ಲಿಲ್ಲದ ಬೇಡಿಕೆ. ಹಾಗೆಯೇ ಸಸ್ಯಾಹಾರ ಪ್ರಿಯರು ವೆಜ್ ಬಿರಿಯಾನಿ, ಮಶ್ರೂಮ್ ಬಿರಿಯಾನಿ, ಪುಳಿಯೋಗರೆ, ಬೆಣ್ಣೆದೋಸೆ, ಅಕ್ಕಿರೊಟ್ಟಿ, ಎಣ್ಣೆಗಾಯಿ ಪಲ್ಯ, ಮಿರ್ಚಿ ಗಿರ್ಮಿಟ್, ಭಜ್ಜಿ ಇನ್ನಿತರೆ ಖಾದ್ಯಗಳನ್ನು ಚಪ್ಪರಿಸಿದರು.

ಕಿವಿಗೆ ಇಂಪಾದ ಸಂಗೀತ: ಈ ಬಾರಿ ಆಹಾರ ಮೇಳದ ಮಧ್ಯದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳ ವೇದಿಕೆ ನಿರ್ಮಾಣ ಮಾಡಲಾಗಿದ್ದು, ಆಹಾರ ಮೇಳಕ್ಕೆ ಆಗಮಿಸುವವರು ಆಹಾರ ಸೇವಿಸುತ್ತಲೇ ಕಾರ್ಯಕ್ರಮ ವೀಕ್ಷಣೆ ಮಾಡಲು ಅನುಕೂಲವಾಗಿದೆ. ಮೈಸೂರು ಫ್ರೆಂಡ್ಸ್ ಯೂನಿಯನ್ ಸಿಂಗಿಂಗ್ ಗ್ರೂಪ್, ದೊಸ್ತಿ ಮ್ಯೂಸಿಕಲ್ ಗ್ರೂಪ್ ಚಲನಚಿತ್ರ ಗೀತೆಗಳು ಹಾಗೂ ಜಾನಪದ ಹಾಡುಗಳ ಮೂಲಕ ಗಮನ ಸೆಳೆದರೆ, ಮೈಸೂರಿನ ಸೂರಜ್ ಹಾಗೂ ಯಶವಂತ್ ಅವರ ಗಿಟಾರ್ ವಾದನ ಮನಸ್ಸಿಗೆ ಮುದ ನೀಡಿತು.


ಸಂಚಾರ ಪೊಲೀಸರು ಹೈರಾಣ: ಆಹಾರ ಮೇಳದ ಎದುರು ವಾಹನ ದಟ್ಟಣೆ ಹೆಚ್ಚಾಗಿದ್ದು, ಸಂಚಾರ ಪೊಲೀಸರನ್ನು ಹೈರಾಣಾಗಿಸಿತು. ಒಂದೆಡೆ ಸಂಚಾರ ಪೊಲೀಸರು ವಾಹನ ದಟ್ಟಣೆ ನಿಯಂತ್ರಿಸಲು ಹೆಣಗಾಡುತ್ತಿದ್ದರೆ ಬೇರೆ ಬೇರೆ ಜಿಲ್ಲೆಗಳಿಂದ ಬಂದೋಬಸ್ತಿಗೆ ಬಂದಿರುವ ಕಾನೂನು ಮತ್ತು ಸುವ್ಯವಸ್ಥೆ ಮತ್ತು ಇನ್ನಿತರೆ ಪೊಲೀಸ್ ಸಿಬ್ಬಂದಿ ಅಲ್ಲಲ್ಲಿ ಕುಳಿತು ಕೆಲಸವೇ ಇಲ್ಲದಂತೆ ಮೊಬೈಲ್ ಹಿಡಿದು ಕಾಲ ಕಳೆಯುತ್ತಿದ್ದರು.

ಉತ್ತಮ ಪಾರ್ಕಿಂಗ್ ವ್ಯವಸ್ಥೆ: ಹಳೇ ಜಿಲ್ಲಾಧಿಕಾರಿ ಕಚೇರಿ ಪಕ್ಕದ ಪಾರ್ಕ್ ಹಾಗೂ ಎನ್‌ಸಿಸಿ ಬೆಟಾಲಿಯನ್ ಎದುರಿನ ರಸ್ತೆಯಲ್ಲಿ ವಾಹನಗಳ ಪಾರ್ಕಿಂಗ್‌ಗೆ ವ್ಯವಸ್ಥೆ ಕಲ್ಪಿಸಿದ್ದರಿಂದ ಸುರಕ್ಷಿತ ಸ್ಥಳದಲ್ಲಿ ಪಾರ್ಕಿಂಗ್ ಮಾಡಿ ಆಹಾರ ಮೇಳಕ್ಕೆ ಬರಲು ಅನುಕೂಲ ಮಾಡಿಕೊಡಲಾಗಿದೆ. ಪಾರ್ಕ್‌ನೊಳಗೆ ಪಾರ್ಕಿಂಗ್ ಮಾಡುವವರಿಗಿಂತ ರಸ್ತೆ ಬದಿ ಪಾರ್ಕಿಂಗ್ ಮಾಡುವವರಿಂದಾಗಿ ಪೊಲೀಸರಿಗೆ ಕಿರಿಕಿರಿ ಉಂಟಾಗಿತ್ತು.

ಮನೆಯಂತೆ ಕುಳಿತು ಊಟ

ಕಳೆದ ವರ್ಷಕ್ಕಿಂತ ವಿಶಾಲ ಜಾಗದಲ್ಲಿ ಆಯೋಜಿಸಿರುವ ಆಹಾರ ಮೇಳದಲ್ಲಿ ಹಸಿರು ನೆಲಹಾಸು ಹಾಕಿರುವುದರಿಂದ ಬಹುತೇಕರು ಮನೆಯಲ್ಲಿ ಊಟ ಮಾಡುವಂತೆ ಕುಳಿತು ಮನೆಮಂದಿಯೊಂದಿಗೆ ಭೋಜನ ಸವಿದರು. ಕುಡಿಯುವ ನೀರು ಪೂರೈಕೆ ಜೊತೆಗೆ ಕಸ ವಿಲೇವಾರಿ ಅಚ್ಚುಕಟ್ಟಾಗಿರುವುದರಿಂದ ಯಾವುದೇ ಸಮಸ್ಯೆಗಳು ಉಂಟಾಗಿರಲಿಲ್ಲ.

ಸಾಹಸ ಪ್ರಿಯರಿಗೆ ರಸದೌತಣ ನೀಡಿದ ಮಲ್ಲರ ಸೆಣಸಾಟ!



ಮೈಸೂರು, ಅ.17(ಎಂಕೆ)– ಮಟ್ಟಿ ಜೊತೆಗೆ ಮ್ಯಾಟ್‌ನಲ್ಲಿಯೂ ಸೆಣಸಾಡಿ ಸೈ ಎನಿಸಿಕೊಂಡ ಕುಸ್ತಿ ಪೈಲ್ವಾನರು ಕ್ರೀಡಾಭಿಮಾನಿಗಳ ಮನಸೂರೆಗೊಂಡರು..!

ನಗರದ ದಸರಾ ವಸ್ತು ಪ್ರದರ್ಶನ ಪ್ರಾಧಿಕಾರದ ಶ್ರೀ ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ಮಂಗಳವಾರ ದಸರಾ ನಾಡಕುಸ್ತಿ ಜೊತೆಗೆ ಸಿಎಂ ಕಪ್ ಪಂದ್ಯಾವಳಿಯ ಮೊದಲ ಲೀಗ್ ಹಂತದ ಫ್ರೀ ಸ್ಟೈಲ್ ಕುಸ್ತಿ ಪಂದ್ಯಗಳು ನಡೆದವು.

ವಿವಿಧ ವಿಭಾಗಗಳಲ್ಲಿ ಸೆಣಸಾಡಿದ ಪೈಲ್ವಾನರು ಗೆದ್ದು ಕಪ್‌ಗಾಗಿ ಸೆಣಸಾಟ ನಡೆಸಲಿದ್ದಾರೆ. ದಾವಣಗೆರೆ, ಬೆಳಗಾಂ, ಬಾಗಲಕೋಟೆ, ಮೈಸೂರು ಸೇರಿದಂತೆ ಹಲವೆಡೆಯಿಂದ ಆಗಮಿಸುವ ಪೈಲ್ವಾನರಲ್ಲಿ ದಾವಣಗೆರೆ ಪೈಲ್ವಾನರು ಪ್ರಾಬಲ್ಯ ಸಾಧಿಸಿದರು.

ಬಳಿಕ ಎಂದಿನಂತೆ ಆರಂಭಗೊಂಡ ಮೂರನೇ ದಿನದ ನಾಡಕುಸ್ತಿ ಪಂದ್ಯಗಳಲ್ಲಿ ಭಾಗವಹಿಸಿದ 41 ಜೋಡಿಗಳ 16 ಪಂದ್ಯಗಳಲ್ಲಿ ಸಮಬಲವಾದರೆ, 12 ಪಂದ್ಯದಲ್ಲಿ ಎದುರಾಳಿ ಪಟು ಗೈರಾದ ಹಿನ್ನೆಲೆ ಹಾಜರಿದ್ದವರನ್ನು ವಿಜಯಶಾಲಿ ಎಂದು ಘೋಷಣೆ ಮಾಡಲಾಯಿತು. ಹಾಗೆಯೇ ಉಳಿದ ಪಂದ್ಯಗಳಲ್ಲಿ ಸೆಣಸಾಡಿದ ಪೈಲ್ವಾನರು ಎದುರಾಳಿಯನ್ನು ಚಿತ್ ಮಾಡುವ ಮೂಲಕ ಗೆದ್ದು ಬೀಗಿದರು.

ಇಂಗಳಗಿ ಪೈ.ಅಸ್ಲಾಂ ವಿರುದ್ಧ ರಾಣಿ ಬೆನ್ನೂರು ಪೈ.ಚಂದ್ರು, ಅಶೋಕಪುರಂ ಪೈ.ವೇದಾಂತ್ ವಿರುದ್ಧ ಕಳಲೆ ಪೈ. ದರ್ಶನ್, ಉದ್ಬೂರು ಪೈ.ಮಂಜುನಾಥ್ ವಿರುದ್ಧ ಬನ್ನೂರು ಪೈ.ಸಂಜಯ್, ಗುಂಡ್ಲುಪೇಟೆ ಪೈ. ಅಭಿಷೇಕ್ ವಿರುದ್ಧ ನಂಜನಗೂಡು ಪೈ.ರವಿಕುಮಾರ್, ನಂಜನಗೂಡು ಪೈ.ಚಿರಂಜೀವಿ ವಿರುದ್ಧ ಅಶೋಕಪುರಂ ಪೈ.ಭುವನ್ಸ್, ರಮ್ಮನಹಳ್ಳಿ ಪೈ.ವಿಷ್ಣು ವಿರುದ್ಧ ನಂಜನಗೂಡು ಪೈ.ಮನೋಜ್, ಒಕ್ಕಲಗೆರೆ ಗರಡಿ ಪೈ.ವಿವೇಕ್ ವಿರುದ್ಧ ರಾಮನಗರ ಪೈ.ಮನೋಜ್‌ಗೌಡ ಜಯ ಗಳಿಸಿದರು.

ಗುಂಡ್ಲುಪೇಟೆ ಪೈ.ಶಿವಕುಮಾರ್ ವಿರುದ್ಧ ಮಾಗಡಿ ಪೈ.ಪುನೀತ್, ಟಿ.ನರಸೀಪುರ ಪೈ.ಪ್ರೀತಮ್ ವಿರುದ್ಧ ರಮ್ಮನಹಳ್ಳಿ ಪೈ.ಮಹೇಶ್, ಮೇಟಗಳ್ಳಿ ಪೈ.ತಾಜುದ್ದೀನ್ ವಿರುದ್ಧ ಮೆಲ್ಲಹಳ್ಳಿ ಪೈ.ಮಹದೇವಸ್ವಾಮಿ, ಕನಕಪುರ ಪೈ.ಆದರ್ಶ ವಿರುದ್ಧ ಅಶೋಕಪುರಂ ಚಿಕ್ಕಗರಡಿ ಪೈ.ನಿಶಾಂತ್, ಮಂಡ್ಯ ಪೈ.ವರಲಕ್ಷ್ಮಿ ವಿರುದ್ಧ ಕಳಲೆ ಪೈ.ಯಶ್ವಂತ್ ಕುಮಾರ್ ವಿಜಯ ಸಾಧಿಸಿದರು.

ಇಂದಿನಿಂದ ಟೈಟಲ್ ಪಂದ್ಯಗಳು...!

ನಾಳೆ(ಅ.18)ಯಿಂದ 57 ರಿಂದ 65 ಕೆ.ಜಿ ವಿಭಾಗದ ದಸರಾ ಕಿಶೋರ, 74 ರಿಂದ 86 ಕೆ.ಜಿ ವಿಭಾಗದ ದಸರಾ ಕೇಸರಿ, 86 ಕೆ.ಜಿಗಿಂತಲೂ ಮೇಲ್ಪಟ್ಟ ವಿಭಾಗದ ದಸರಾ ಕಂಠೀರವ, 57 ರಿಂದ 62 ಕೆ.ಜಿ ವಿಭಾಗದ ದಸರಾ ಕಿಶೋರಿ, ಮೈಸೂರು ವಿಭಾಗ ಮಟ್ಟದ (74 ಕೆ.ಜಿ ಮೇಲ್ಪಟ್ಟು) ಮೈಸೂರು ದಸರಾ ಕುಮಾರ್ ಟೈಟಲ್ ಪಂದ್ಯಗಳು ನಡೆಯಲಿದ್ದು, ಅ.21 ರಂದು ಫೈನಲ್ ಪಂದ್ಯಗಳು ನಡೆಯಲಿವೆ.

- ಡಾ.ಜಿ.ಎನ್.ನಂದಿನಿ,
ಉಪ ವಿಶೇಷಾಧಿಕಾರಿ, ದಸರಾ ಕುಸ್ತಿ ಪಂದ್ಯಾವಳಿ ಉಪಸಮಿತಿ



ಮೈಸೂರು ಟ್ರಾವೆಲ್ ಸಂಸ್ಥೆಗಳಿಗೆ 3 ಸಾವಿರ ಗೋಲ್ಡ್ ಕಾರ್ಡ್ ಕಲ್ಪಿಸಲು ಆಗ್ರಹ

• ಗೋಲ್ಡ್ ಕಾರ್ಡ್ ಬಿಡುಗಡೆ ವಿಳಂಬವಾಗಿದ್ದಕ್ಕೆ ಪ್ರವಾಸೋದ್ಯಮ ವಲಯ ತೀವ್ರ ಬೇಸರ • ಮೈಸೂರು ಪ್ರವಾಸೋದ್ಯಮಕ್ಕೆ ಇರುವ 'ದಸರಾ' ಅವಕಾಶ ಸದುಪಯೋಗಕ್ಕೂ ಮನವಿ • ಹೊರ ರಾಜ್ಯಗಳ ವಾಹನಗಳಿಗೆ ನೀಡಿರುವ ತೆರಿಗೆ ವಿನಾಯ್ತಿ ಅ.30ರವರೆಗೆ ವಿಸ್ತರಿಸಲು ಒತ್ತಾಯ



ಮೈಸೂರು, ಅ.17(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದಲ್ಲಿ ಪ್ರವಾಸಿಗರಿಗೆ ಅವಶ್ಯವಿರುವ ಗೋಲ್ಡ್‌ಕಾರ್ಡ್ ಬಿಡುಗಡೆ ವಿಳಂಬಕ್ಕೆ ಬೇಸರ ವ್ಯಕ್ತಪಡಿಸಿರುವ ಮೈಸೂರು ಸಂಘ–ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ಬಿ.ಎಸ್.ಪ್ರಶಾಂತ್, ಟ್ರಾವೆಲ್ ಸಂಸ್ಥೆಗಳಿಗೆ ಕನಿಷ್ಠ 3 ಸಾವಿರ ಗೋಲ್ಡ್ ಕಾರ್ಡ್ ನೀಡುವುದರ ಜೊತೆಗೆ ದೀಪಾಲಂಕಾರ ಅವಧಿ ಹಾಗೂ ಹೊರ ರಾಜ್ಯದ ಪ್ರವಾಸಿ ವಾಹನಗಳಿಗೆ ನೀಡಿರುವ ತೆರಿಗೆ ವಿನಾಯಿತಿಯನ್ನು ಮಾಸಾಂತ್ಯದವರೆಗೂ ವಿಸ್ತರಿಸುವಂತೆ ಒತ್ತಾಯಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿವರ್ಷ ದಸರಾ ಆರಂಭಕ್ಕೂ ಮುನ್ನವೇ ಗೋಲ್ಡ್ ಕಾರ್ಡ್ ಬಿಡುಗಡೆ ಮಾಡುವ ಪದ್ಧತಿ ಅನುಸರಿಸಲಾಗುತ್ತಿತ್ತು. ಇದರಿಂದ ಹೊರ ರಾಜ್ಯದ ಪ್ರವಾಸಿಗರನ್ನು ಸೆಳೆಯಲು ಸಹಾಯವಾಗುತ್ತಿತ್ತು. ಆದರೆ, ಈ ಬಾರಿ ನವರಾತ್ರಿ ಆರಂಭವಾಗಿ 4 ದಿನವಾದರೂ ಗೋಲ್ಡ್‌ಕಾರ್ಡ್ ಬಗ್ಗೆ ಯಾವುದೇ ಮಾಹಿತಿ ಇಲ್ಲ.

ನಾಡಹಬ್ಬ ದಸರಾ ಮಹೋತ್ಸವ ಯಶಸ್ವಿಗೊಳಿಸಲು ಟ್ರಾವೆಲ್ಸ್ ಅಸೋಸಿಯೇಷನ್ ಸೇರಿದಂತೆ ಪ್ರವಾಸೋದ್ಯಮ ಅವಲಂಬಿತ ಸಂಸ್ಥೆಗಳು ದೇಶದ ವಿವಿಧ ರಾಜ್ಯಗಳ ಪ್ರವಾಸಿ ಸಂಸ್ಥೆಗಳನ್ನು ಸಂಪರ್ಕಿಸಿ ಮೈಸೂರಿಗೆ ಪ್ರವಾಸಿಗರನ್ನು ಆಹ್ವಾನಿಸುತ್ತೇವೆ. ಇದರಿಂದ ಮೈಸೂರು ಮಾತ್ರವಲ್ಲದೆ, ಸುತ್ತಮುತ್ತಲಿನ ಪ್ರವಾಸೋದ್ಯಮ ಬೆಳೆಯುತ್ತದೆ. ಸರ್ಕಾರಕ್ಕೆ ಜಿಎಸ್‌ಟಿ ಸೇರಿದಂತೆ ವಿವಿಧ ರೂಪದಲ್ಲಿ ಆದಾಯ ಕ್ರೋಢೀಕರಣವಾಗಲಿದೆ. ಆದರೆ, ಈ ಬಾರಿ ದಸರಾ ಆರಂಭವಾಗಿದ್ದರೂ ಗೋಲ್ಡ್‌ಕಾರ್ಡ್ ಬಿಡುಗಡೆ ಮಾಡದಿರುವುದು ಖಂಡನೀಯ. ಈ ಬಾರಿ ಗೋಲ್ಡ್ ಕಾರ್ಡ್ ಜಂಬೂಸವಾರಿ ಹಾಗೂ ಪಂಜಿನ ಕವಾಯತು ವೀಕ್ಷಣೆಗೆ ಮಾತ್ರ ಸೀಮಿತವಾದಂತಿದೆ. ಈ ಹಿಂದೆ ನವರಾತ್ರಿ ಆರಂಭದ ದಿನದಂದೇ ಗೋಲ್ಡ್ ಕಾರ್ಡ್ ಹೊಂದಿರುವವರು ವಿವಿಧ ಕಾರ್ಯಕ್ರಮಗಳ ವೀಕ್ಷಣೆ ಮಾಡಬಹುದಿತ್ತು. ಈ ಬಾರಿ ಒಂದು ದಿನಕ್ಕೆ ಮಾತ್ರ ಸೀಮಿತಗೊಳಿಸುವ ಹುನ್ನಾರ ನಡೆದಿರುವುದು ಖಂಡನೀಯ ಎಂದರು.

ಪ್ರವಾಸೋದ್ಯಮಕ್ಕೆ ಚೈತನ್ಯ ನೀಡುವ ನಿಟ್ಟಿನಲ್ಲಿ ಹಲವು ಸಂಸ್ಥೆಗಳು ಶ್ರಮಿಸುತ್ತಿವೆ. ಹಾಗಾಗಿ ದಸರಾ ಮಹೋತ್ಸವದ ಸಂದರ್ಭದಲ್ಲಿ ಟ್ರಾವೆಲ್ಸ್ ಸಂಸ್ಥೆಗಳಿಗೆ ಕನಿಷ್ಠ 3 ಸಾವಿರ ಗೋಲ್ಡ್ ಕಾರ್ಡ್ ಮೀಸಲಿಡಬೇಕು. ಬೇಕಿದ್ದರೆ ಗಣ್ಯರಿಗೆ ಡೈಮಂಡ್ ಕಾರ್ಡ್ ಮುದ್ರಿಸಿ ಹಂಚಿಕೆ ಮಾಡಲಿ. ಗೋಲ್ಡ್ ಕಾರ್ಡ್ ಪ್ರವಾಸಿ ಸಂಸ್ಥೆಗಳಿಗೆ ನೀಡಲು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ತೆರಿಗೆ ವಿನಾಯಿತಿ ವಿಸ್ತರಿಸಿ: ದಸರಾ ಹಿನ್ನೆಲೆಯಲ್ಲಿ ಮೈಸೂರು, ಮಂಡ್ಯದ ಕೆಆರ್‌ಎಸ್‌ಗೆ ಬರುವ ಹೊರ ರಾಜ್ಯದ ಪ್ರವಾಸಿ ವಾಹನಗಳಿಗೆ ಅ.16ರಿಂದ 24 ರವರೆಗೆ ತೆರಿಗೆ ವಿನಾಯಿತಿ ನೀಡಲಾಗಿದ್ದು, ಈ ಸೌಲಭ್ಯವನ್ನು ಮಾಸಾಂತ್ಯದವರೆಗೂ ವಿಸ್ತರಿಸಬೇಕು. ಈ ಅವಧಿಯಲ್ಲಿ ತೆರಿಗೆ ವಿನಾಯಿತಿ ನೀಡಲಿ, ನೀಡದೇ ಇರಲಿ ಪ್ರವಾಸಿಗರು ಬರುತ್ತಾರೆ. ಜಂಬೂಸವಾರಿ ದಿನವೇ ತೆರಿಗೆ ವಿನಾಯಿತಿ ಅಂತ್ಯಗೊಂಡರೆ ಪ್ರವಾಸೋದ್ಯಮವೇ ಬಂದ್ ಆದಂತಾಗುತ್ತದೆ. ದಸರಾ ನಂತರವೂ ಪ್ರವಾಸಿಗರನ್ನು ಸೆಳೆಯಲು ತೆರಿಗೆ ವಿನಾಯಿತಿ ವಿಸ್ತರಿಸಬೇಕು ಎಂದು ಮನವಿ ಮಾಡಿದರು.

ದೀಪಾಲಂಕಾರ ವಿಸ್ತರಿಸಿ: ನವರಾತ್ರಿ ಹಿನ್ನೆಲೆಯಲ್ಲಿ ಮೈಸೂರಲ್ಲಿ ಮಾಡಿರುವ ದೀಪಾಲಂಕಾರದ ವ್ಯವಸ್ಥೆ ಕನ್ನಡ ರಾಜ್ಯೋತ್ಸವದವರೆಗೂ ವಿಸ್ತರಿಸಲು ಕ್ರಮ ಕೈಗೊಳ್ಳಬೇಕು. ಜಂಬೂಸವಾರಿ ನಂತರದ ದಿನ ಮೈಸೂರು ಕತ್ತಲು ಆವರಿಸುವಂತೆ ಮಾಡಬಾರದು. ಈ ಹಿನ್ನೆಲೆಯಲ್ಲಿ ದೀಪಾಲಂಕಾರದ ಅವಧಿಯನ್ನು ವಿಸ್ತರಿಸಬೇಕು ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಸಂಘ–ಸಂಸ್ಥೆಗಳ ಒಕ್ಕೂಟದ ಉಪಾಧ್ಯಕ್ಷ ಸಿ.ನಾರಾಯಣ ಗೌಡ, ನಿರ್ದೇಶಕ ಸಿ.ಎ.ಜಯಕುಮಾರ್, ಜಿಮ್ ಮಾಲೀಕರ ಸಂಘದ ಅಧ್ಯಕ್ಷ ಹರ್ಷ, ಗೈಡ್ ಸಂಸ್ಥೆಯ ಅಧ್ಯಕ್ಷ ಅಶೋಕ್, ಟ್ರಾವೆಲ್ಸ್ ಅಸೋಸಿಯೇಷನ್ ಅಧ್ಯಕ್ಷ ಜೆ.ಪಿ.ಅರಸ್ ಇದ್ದರು.

ಸಿತಾರ್ ವಾದನದ ತನ್ಮಯತೆ, ನೃತ್ಯದ ಭಾವಭಂಗಿಯ ವೈಭವ

ಅರಮನೆ ವೇದಿಕೆಯ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸಂಭ್ರಮಿಸಿದ ಸಭಿಕರು







ಮೈಸೂರು,ಅ.17(ಪಿಎಂ)– ತನ್ಮಯಗೊಳಿಸಿದ ಸಿತಾರ್ ವಾದನ, ನೃತ್ಯದ ವೈಭವ ಅನಾವರಣಗೊಳಿಸಿದ ಭರತನಾಟ್ಯ, ಪಾಶ್ಚಿಮಾತ್ಯ ಸಂಗೀತದಲ್ಲಿ ವಿಭಿನ್ನವಾಗಿ ಹೊರಹೊಮ್ಮಿದ ಜಾನಪದ ಗೀತೆ ಗಾಯನವು ಸಭಿಕರನ್ನು ಮಂತ್ರಮುಗ್ಧರನ್ನಾಗಿಸಿತು.

ದಸರಾ ಮಹೋತ್ಸವ ಪ್ರಯುಕ್ತ ಸಾಂಸ್ಕೃತಿಕ ಉಪಸಮಿತಿ ವತಿಯಿಂದ ಅರಮನೆ ವೇದಿಕೆಯಲ್ಲಿ ಹಮ್ಮಿಕೊಂಡಿರುವ ಸಾಂಸ್ಕೃತಿಕ ಕಾರ್ಯಕ್ರಮ ಅಂಗವಾಗಿ ಮೂರನೇ ದಿನವಾದ ಮಂಗಳವಾರ ಸಂಜೆ ಇಂತಹ ನೃತ್ಯ, ಸಂಗೀತದ ಕಲಾತ್ಮಕ ಲೋಕ ನೆರೆದವರ ಮನಸೂರೆಗೊಂಡಿತು.

ಕೊಡಗು ಜಿಲ್ಲೆಯ ಗಿರಿಜನ ಸಮಗ್ರ ಅಭಿವೃದ್ಧಿ ಕಲಾ ಸಂಸ್ಥೆಯ ಕಲಾವಿದರು ತಮ್ಮ ಬುಡಕಟ್ಟು ನೃತ್ಯ, ಸಂಗೀತ ಮತ್ತು ಗಾಯನದೊಂದಿಗೆ ಸಭಿಕರ ಮನತಣಿಸಿದರು. ಬಿದಿರು ಬಂಬೂ, ನೀರಿನ ಪ್ಲಾಸ್ಟಿಕ್ ಡ್ರಮ್ ಮೊದಲಾದವುಗಳೇ ಇವರ ವಾದ್ಯಗಳಾಗಿದ್ದವು. ನಾಗರಹೊಳೆಯ ಪುಟ್ಟ ಪ್ರದೇಶದ ಇವರು, ದೆಹಲಿಯ ರಿಪಬ್ಲಿಕ್ ಪರೇಡ್‌ನಲ್ಲಿ ಭಾಗವಹಿಸಿದ್ದ ಕೀರ್ತಿಗೂ ಭಾಜನರಾಗಿದ್ದಾರೆ.

ತಮ್ಮ ಸಾಂಸ್ಕೃತಿಕ ವೈಭವವನ್ನು ಹೆಮ್ಮೆಯಿಂದ ಪ್ರದರ್ಶಿಸಿದ ಈ ಕಲಾವಿದರು, ಸಭಿಕರ ಚಪ್ಪಾಳೆ ಗಿಟ್ಟಿಸುವಲ್ಲಿ ಯಶಸ್ವಿಯಾದರು. ತಮ್ಮ ಜೇನುಕುರುಬ ಭಾಷೆಯಲ್ಲಿ ಗಾಯನ ಸಾದರಪಡಿಸಿ, ತಮ್ಮ ಬುಡಕಟ್ಟು ಬದುಕಿನ ಸಾಂಸ್ಕೃತಿಕ ಲೋಕದಲ್ಲಿ ಸಭಿಕರನ್ನು ತೇಲಿಸಿದರು.

ಬಳಿಕ ನಡೆದ ಸಿತಾರ್ ವಾದನ ನೆರೆದವರನ್ನು ತನ್ಮಯಗೊಳಿಸಿತು. ಸುಮಾರು ಒಂದು ತಾಸು ಸಿತಾರ್ ವಾದ್ಯದ ತಂತಿ ಮೀಟಿ ನಾದಮಯ ಲೋಕ ಅನಾವರಣಗೊಳಿಸಿದ ಸಂಗೀತ ಕಲಾವಿದರು, ಸಭಿಕರು ತಲೆದೂಗುವಂತೆ ಮಾಡಿದರು. ಸಿತಾರ್ ವಾದನದ ಜುಗಲ್‌ಬಂದಿಯ ಈ ವಾದ್ಯ ಸಂಗೀತ ಕಾರ್ಯಕ್ರಮದಲ್ಲಿ ಉಸ್ತಾದ್ ರಫೀಕ್ ಖಾನ್ ಮತ್ತು ವಿದ್ವಾನ್ ಅಂಕುಶ್ ಎನ್.ನಾಯಕ್ ಅವರು ಚಾರುಕೇಶಿ ರಾಗದಲ್ಲಿ ಸಿತಾರ್ ನುಡಿಸಿ ಕೇಳುಗರು ತಲೆದೂಗುವಂತೆ ಮಾಡಿದರು.

ಹಂಪಿ ಉತ್ಸವ ಸೇರಿದಂತೆ ದೇಶ–ವಿದೇಶಗಳಲ್ಲಿ ಕಾರ್ಯಕ್ರಮ ನೀಡಿದ ಈ ಇಬ್ಬರು ಸಿತಾರ್ ಕಲಾವಿದರು ಇಂದು ಅರಮನೆ ಆವರಣದಲ್ಲಿ ಸಿತಾರ್ ತಂತಿ ಮೀಟಿ ಸಂಗೀತದ ಹೊಳೆ ಹರಿಸಿದರು. ಪರಸ್ಪರರೂ ಪೈಪೋಟಿಯಲ್ಲಿ ಸಿತಾರ್ ನುಡಿಸಿ ಸಂಗೀತದ ಝೇಂಕಾರ ಹೊಮ್ಮಿಸಿದರು.

ಚಿಂತನ್ ವಿಕಾಸ್ ಫೀಟ್ ಪ್ರಾಜೆಕ್ಟ್ ಎಕ್ಸಡಸ್ ತಂಡದ ಕಲಾವಿದರು ಜಾನಪದ ಗಾಯನಕ್ಕೆ ಪಾಶ್ಚಿಮಾತ್ಯ ಸಂಗೀತದ ಸ್ಪರ್ಶ ನೀಡುವ ಮೂಲಕ ವಿಭಿನ್ನ ಕಲಾ ಲೋಕವೊಂದನ್ನು ಅನಾವರಣಗೊಳಿಸಿತು. 'ಶಿವನೇ ನಿನ್ನ ಆಟ ಬಲ್ಲವರು ಯಾರ‍್ಯಾರೋ...' ಗೀತೆಯನ್ನು ಈ ತಂಡದ ಗಾಯಕ ದೇವಾನಂದ ವರಪ್ರಸಾದ್ ಸಾದರಪಡಿಸಿ ಸಭಿಕರಿಂದ ಚಪ್ಪಾಳೆ ಗಿಟ್ಟಿಸಿದರು.

ಇದೇ ತಂಡದ ಚಿಂತನ್ ವಿಕಾಸ್ 'ನಾನ್ಯಾರೆಂಬುದು ನಾನಲ್ಲ...', ಸಂತ ಶಿಶುನಾಳ ಶರೀಫರ 'ಗುಡಿಯ ನೋಡಿರಣ್ಣ ದೇಹದ ಗುಡಿಯ ನೋಡಿರಣ್ಣ...' ಗೀತೆ ಸೇರಿದಂತೆ ಹಲವು ಗೀತೆಗಳನ್ನು ಪ್ರಸ್ತುತಪಡಿಸಿ, ಸಭಿಕರು ಸಂಭ್ರಮಿಸುವಂತೆ ಮಾಡಿದರು. ಖಾಸಗಿ ವಾಹಿನಿಯ 'ಸರಿಗಮಪ' ರಿಯಾಲಿಟಿ ಶೋನಲ್ಲಿ ಭಾಗವಹಿಸಿದ್ದ ಖ್ಯಾತಿಯನ್ನು ಹೊಂದಿರುವ ಸೃಷ್ಟಿ ಸುರೇಶ್ ಸೇರಿದಂತೆ ಮೊದಲಾದವರು ಪಕ್ಕವಾದ್ಯದಲ್ಲಿ ಸಹಕಾರ ನೀಡಿದರು.

ಭೂಷಣ್ಸ್ ಅಕಾಡೆಮಿ ಪರ್ಫಾರ್ಮಿಂಗ್ ಆರ್ಟ್ಸ್ ವತಿಯಿಂದ ನೀಡಿದ 'ಶ್ರೀ ರಾಮಾನುಜ ಧನುರ್ದಾಸ ವೈಭವಂ' ಕುರಿತ ಭರತನಾಟ್ಯ ಸಭಿಕರನ್ನು ಮೋಡಿ ಮಾಡಿತು. ಅಂತಿಮವಾಗಿ ನಡೆದ ವಿದ್ವಾನ್ ಶಶಾಂಕ್ ಸುಬ್ರಹ್ಮಣ್ಯಂ ಮತ್ತು ವಿದ್ವಾನ್ ರಾಕೇಶ್ ಚೌರಾಸಿಯಾ ಅವರ 'ಕರ್ನಾಟಕಿ–ಹಿಂದೂಸ್ಥಾನಿ ಜುಗಲ್ ಬಂದಿ ವಾದ್ಯ ಸಂಗೀತ ಸಭಿರನ್ನು ಸಂಗೀತ ಅಲೆಯಲ್ಲಿ ತೇಲಿಸಿತು.



ವಿಶ್ವಕಪ್ ಮಹಾಸಮರ 2023

ಧರ್ಮಶಾಲಾದಲ್ಲಿ ಡಚ್ಚರಿಂದ ಹರಿಣಗಳ ಬೇಟೆ

• ವಿಶ್ವಕಪ್‌ನಲ್ಲಿ ಮತ್ತೊಂದು ಆಘಾತಕಾರಿ ಫಲಿತಾಂಶ • ದ.ಆಫ್ರಿಕಾಕ್ಕೆ ತೀವ್ರ ಮುಖಭಂಗ • ನೆದರ್ಲೆಂಡ್‌ಗೆ ಜೊಚ್ಚಲ ಗೆಲುವು



ಧರ್ಮಶಾಲಾ, ಅ.17– ಕ್ಯಾಪ್ಟನ್ ಸ್ಕಾಟ್ ಎಡ್ವರ್ಡ್ಸ್ ಅವರ ಅರ್ಧಶತಕ ಹಾಗೂ ಬೌಲರ್‌ಗಳ ಕರಾರುವಾಕ್ ಬೌಲಿಂಗ್ ದಾಳಿ ನೆರವಿನಿಂದ ನೆದರ್ಲೆಂಡ್ಸ್, ದಕ್ಷಿಣ ಆಫ್ರಿಕಾ ವಿರುದ್ಧ 38 ರನ್‌ಗಳ ಭರ್ಜರಿ ಜಯ ಸಾಧಿಸಿದೆ.

ಕ್ರಿಕೆಟ್ ಅಭಿಮಾನಿಗಳು ಏಕದಿನ ವಿಶ್ವಕಪ್‌ನಲ್ಲಿ ಅಫ್ಘಾನಿಸ್ತಾನ ಹಾಲಿ ಚಾಂಪಿಯನ್ ಇಂಗ್ಲೆಂಡ್ ತಂಡಕ್ಕೆ ಆಘಾತ ನೀಡಿದ ಸುದ್ದಿಯಿಂದ ಸುಧಾರಿಸಿಕೊಳ್ಳುತ್ತಿರುವಾಗಲೇ ಮತ್ತೊಂದು ಆಘಾತಕಾರಿ ಫಲಿತಾಂಶ ದಾಖಲಾಗಿದೆ. ಆ ಮೂಲಕ ಹ್ಯಾಟ್ರಿಕ್ ಗೆಲುವಿನ ನಿರೀಕ್ಷೆಯಲ್ಲಿದ್ದ ದಕ್ಷಿಣ ಆಫ್ರಿಕಾಕ್ಕೆ ಮುಖಭಂಗವಾದರೆ, ನೆದರ್ಲೆಂಡ್ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಚೊಚ್ಚಲ ಗೆಲುವು ಸಾಧಿಸಿದೆ.

ಇಲ್ಲಿನ ಹಿಮಾಚಲ ಪ್ರದೇಶ ಕ್ರಿಕೆಟ್ ಅಸೋಸಿಯೇಷನ್ ಅಂತಾರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂನಲ್ಲಿ ಮಳೆ ಕಾರಣದಿಂದಾಗಿ ತಲಾ 43 ಓವರ್‌ಗೆ ಇಳಿಸಲಾಗಿದ್ದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ನೆದರ್ಲೆಂಡ್ಸ್ 50 ರನ್ ಆಗುವಷ್ಟರಲ್ಲೇ ವಿಕ್ರಮಜಿತ್ ಸಿಂಗ್ 2, ಮ್ಯಾಕ್ಸ್ ಓ'ಡೌಡ್ 18, ಕಾಲಿನ್ ಆಕರ್ಮನ್ 12, ಬಾಸ್ ಡಿ ಲೀಡೆ 2 ರನ್ ಗಳಿಸಿ ವಿಕೆಟ್ ಒಪ್ಪಿಸಿದ್ದರು. ನಂತರ ಬಂದ ಸೈಬ್ರಾಂಡ್ ಎಂಗಲ್‌ಬ್ರೆಕ್ಟ್ 19 ಹಾಗೂ ತೇಜ ನಿಡಮನೂರು 20 ರನ್ ಗಳಿಸಿ ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ನಿಲ್ಲದೇ ನಿರ್ಗಮಿಸಿದರು. ಬಳಿಕ ಬಂದ ಲೋಗನ್ ವ್ಯಾನ್ ಬೀಕ್ ಕೇವಲ 10 ರನ್‌ಗಳಿಸಿ ಪೆವಿಲಿಯನ್ ಸೇರಿಕೊಂಡರು. ಈ ವೇಳೆ ನೆದರ್ಲೆಂಡ್ಸ್ ಪರ ಏಕಾಂಗಿಯಾಗಿ ನಾಯಕನಿಗೆ ತಕ್ಕ ಆಟವಾಡಿದ ಸ್ಕಾಟ್ ಎಡ್ವರ್ಡ್ಸ್ ಅರ್ಧಶತಕ ಸಿಡಿಸಿ ತಂಡದ ಮೊತ್ತವನ್ನು 200ರ ಗಡಿ ದಾಟಿಸಿದರು. ಆ ಮೂಲಕ ತಂಡದ ಸ್ಪರ್ಧಾತ್ಮಕ ಮೊತ್ತಕ್ಕೆ ಕಾರಣರಾದರು. ಸ್ಕಾಟ್ ಎಡ್ವರ್ಡ್ಸ್ 69 ಎಸೆತಗಳಲ್ಲಿ 10 ಬೌಂಡರಿ, 1 ಸಿಕ್ಸರ್ ಒಳಗೊಂಡ 78ರನ್ ಗಳಿಸಿ ಅಜೇಯರಾಗಿ ಉಳಿದರು. ಕೊನೆಯಲ್ಲಿ ಬಿರುಸಿನ ಆಟವಾಡಿದ ರೋಲೋಫ್ ವ್ಯಾನ್ ಡೆರ್ ಮೆರ್ವೆ 29ರನ್ ಗಳಿಸಿದರೆ, ಆರ್ಯನ್ ದತ್ ಸ್ಫೋಟಕ 23 ರನ್ ಬಾರಿಸಿದರು. ಅಂತಿಮವಾಗಿ ನೆದರ್ಲೆಂಡ್ಸ್ 43 ಓವರ್‌ಗೆ 8 ವಿಕೆಟ್ ನಷ್ಟಕ್ಕೆ 245 ರನ್ ಗಳಿಸಿತು. ದಕ್ಷಿಣ ಆಫ್ರಿಕಾ ಪರ ಲುಂಗಿ ಎನ್ಗಿಡಿ, ಮಾರ್ಕೊ ಜಾನ್ಸೆನ್, ಕಗಿಸೋ ರಬಾಡ ತಲಾ 2 ಹಾಗೂ ಜೆರಾಲ್ಡ್ ಕೋಟ್ಜಿ, ಕೇಶವ ಮಹಾರಾಜ್ ತಲಾ 1 ವಿಕೆಟ್ ಕಬಳಿಸಿದರು.

246 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ದಕ್ಷಿಣ ಆಫ್ರಿಕಾ ಬ್ಯಾಟ್ಸ್‌ಮನ್‌ಗಳ ವೈಫಲ್ಯದಿಂದ 207 ರನ್‌ಗಳಿಗೆ ಆಲೌಟ್ ಆಗಿ ಸೋಲೊಪ್ಪಿಕೊಂಡಿತು. ಪಿಚ್‌ನ ಸಂಪೂರ್ಣ ಲಾಭ ಪಡೆದ ನೆದರ್ಲೆಂಡ್ಸ್ ಬೌಲರ್‌ಗಳು ದಕ್ಷಿಣ ಆಫ್ರಿಕಾ ಮೊತ್ತ 44 ರನ್ ಆಗುವಷ್ಟರಲ್ಲಿ ತೆಂಬಾ ಬವುಮಾ 16, ಕ್ವಿಂಟನ್ ಡಿ ಕಾಕ್ 20, ರಾಸ್ಸೀ ವ್ಯಾನ್ ಡೆರ್ ಡಸ್ಸೆನ್ 4, ಏಡೆನ್ ಮಾರ್ಕ್ರಾಮ್ 1 ರನ್ ಅಮರುಗಳ ವಿಕೆಟ್ ಉರುಳಿಸಿದರು. ಈ ವೇಳೆ ಒಂದಾದ ಹೆನ್ರಿಕ್ ಕ್ಲಾಸೆನ್ ಮತ್ತು ಡೇವಿಡ್ ಮಿಲ್ಲರ್ 45 ರನ್ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರಾದರೂ ತಂಡವನ್ನು ಗೆಲುವಿನ ಹಂತಕ್ಕೆ ಕೊಂಡೊಯ್ಯುವಲ್ಲಿ ವಿಫಲರಾದರು. ಹೆನ್ರಿಕ್ ಕ್ಲಾಸೆನ್ 28 ರನ್ ಗಳಿಸಿ ನಿರ್ಗಮಿಸಿದರು. ಇನ್ನು ಮಿಲ್ಲರ್ 43ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ನಂತರ ಬಂದ ಮಾರ್ಕೊ ಜಾನ್ಸೆನ್ 9, ಜೆರಾಲ್ಡ್ ಕೋಟ್ಜಿ 22, ಕಗಿಸೊ ರಬಾಡ 9 ರನ್ ಗಳಿಸಿ ಔಟಾದರು. ಇನ್ನಿಂಗ್ಸ್ ಕೊನೆವರೆಗೂ ಹೋರಾಡಿದ ಕೇಶವ್ ಮಹಾರಾಜ್ 40 ರನ್ ಹಾಗೂ ಲುಂಜಿ ಎನ್‌ಗಿಡಿ 7 ರನ್ ಗಳಿಸಿ ಸೋಲಿನ ಅಂತರವನ್ನು ತಗ್ಗಿಸಿದರು. ನೆದರ್ಲೆಂಡ್ಸ್ ಪರ ಲೋಗನ್ ವ್ಯಾನ್ ಬೀಕ್ 3, ಪಾಲ್ ವ್ಯಾನ್ ಮೀಕೆರೆನ್, ರೋಲೋಫ್ ವ್ಯಾನ್ ಡೆರ್ ಮೆರ್ವೆ, ಬಾಸ್ ಡಿ ಲೀಡೆ ತಲಾ 2 ಹಾಗೂ ಕಾಲಿನ್ ಅಕರ್ಮನ್ 1 ವಿಕೆಟ್ ಕಬಳಿಸಿ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಸ್ಕಾಟ್ ಎಡ್ವರ್ಡ್ಸ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಲಂಡನ್‌ನಲ್ಲಿ ಬಸವರಾಜ ಹೊರಟ್ಟಿ, ಯು.ಟಿ. ಖಾದರ್‌ಗೆ ಸನ್ಮಾನ



ಲಂಡನ್, ಅ.17– ವಿಶ್ವಗುರು ಜಗಜ್ಯೋತಿ ಬಸವಣ್ಣನವರ ಚಿಂತನೆಗಳು, ಸಂದೇಶಗಳು ಸರ್ವಕಾಲಿಕ ಎಂದು ಸಭಾಪತಿ ಬಸವರಾಜ ಹೊರಟ್ಟಿ ಅಭಿಪ್ರಾಯಪಟ್ಟರು. ಲಂಡನ್‌ನ ಬಸವ ಬಳಗದ ವತಿಯಿಂದ ಥೇಮ್ಸ್ ನದಿಯ ತಟದಲ್ಲಿ ನಿರ್ಮಿಸಿದ ಬಸವಣ್ಣನವರ ಪ್ರತಿಮೆ ಸ್ಥಳದ ಆವರಣದಲ್ಲಿ ನೀಡಿದ ಗೌರವ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ಬಸವಣ್ಣನವರ 12ನೇ ಶತಮಾನದ ಅನುಭವ ಮಂಟಪದ ಪರಿಕಲ್ಪನೆ ಇಂದು ಇಡೀ ಜಗತ್ತು ಒಪ್ಪಿ ಪಾಲಿಸುತ್ತಿದೆ. ಅಂದೇ ಸಮ ಸಮಾಜದ ಕನಸನ್ನು ಕಂಡ ಬಸವಣ್ಣನವರ ಚಿಂತನೆಗಳು ಇಂದು ಎಲ್ಲ ವರ್ಗದ ಹಿತಕ್ಕಾಗಿ ಅವರ ಸಂದೇಶಗಳು ಉಪಯುಕ್ತವಾಗಿವೆ ಎಂದರು.

ವಿಧಾನಸಭೆಯ ಸಭಾಧ್ಯಕ್ಷ ಯು.ಟಿ. ಖಾದರ್ ಮಾತನಾಡಿ, ಇಂಗ್ಲೆಂಡಿನ ಪ್ರಧಾನಿಯಾಗಿರುವ ರಿಷಿ ಸುನಕ್ ಅವರು ಕರ್ನಾಟಕದ ಅಳಿಯನಾಗಿದ್ದು ನಮಗೆಲ್ಲ ಹೆಮ್ಮೆಯ ಸಂಗತಿ. ಅವರನ್ನು ಅಭಿನಂದಿಸುತ್ತೇನೆ ಎಂದು ಹೇಳಿದರು.

ಲಂಡನ್‌ನ ಬಸವ ಬಳಗದ ವತಿಯಿಂದ ಕನ್ನಡಿಗರಾದ ಲಂಡನ್ನಿನ ಮಾಜಿ ಮೇಯರ್ ಹಾಗೂ ಬಸವ ಪ್ರತಿಮೆ ಪ್ರತಿಷ್ಠಾಪನೆಯ ರೂವಾರಿ ಡಾ.ನೀರಜ್ ಪಾಟೀಲ ಸ್ವಾಗತಿಸಿ ಮಾತನಾಡಿದರು.



'ಗಾಂಧೀಜಿ ಸ್ಮಾರಕ ಉದ್ಯಾನವನ'ಕ್ಕೆ ಭೂಮಿ ಪೂಜೆ

ವಿಶ್ವಕ್ಕೆ ಮಾದರಿಯಾದ ಉದ್ಯಾನವನ, ಭವನ ಕಾಲಮಿತಿಯಲ್ಲಿ ಪೂರ್ಣಗೊಳ್ಳಲಿ

ಮಡಿಕೇರಿ,ಅ.17– ಮಹಾತ್ಮ ಗಾಂಧೀಜಿಯ ಚಿತಾ ಭಸ್ಮವನ್ನು ಒಳಗೊಂಡಂತೆ ಸುಮಾರು 1.60 ಕೋಟಿ ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿರುವ 'ಗಾಂಧೀಜಿ ಸ್ಮಾರಕ ಉದ್ಯಾನವನ'ಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಬೋಸರಾಜು ಅವರು ನಗರದ ಗಾಂಧಿ ಮಂಟಪದಲ್ಲಿ ಶಂಕುಸ್ಥಾಪನೆ ನೆರವೇರಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ, ನಗರಸಭೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಸರ್ವೋದಯ ಸಮಿತಿಯ ಸಹಯೋಗದಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ, ಸ್ಮಾರಕ ಉದ್ಯಾನವನಕ್ಕೆ ಭೂಮಿ ಪೂಜೆ ಮತ್ತು ಶಂಕುಸ್ಥಾಪನೆಯನ್ನು ಉಸ್ತುವಾರಿ ಸಚಿವರು ನೆರವೇರಿಸಿದರು.

ಈ ಸಂದರ್ಭ ಮಾತನಾಡಿದ ಸಚಿವರು, ಇಡೀ ವಿಶ್ವಕ್ಕೆ ಮಾದರಿಯಾದ ಮಹಾತ್ಮ ಗಾಂಧೀಜಿಯವರ ಸ್ಮಾರಕ ಉದ್ಯಾನವನವನ್ನು ಒಳಗೊಂಡ ಭವನ ಕಾಲಮಿತಿಯಲ್ಲಿ ಪೂರ್ಣಗೊಳ್ಳಬೇಕು. ಆ ಮೂಲಕ ಗಾಂಧೀಜಿಯವರ ತತ್ತ್ವ ಸಿದ್ಧಾಂತಗಳು ಜನರಿಗೆ ನಿರಂತರವಾಗಿ ಪ್ರೇರಣೆಯನ್ನು ನೀಡುವಂತಾಗಬೇಕು. ಉದ್ದೇಶಿತ ಕಾರ್ಯಯೋಜನೆ ಜಿಲ್ಲಾಧಿಕಾರಿಗಳ ಜವಾಬ್ದಾರಿಯಲ್ಲಿ ನಡೆಯಲಿದೆಯಾದರು, ಜನಪ್ರತಿನಿಧಿಗಳೆಲ್ಲ ಒಟ್ಟಾಗಿ ಒಮ್ಮತದಿಂದ ಯೋಜನೆಯನ್ನು ಕಾರ್ಯಗತಗೊಳಿಸಲು ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ತಿಳಿಸಿದರು.

ಮಾಜಿ ಸಚಿವ ಎಂ.ಸಿ.ನಾಣಯ್ಯ ಮಾತನಾಡಿ, ದೆಹಲಿಯ 'ರಾಜ್ ಘಾಟ್' ಮಾದರಿಯಲ್ಲಿ ಮಹಾತ್ಮ ಗಾಂಧೀಜಿಯವರ ಸ್ಮಾರಕ ಉದ್ಯಾನವನ ನಿರ್ಮಾಣವಾಗಬೇಕಾಗಿದೆ. ಈ ಹಿಂದೆ ಗಾಂಧಿ ಸ್ಮಾರಕ ಉದ್ಯಾನವನ ನಿರ್ಮಾಣಕ್ಕೆ ಸುಮಾರು 1.60 ಕೋಟಿ ವೆಚ್ಚದ ಕಾರ್ಯಯೋಜನೆಯನ್ನು ರೂಪಿಸಲಾಗಿತ್ತು. ಇಂದು ಶಂಕುಸ್ಥಾಪನೆ ನೆರವೇರಿದ್ದು, ಕಾಮಗಾರಿ ಆರಂಭದ ಬಳಿಕ ಯಾವುದೇ ಕಾರಣಕ್ಕೂ ಅದು ಅರ್ಧಕ್ಕೆ ನಿಲ್ಲುವಂತಾಗಬಾರದು. ಈ ಹಿನ್ನೆಲೆಯಲ್ಲಿ ಅಗತ್ಯ ಅನುದಾನಕ್ಕಾಗಿ ತಕ್ಷಣವೇ ಮುಖ್ಯಮಂತ್ರಿಗಳನ್ನು ಭೇಟಿಯಾಗಿ, ತಿಂಗಳೊಳಗಾಗಿ ಅಗತ್ಯ ಹಣವನ್ನು ಜಿಲ್ಲಾಧಿಕಾರಿಗಳ ಖಾತೆಗೆ ಒದಗಿಸಬೇಕು. ಕೊಡವ ಹೆರಿಟೇಜ್ ಸೇರಿದಂತೆ ಜಿಲ್ಲೆಯಲ್ಲಿ ಹಲ ಕಾಮಗಾರಿಗಳು ಅರ್ಧಕ್ಕೆ ನಿಂತ ಉದಾಹರಣೆ ನೀಡಿದ ಅವರು, ಗಾಂಧಿ ಸ್ಮಾರಕ ನಿರ್ಮಾಣದಲ್ಲಿ ಇದು ನಡೆಯಕೂಡದು ಎಂದು ಸ್ಪಷ್ಟಪಡಿಸಿದರು.

ಎಂಎಲ್‌ಸಿ ಸುಜಾ ಕುಶಾಲಪ್ಪ ಮಾತನಾಡಿ, ಭಾರತದ ಸ್ವಾತಂತ್ರ್ಯಕ್ಕೆ ಅತ್ಯಪೂರ್ವವಾದ ಕೊಡುಗೆ ನೀಡಿದ ಮಹಾತ್ಮಾ ಗಾಂಧೀಜಿ ಅವರ ಸ್ಮಾರಕ ನಿರ್ಮಾಣಕ್ಕೆ ಅಗತ್ಯ ನೆರವನ್ನು ನಾನು ಒದಗಿಸುತ್ತೇನೆ. ಎಲ್ಲರ ಸಹಕಾರದೊಂದಿಗೆ ಯೋಜನೆ ಪೂರ್ಣವಾಗಬೇಕೆಂದು ಆಶಿಸಿದರು.

ಮಡಿಕೇರಿ ಕ್ಷೇತ್ರದ ಶಾಸಕ ಡಾ. ಮಂತರ್ ಗೌಡ ಮಾತನಾಡಿ, ಗಾಂಧೀಜಿ ಸ್ಮಾರಕ ನಿರ್ಮಾಣಕ್ಕೆ ತನ್ನ ಶಾಸಕರ ನಿಧಿಯಿಂದ ಅಗತ್ಯ ನೆರವನ್ನು ಒದಗಿಸುತ್ತೇನೆ. ಇದೇ ರೀತಿ ಶಾಸಕರು, ಸಂಸದರು, ಎಂಎಲ್‌ಸಿ, ನಗರಸಭೆ ತಮ್ಮ ನೆರವನ್ನು ಒದಗಿಸಿದಲ್ಲಿ ಸುಮಾರು 50 ಲಕ್ಷ ಸಂಗ್ರಹವಾಗುತ್ತದೆ. ಮುಖ್ಯಮಂತ್ರಿಗಳನ್ನು ಭೇಟಿಯಾಗಿ ಇನ್ನುಳಿದ ಮೊತ್ತಕ್ಕೆ ಅಗತ್ಯ ಸಹಕಾರವನ್ನು ಪಡೆಯುವ ವಿಶ್ವಾಸ ವ್ಯಕ್ತಪಡಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸರ್ವೋದಯ ಸಮಿತಿಯ ನಿಕಟಪೂರ್ವ ಅಧ್ಯಕ್ಷ ಟಿ.ಪಿ.ರಮೇಶ್, 1934ರ ಫೆ.21ರಿಂದ ಮೂರು ದಿನಗಳ ಕಾಲ ಕೊಡಗಿಗೆ ಭೇಟಿ ನೀಡಿದ್ದ ಮಹಾತ್ಮ ಗಾಂಧೀಜಿಯವರು, ಈಗ ಇರುವ ಗಾಂಧಿ ಮಂಟಪದ ಗುಡ್ಡದಲ್ಲಿ ಭಾಷಣ ಮಾಡಿದ್ದರು. ಹಿಂದೆ ಇದನ್ನು 'ಗಾಂಧಿ ಗುಡ್ಡ' ಎಂದು ಕರೆಯುತ್ತಿದ್ದರು. ಮಹಾತ್ಮರ ನಿಧನದ ಬಳಿಕ ಅವರ ಚಿತಾ ಭಸ್ಮವನ್ನು ಸ್ವಾತಂತ್ರ್ಯ ಹೋರಾಟಗಾರ ಕೊಳ್ಳಿಮಾಡ ದೇವಯ್ಯ ಅವರು ಕೊಡಗಿಗೆ ತೆಗೆದುಕೊಂಡು ಬಂದಿದ್ದು, ಅದರಲ್ಲಿ ಒಂದು ಭಾಗವನ್ನು ಕಾವೇರಿಯಲ್ಲಿ ವಿಸರ್ಜಿಸಿ, ಉಳಿದ ಚಿತಾಭಸ್ಮವನ್ನು ಕಳೆದ 65 ವರ್ಷಗಳಿಂದ ಜಿಲ್ಲಾ ಖಜಾನೆಯಲ್ಲಿರಿಸಿ ಸಂರಕ್ಷಿಸಿಕೊಂಡು ಬರಲಾಗುತ್ತಿದೆ ಎಂದರು.

ಇಷ್ಟು ವರ್ಷಗಳ ಕಾಲ ಸರ್ವೋದಯ ಸಮಿತಿ ಮಹಾತ್ಮರ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಬರುತ್ತಿದೆ. ಹಿಂದೆ ಜಿಲ್ಲಾಧಿಕಾರಿಗಳಾಗಿದ್ದ ಬಲದೇವಕೃಷ್ಣ ಅವರ ಅವಧಿಯಲ್ಲಿ ಗಾಂಧೀ ಸ್ಮಾರಕ ಉದ್ಯಾನವನ ನಿರ್ಮಾಣಕ್ಕೆ ಪ್ರಯತ್ನಿಸಲಾಗಿತ್ತು. ನಂತರದ ಅವಧಿಯಲ್ಲಿ ಅಂದಿನ ಮುಖ್ಯಮಂತ್ರಿ ಯಡಿಯೂರಪ್ಪ ಅವರು 50 ಲಕ್ಷ ರೂ.ಗಳನ್ನು ಇದಕ್ಕಾಗಿ ಒದಗಿಸಿದ್ದನ್ನು ಸ್ಮರಿಸಿದರಲ್ಲದೆ, ಈ ಮೊತ್ತ ಭವನ ನಿರ್ಮಾಣದ ಸಲುವಾಗಿ ನಿರ್ಮಿತಿ ಕೇಂದ್ರಕ್ಕೆ ನೀಡಲಾಗಿದೆ. ಭವನ ನಿರ್ಮಾಣಕ್ಕೆ ಅನುಕೂಲವಾಗುವಂತೆ ಕಂದಾಯ ಇಲಾಖೆ ವಶದಲ್ಲಿದ್ದ ಗಾಂಧಿ ಮಂಟಪ ಜಾಗವನ್ನು ಹಿಂದಿನ ಜಿಲ್ಲಾಧಿಕಾರಿ ಸತೀಶ್ ಅವರ ಅವಧಿಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವಶಕ್ಕೆ ನೀಡಲಾಗಿದೆ. ಉದ್ದೇಶಿತ ಸ್ಮಾರಕ ಆದಷ್ಟು ಶೀಘ್ರ ಕಾರ್ಯಗತಗೊಳ್ಳಲೆಂದು ಹಾರೈಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ವೆಂಕಟರಾಜ್, ಎಸ್.ಪಿ. ಕೆ.ರಾಮರಾಜನ್, ಸಿಇಒ ವರ್ಣಿತ್ ನೇಗಿ, ಸರ್ವೋದಯ ಸಮಿತಿ ಅಧ್ಯಕ್ಷ ಕುಶಾಲಪ್ಪ ಅಂಬೆಕಲ್, ನಗರಸಭಾ ಅಧ್ಯಕ್ಷೆ ಅನಿತಾ ಪೂವಯ್ಯ, ಸರ್ವೋದಯ ಸಮಿತಿಯ ಎಸ್.ಐ. ಮುನೀರ್ ಅಹಮ್ಮದ್, ಕನ್ನಡ –ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಚಿನ್ನಸ್ವಾಮಿ ಉಪಸ್ಥಿತರಿದ್ದರು.

ಕೊಡವ ಹೆರಿಟೇಜ್‌ಗೆ ಸಚಿವರ ಭೇಟಿ



ಮಡಿಕೇರಿ: ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು, ಶಾಸಕ ಡಾ.ಮಂತರ್‌ಗೌಡ, ವಿಧಾನಪರಿಷತ್ ಸದಸ್ಯ ಎಂ.ಪಿ.ಸುಜಾ ಕುಶಾಲಪ್ಪ, ಅವರು ಮಂಗಳವಾರ 'ಕೊಡವ ಹೆರಿಟೇಜ್' ಕೇಂದ್ರಕ್ಕೆ ಭೇಟಿ ನೀಡಿ ವೀಕ್ಷಿಸಿದರು.

ಈಗಾಗಲೇ 3 ಕೋಟಿ ರೂ. ವೆಚ್ಚದಲ್ಲಿ ಕಾಮಗಾರಿ ನಡೆದಿದ್ದು, ಉಳಿದ ಕಾಮಗಾರಿ ಆಗದಿರುವ ಬಗ್ಗೆ ತೀವ್ರ ಅತೃಪ್ತಿ ವ್ಯಕ್ತಪಡಿಸಿದರು. ಈಗ ಆಗಿರುವ ಕಾಮಗಾರಿಗಳು ಮತ್ತು ಆಗಬೇಕಿರುವ ಕಾಮಗಾರಿ ಬಗ್ಗೆ ಒಂದು ವಾರದಲ್ಲಿ ವರದಿ ನೀಡುವಂತೆ ಸಂಬಂಧಪಟ್ಟ ಎಂಜಿನಿಯರ್‌ಗೆ ಸೂಚಿಸಿದರು. ಕೊಡಗು ಜಿಲ್ಲೆಯಲ್ಲಿ ಹಲವು ಕಾಮಗಾರಿಗಳು ಅರ್ಧಕ್ಕೆ ನಿಂತಿದ್ದು, ಕೆಲವು ಯೋಜನೆಗಳಿಗೆ ಹಣ ಇದ್ದರೂ ಸಹ ಪೂರ್ಣಗೊಳಿಸುತ್ತಿಲ್ಲ ಎಂದು ಸಚಿವರು ಬೇಸರ ವ್ಯಕ್ತಪಡಿಸಿದರು.

ಮಡಿಕೇರಿಯಲ್ಲಿ ಕಾಂಗ್ರೆಸ್ ವಿರುದ್ಧ ಬಿಜೆಪಿ ಪ್ರತಿಭಟನೆ

ಐಟಿ ದಾಳಿಯಲ್ಲಿ ಪತ್ತೆಯಾದ ಹಣ ಯಾರದ್ದೆಂದು ತಿಳಿಸಲು ಆಗ್ರಹ



ಮಡಿಕೇರಿ,ಅ.17– ಗುತ್ತಿಗೆದಾರರ ಮೇಲೆ ನಡೆದ ಐಟಿ ದಾಳಿ ಸಂದರ್ಭ ಪತ್ತೆಯಾದ ಕೋಟಿಗಟ್ಟಲೆ ಹಣ ಯಾರಿಗೆ ಸೇರಿದ್ದು ಎನ್ನುವುದನ್ನು ರಾಜ್ಯ ಕಾಂಗ್ರೆಸ್ ಸರ್ಕಾರ ಬಹಿರಂಗಪಡಿಸಬೇಕೆಂದು ಒತ್ತಾಯಿಸಿ ಕೊಡಗು ಜಿಲ್ಲಾ ಬಿಜೆಪಿ ಮಡಿಕೇರಿಯಲ್ಲಿ ಪ್ರತಿಭಟನೆ ನಡೆಸಿತು.

ನಗರದ ಜನರಲ್ ತಿಮ್ಮಯ್ಯ ವೃತ್ತದಲ್ಲಿ ಕಾಂಗ್ರೆಸ್ ಸರ್ಕಾರ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರುಗಳ ವಿರುದ್ಧ ಘೋಷಣೆಗಳನ್ನು ಕೂಗಿದ ಪ್ರತಿಭಟನಾಕಾರರು ಹಣ ಸಂಗ್ರಹದ ಆರೋಪ ಮಾಡಿದರು. ವಿಧಾನಪರಿಷತ್ ಮಾಜಿ ಸದಸ್ಯ ಎಂ.ಪಿ.ಸುನಿಲ್ ಸುಬ್ರಮಣಿ ಮಾತನಾಡಿ, ಐಟಿ ದಾಳಿಯಾದಾಗ ಸಿಕ್ಕ ಹಣದ ಬಗ್ಗೆ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗಳು ಜನರಿಗೆ ಸತ್ಯವನ್ನು ಬಹಿರಂಗಪಡಿಸಬೇಕು ಎಂದು ಒತ್ತಾಯಿಸಿದರು.

ರಾಜ್ಯದಲ್ಲಿ ಬಿಜೆಪಿ ಸರ್ಕಾರವಿದ್ದಾಗ ಶೇ.40 ಕಮಿಷನ್ ಪಡೆಯುತ್ತಿದ್ದಾರೆ ಎಂದು ಹೋರಾಟ ಮಾಡುತ್ತಿದ್ದ ಕಾಂಗ್ರೆಸ್, ಈಗ ಎಷ್ಟು ಹಣ ವಸೂಲಿಯಲ್ಲಿ ತೊಡಗಿದೆ ಎಂದು ಪ್ರಶ್ನಿಸಿದರು. ಸರ್ಕಾರ ಅಧಿಕಾರಕ್ಕೆ ಬಂದು ಆರು ತಿಂಗಳು ಕಳೆದಿದೆ, ಆದರೆ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ. ಕೊಡಗಿನ ರಸ್ತೆಗಳ ಅಭಿವೃದ್ಧಿಯ ಬಗ್ಗೆ ಮೊದಲು ಕಾಳಜಿ ತೋರಲಿ ಎಂದು ಸುನಿಲ್ ಸುಬ್ರಮಣಿ ಒತ್ತಾಯಿಸಿದರು.


ನಗರಸಭಾ ಉಪಾಧ್ಯಕ್ಷೆ ಸವಿತಾ ರಾಕೇಶ್, ಸ್ಥಾಯಿ ಸಮಿತಿ ಅಧ್ಯಕ್ಷ ಎಸ್.ಸಿ.ಸತೀಶ್, ಸದಸ್ಯರಾದ ಕೆ.ಎಸ್.ರಮೇಶ್, ಚಂದ್ರು, ಬಿಜೆಪಿ ಜಿಲ್ಲಾ ವಕ್ತಾರ ಮಹೇಶ್ ಜೈನಿ, ನಗರಾಧ್ಯಕ್ಷ ಮನು ಮಂಜುನಾಥ್, ಪ್ರಮುಖರಾದ ನಾಪಂಡ ರವಿ ಕಾಳಪ್ಪ, ಬಿ.ಕೆ.ಜಗದೀಶ್, ಕನ್ನಿಕೆ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ದಸರಾ 'ಬಹುಭಾಷಾ ಕವಿಗೋಷ್ಠಿ'

ಮಡಿಕೇರಿ,ಅ.17– ಐತಿಹಾಸಿಕ ಹಿನ್ನೆಲೆಯ ಮಡಿಕೇರಿ ದಸರಾ ಉತ್ಸವಕ್ಕೆ ಸಾಹಿತ್ಯಿಕ ಸ್ಪರ್ಶವನ್ನು ನೀಡುವ 'ಬಹುಭಾಷಾ ಕವಿಗೋಷ್ಠಿ' ಅ.18ರಂದು ನಗರದ ಗಾಂಧಿ ಮೈದಾನದ ಕಲಾ ಸಂಭ್ರಮ ವೇದಿಕೆಯಲ್ಲಿ ನಡೆಯಲಿದ್ದು, ನಾಡಿನ ಉದಯೋನ್ಮುಖ ಕವಿ ಕವಯಿತ್ರಿಯರ ಕವನ ವಾಚನ ಸಾಹಿತ್ಯಾಭಿಮಾನಿಗಳನ್ನು ಸೆಳೆಯಲಿದೆ.

ಬಹುಭಾಷಾ ಕವಿಗೋಷ್ಠಿ ಸಮಿತಿಯ ಅಧ್ಯಕ್ಷ ಉಜ್ವಲ್ ರಂಜಿತ್ ಬಹುಭಾಷಾ ಕವಿಗೋಷ್ಠಿಯ ಕುರಿತು ಮಾಹಿತಿ ನೀಡಿ, ಅಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ನಡೆಯುವ ಕವಿಗೋಷ್ಠಿಯಲ್ಲಿ ಆಯ್ದ 60 ಕವನಗಳ ವಾಚನ ನಡೆಯಲಿದೆ ಎಂದರು.

ಅ.23, ಕೊಡಗು ಖಾಸಗಿ ಬಸ್ ಕಾರ್ಮಿಕರಿಂದ ಆಯುಧ ಪೂಜೆ, ರಸಮಂಜರಿ ಕಾರ್ಯಕ್ರಮ



ವಿರಾಜಪೇಟೆ, ಅ.17– ಕೊಡಗು ಖಾಸಗಿ ಬಸ್ ಕಾರ್ಮಿಕರ ಸಂಘದ 16ನೇ ವರ್ಷದ ಅದ್ದೂರಿ ಆಯುಧ ಪೂಜೆ ಹಾಗೂ ರಸಮಂಜರಿ ಕಾರ್ಯಕ್ರಮ ಅ.23 ರಂದು ಖಾಸಗಿ ಬಸ್ ನಿಲ್ದಾಣದಲ್ಲಿ ನಡೆಯಲಿದೆ ಎಂದು ಕಾರ್ಮಿಕರ ಸಂಘದ ಅಧ್ಯಕ್ಷ ಕುಂಬೆಯಂಡ ಸುರೇಶ್ ದೇವಯ್ಯ ತಿಳಿಸಿದರು.

ಪಟ್ಟಣದ ಪ್ರೆಸ್ ಕ್ಲಬ್‌ನಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು ಅ.23 ರಂದು ಬೆಳಗ್ಗೆ 9 ಗಂಟೆಗೆ ಸಂಘದ ಕಚೇರಿಯಲ್ಲಿ ಆಯುಧ ಪೂಜಾ ಕಾರ್ಯಕ್ರಮದ ಬಳಿಕ 10.30ಕ್ಕೆ ಸ್ಥಳೀಯ ಕಲಾ ಪ್ರತಿಭೆಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. ನಂತರ ಕೊಡಗು ಬಸ್ ಕಾರ್ಮಿಕರ ಸಂಘದ ಗೌರವ ಅಧ್ಯಕ್ಷ ಬಿ.ಆರ್.ಗಣೇಶ್ ಅವರ ಅಧ್ಯಕ್ಷತೆಯಲ್ಲಿ ಸಭಾ ಕಾರ್ಯಕ್ರಮವನ್ನು ಏಕಲವ್ಯ ವಸತಿ ಶಾಲಾ ಕಾಲೇಜ್ ಪ್ರಾಂಶುಪಾಲರಾದ ಕಾವೇರಪ್ಪ ಉದ್ಘಾಟಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಪೊಲೀಸ್ ವೃತ್ತ ನಿರೀಕ್ಷಕ ಶಿವರುದ್ರ, ಕಾಫಿ ಬೆಳೆಗಾರರಾದ ಕಂಜಿತಂಡ ವಿಕ್ರಾಂತ್, ನೆಲ್ಲಮಕ್ಕಡ ಶಿವಪ್ಪ ಕೊಡಗು ಸಹಕಾರ ಮಾರಾಟ ಮಹಾಮಂಡಲದ ನಿರ್ದೇಶಕ ಚೇನಂಡ ಗಿರೀಶ್ ಭಾಗವಹಿಸಲಿದ್ದಾರೆ. ಮಧ್ಯಾಹ್ನ ಸಾರ್ವಜನಿಕರಿಗೆ ಅನ್ನ ಸಂತರ್ಪಣೆ ಕಾರ್ಯಕ್ರಮ ನಂತರ 3 ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮದ ವಿಜೇತರಿಗೆ ಬಹುಮಾನ ವಿತರಣೆ ಮಾಡಲಾಗುವುದು. ಸಂಜೆ 5 ಗಂಟೆಗೆ ಕೊಡಗು ಮೈಸೂರಿನ ಬೈಕ್ ಸಾಹಸಿ ಕಲಾವಿದರಿಂದ ಖಾಸಗಿ ಬಸ್ ನಿಲ್ದಾಣದಲ್ಲಿ ಸಾಹಸ ಪ್ರದರ್ಶನ ನಡೆಯಲಿದೆ ಎಂದರು.

ಸಂಘದ ಕಾರ್ಯದರ್ಶಿ ಜೂಡಿವಾಜ್ ಮಾತನಾಡಿದ ನಂತರ ಸಮಾರೋಪ ಸಮಾರಂಭ ಸಂಜೆ 6 ಗಂಟೆಗೆ ಸಂಘದ ಅಧ್ಯಕ್ಷ ಕುಬೆಯಂಡ ಸುರೇಶ್ ದೇವಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆಯಲಿದ್ದು, ಮುಖ್ಯ ಅತಿಥಿಗಳಾಗಿ ಸ್ಥಳೀಯ ಶಾಸಕ ಎ.ಎಸ್.ಪೊನ್ನಣ್ಣ ವಿರಾಜಪೇಟೆ–ಕೊಡಗು ಜಿಲ್ಲಾ ಸಹಕಾರ ಮಾರಾಟ ಮಹಾಮಂಡಲದ ಅಧ್ಯಕ್ಷ ವಾಟೇರಿರ ಬೋಪಣ್ಣ, ಅಗ್ಲೋನೇಮ ರೆಸಾರ್ಟ್ ನಿರ್ದೇಶಕ ವಿಷ್ಣು ಪರಮಶಿವ, ಕಾಫಿ ಬೆಳೆಗಾರ ಕೋಡಿರ ವಿವೇಕ್ ಮುಂತಾದವರು ಭಾಗವಹಿಸಲಿದ್ದಾರೆ.

ನಂತರ ರಾತ್ರಿ 8 ಗಂಟೆಗೆ ರಸಮಂಜರಿ ಕಾರ್ಯಕ್ರಮ ನಡೆಯಲಿದೆ. ಸ್ಥಳೀಯ ಪ್ರತಿಭೆಗಳಿಗೆ ಅವಕಾಶ ನೀಡುವ ನಿಟ್ಟಿನಲ್ಲಿ ಕಾಲೇಜು ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶವಿದ್ದು, ಆಸಕ್ತರು ಅ.18ರೊಳಗೆ ಹೆಸರು ನೋಂದಾಯಿಸಿಕೊಳ್ಳಬಹುದಾಗಿದೆ. ಹೆಚ್ಚಿನ ವಿವರಗಳಿಗೆ 8762279397, 9481882708 ಅನ್ನು ಸಂಪರ್ಕಿಸುವಂತೆ ಕೋರಿದ್ದಾರೆ. ಗೋಷ್ಠಿಯಲ್ಲಿ ಖಜಾಂಚಿ ವಕ್ಕಲಿಗರ ದಿನೇಶ್, ನಿರ್ದೇಶಕ ವಿನಂತ್ ಉಪಸ್ಥಿತರಿದ್ದರು.







ಚಾಮರಾಜನಗರದಲ್ಲಿ ದಸರಾ ಮಹೋತ್ಸವಕ್ಕೆ ಚಾಲನೆ

ತಡವಾಗಿ ಬಂದ ಸಚಿವರು, ಶಾಸಕರು, ಅಧಿಕಾರಿಗಳಿಂದಲೇ ಉದ್ಘಾಟನೆ

ಚಾಮರಾಜನಗರ, ಅ.17– ಮೈಸೂರು ದಸರಾ ಮಹೋತ್ಸವದ ಭಾಗವಾಗಿ ಗಡಿ ಜಿಲ್ಲೆ ಚಾಮರಾಜನಗರದಲ್ಲಿ ಮಂಗಳವಾರದಿಂದ ಹಮ್ಮಿಕೊಂಡಿರುವ 4 ದಿನಗಳ ಜಿಲ್ಲಾ ದಸರಾ ಮಹೋತ್ಸವಕ್ಕೆ ಚಾಮರಾಜೇಶ್ವರಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿ, ವಿಧ್ಯುಕ್ತವಾಗಿ ಚಾಲನೆ ನೀಡಲಾಯಿತು.

ಶಾಸಕ ಸಿ.ಪುಟ್ಟರಂಗಶೆಟ್ಟಿ, ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್, ಜಿಲ್ಲಾ ಪಂಚಾಯಿತಿ ಸಿಇಓ ಆನಂದ್ ಪ್ರಕಾಶ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ತಹಸೀಲ್ದಾರ್ ಎ.ಈ. ಬಸವರಾಜು ಸೇರಿದಂತೆ ಇತರ ಅಧಿಕಾರಿಗಳು ಚಾಮರಾಜೇಶ್ವರ ಸ್ವಾಮಿಯ ಉತ್ಸವ ಮೂರ್ತಿಯ ಎದುರು ದೀಪ ಬೆಳಗುವುದರ ಮೂಲಕ ಸಾಂಪ್ರದಾಯಿಕವಾಗಿ ಉತ್ಸವಕ್ಕೆ ಚಾಲನೆ ನೀಡಿದರು.

ಒಂದು ಗಂಟೆ ವಿಳಂಬ: ಚಾಮರಾಜನಗರ ಜಿಲ್ಲಾ ದಸರಾ ಮಹೋತ್ಸವಕ್ಕೆ ಬೆಳಗ್ಗೆ 10.15ರ ಶುಭ ಲಗ್ನದಲ್ಲಿ ಚಾಲನೆ ನೀಡಲು ಸಮಯ ನಿಗದಿಗೊಳಿಸಲಾಗಿತ್ತು. ಇದಕ್ಕೆ ಎಲ್ಲಾ ರೀತಿಯ ತಯಾರಿಯನ್ನು ಮಾಡಲಾಗಿತ್ತು ಆದರೆ, ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಅವರು ಬರುವುದು ತಡವಾಗುತ್ತದೆ ಎಂದು ಒಂದು ಗಂಟೆ ತಡವಾಗಿ ಚಾಲನೆ ನೀಡಲು ನಿರ್ಧರಿಸಲಾಯಿತು. ಆದರೆ, ಆಗಲೂ ಸಚಿವರು ಬರಲಿಲ್ಲ ಅಂತಿಮವಾಗಿ ಸಚಿವರ ಅನುಪಸ್ಥಿತಿಯಲ್ಲಿಯೇ ಶಾಸಕ ಸಿ.ಪುಟ್ಟರಂಗಶೆಟ್ಟಿ ಹಾಗೂ ಅಧಿಕಾರಿಗಳು ಬೆಳಗ್ಗೆ 11.30ಕ್ಕೆ ಪೂಜೆ ಸಲ್ಲಿಸಿ ದಸರಾಗೆ ವಿಧ್ಯುಕ್ತ ಚಾಲನೆ ನೀಡಿದರು.

ನಂತರ ಮಧ್ಯಾಹ್ನ ಸುಮಾರು 12.05ರ ಸುಮಾರಿಗೆ ನಗರಕ್ಕೆ ಆಗಮಿಸಿದ ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಅವರು, ಚಾಮರಾಜೇಶ್ವರಸ್ವಾಮಿ ದೇವಾಲಯಕ್ಕೆ ತೆರಳಿ ಪೂಜೆ ಸಲ್ಲಿಸಿದರು. ನಂತರ ನಂದಿ ಧ್ವಜಕ್ಕೆ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡಿ ಕಾರ್ಯಕ್ರಮ ಉದ್ಘಾಟಿಸಿದರು. ಬಳಿಕ ದೇವಸ್ಥಾನದ ಮುಂಭಾಗ ನಿರ್ಮಾಣ ಮಾಡಲಾಗಿರುವ ಪ್ರಧಾನ ವೇದಿಕೆಯಲ್ಲಿ ನಗಾರಿಯನ್ನು ಬಾರಿಸುವ ಮೂಲಕ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಚಿವರು, ಶಾಸಕರು ಹಾಗೂ ಅಧಿಕಾರಿಗಳು ಚಾಲನೆ ನೀಡಿದರು.

ಭುವನೇಶ್ವರಿ ತಾಯಿಗೆ ಪುಷ್ಪ ನಮನ: ಜಿಲ್ಲಾ ದಸರಾ ಮಹೋತ್ಸವಕ್ಕೆ ಉದ್ಘಾಟನೆ ಮಾಡಿದ ನಂತರ ನಗರದ ಶ್ರೀಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಮುಂಭಾಗದ ಉದ್ಯಾನವನದಲ್ಲಿರುವ ಭುವನೇಶ್ವರಿ ತಾಯಿ ಪ್ರತಿಮೆಗೆ ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್, ಶಾಸಕರಾದ ಸಿ. ಪುಟ್ಟರಂಗಶೆಟ್ಟಿ, ಜಿಲ್ಲಾಧಿಕಾರಿ ಸಿ.ಟಿ. ಶಿಲ್ಪಾನಾಗ್ ಸೇರಿದಂತೆ ಜಿಲ್ಲಾಮಟ್ಟದ ಅಧಿಕಾರಿಗಳು, ಜನಪ್ರತಿನಿಧಿಗಳು ಪುಷ್ಪ ನಮನ ಸಲ್ಲಿಸಿದರು.

ಬಳಿಕ, ಉದ್ಯಾನವನದಲ್ಲಿ ದಸರಾ ಅಂಗವಾಗಿ ಆಯೋಜಿಸಿದ್ದ ಚಿತ್ರಕಲೆ ಸ್ಪರ್ಧೆಗೆ ಸಚಿವರು ಚಾಲನೆ ನೀಡಿದರು.

ಗಮನ ಸೆಳೆದ ಕಲಾತಂಡಗಳ ಮೆರವಣಿಗೆ

ಜಿಲ್ಲಾ ದಸರಾ ಮಹೋತ್ಸವದ ಅಂಗವಾಗಿ ನಡೆದ ಜಾನಪದ ಕಲಾತಂಡಗಳ ಮೆರವಣಿಗೆ ಎಲ್ಲರ ಗಮನ ಸೆಳೆಯಿತು.

ನಗರದ ಜಿಲ್ಲಾಧಿಕಾರಿ ಕಚೇರಿಯ ಮುಂಭಾಗ ನಾಡದೇವತೆ ತಾಯಿ ಚಾಮುಂಡೇಶ್ವರಿ ಭಾವಚಿತ್ರದ ಬೆಳ್ಳಿರಥದ ಮೆರವಣಿಗೆಗೆ ಸಚಿವ ಕೆ. ವೆಂಕಟೇಶ್ ಅವರು ಪುಷ್ಪನಮನ ಸಲ್ಲಿಸುವ ಮೂಲಕ ಚಾಲನೆ ನೀಡಿದರು. ಈ ವೇಳೆ ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಎಚ್.ಎಂ. ಗಣೇಶಪ್ರಸಾದ್, ಮರಿತಿಬ್ಬೇಗೌಡ, ಜಿಲ್ಲಾಧಿಕಾರಿ ಸಿ.ಟಿ. ಶಿಲ್ಪಾನಾಗ್ ಇದ್ದರು.

ಮೆರವಣಿಗೆಯು ಜಿಲ್ಲಾಡಳಿತ ಭವನದಿಂದ ಆರಂಭವಾಗಿ ನಗರದ ಪ್ರಮುಖ ಬೀದಿಗಳಲ್ಲಿ ಸಾಗಿತು. ಮೆರವಣಿಗೆಯಲ್ಲಿ ಗೊರವರ ಕುಣಿತ, ವೀರಗಾಸೆ ಕುಣಿತ, ಗಾರುಡಿಗೊಂಬೆ, ಡೊಳ್ಳು ಕುಣಿತ, ಕಂಸಾಳೆ, ಬ್ಯಾಂಡ್‌ಸೆಟ್ ಸೇರಿದಂತೆ 30ಕ್ಕೂ ಹೆಚ್ಚು ಕಲಾತಂಡಗಳು ಪಾಲ್ಗೊಂಡಿದ್ದವು. ಅರಣ್ಯ ಇಲಾಖೆಯಿಂದ ತಯಾರಿಸಿದ್ದ ಆನೆ ಆಕೃತಿ ನೋಡುಗರ ಗಮನ ಸೆಳೆಯಿತು.

ರೈಲಿಗೆ ಸಿಲುಕಿ ಕೂಲಿ ಕಾರ್ಮಿಕ ಸಾವು

ಚಾಮರಾಜನಗರ, ಅ.17– ರೈಲಿಗೆ ಸಿಲುಕಿ ಕೂಲಿ ಕಾರ್ಮಿಕನೊಬ್ಬ ಸಾವನ್ನಪ್ಪಿರುವ ಘಟನೆ ತಾಲೂಕಿನ ಬೇಡರಪುರ ಗ್ರಾಮದ ಬಳಿ ಮಂಗಳವಾರ ಸಂಭವಿಸಿದೆ.



ನಗರದ ಚೆನ್ನಿಪುರದ ಮೋಳೆ ಗ್ರಾಮದ ನಿವಾಸಿ ಕಿರಣ್(23) ಸಾವನ್ನಪ್ಪಿದ್ದ ಯುವ ಕಾರ್ಮಿಕ. ಈತ ಗಾರೆ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದ. ಕೆಲವು ದಿನಗಳ ಹಿಂದೆ ಈತನ ಕಾಲಿಗೆ ಪೆಟ್ಟಾಗಿದ್ದರಿಂದ ವಿಶ್ರಾಂತಿ ಪಡೆಯುತ್ತಿದ್ದ ಎಂದು ತಿಳಿದು ಬಂದಿದೆ. ಸೋಮವಾರ ಮನೆಯಿಂದ ಹೊರಗೆ ಹೋಗಿದ್ದ ಈತ ತಡರಾತ್ರಿಯವರೆಗೂ ಹಿಂತಿರುಗಿರಲಿಲ್ಲ. ಮನೆಯವರು ಹುಡುಕಾಟ ನಡೆಸಿದ್ದರು. ಆದರೂ ಈತನ ಪತ್ತೆಯಾಗಿರಲಿಲ್ಲ. ಆದರೆ, ಮಂಗಳವಾರ ಬೆಳಗ್ಗೆ ತಾಲೂಕಿನ ಬೇಡರಪುರ ಗ್ರಾಮದ ಬಳಿ ಹಾದುಹೋಗಿರುವ ರೈಲ್ವೆ ಹಳಿಯ ಸಮೀಪ ಈತನ ಮೃತ ದೇಹಪತ್ತೆಯಾಗಿದೆ.

ಅಲ್ಲದೇ ರೈಲ್ವೆ ಹಳಿಯ ಪಕ್ಕದಲ್ಲಿಯೇ ಈತನ ಬೈಕ್ ಕೂಡ ಪತ್ತೆಯಾಗಿದೆ. ತಾಯಿ ಹಾಗೂ ಪತ್ನಿ ಜೊತೆ ಈತ ವಾಸವಾಗಿದ್ದ. 4 ತಿಂಗಳ ಮಗು ಸಹ ಇದೆ. ಈತನ ಸಾವಿಗೆ ನಿಖರವಾದ ಕಾರಣ ತಿಳಿದು ಬಂದಿಲ್ಲ. ನಂಜನಗೂಡಿನ ರೈಲ್ವೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ, ಮೃತ ದೇಹವನ್ನು ನಗರದ ಸಿಮ್ಸ್‌ಗೆ ರವಾನಿಸಿ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಲಾಯಿತು. ಸಂಜೆ ಅಂತ್ಯಕ್ರಿಯೆಯನ್ನು ನಡೆಸಲಾಯಿತು ಎಂದು ಕುಟುಂಬ ಮೂಲದಿಂದ ತಿಳಿದು ಬಂದಿದೆ.

ಪ್ರೇಕ್ಷಕರಿಲ್ಲದೆ ಭಣಗುಟ್ಟಿದ ಸಾಂಸ್ಕೃತಿಕ ಕಾರ್ಯಕ್ರಮಗಳು

ಚಾಮರಾಜನಗರ, ಅ.17– ನಗರದಲ್ಲಿ ಮಂಗಳವಾರದಿಂದ ಆರಂಭವಾಗಿರುವ ದಸರಾ ಮಹೋತ್ಸವದಲ್ಲಿ ಜಾನಪದ ಕಲೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ವೈಭವದಿಂದ ನಡೆಯಿತಾದರೂ ಪ್ರೇಕ್ಷಕರಿಲ್ಲದೆ ಭಣಗುಡುತ್ತಿತ್ತು.

ನಗರದ ಜೆ.ಎಚ್. ಪಟೇಲ್ ಸಭಾಂಗಣ ಹಾಗೂ ಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಆವರಣದಲ್ಲಿ ನಿರ್ಮಾಣ ಮಾಡಲಾಗಿದ್ದ ಮುಖ್ಯ ವೇದಿಕೆಯಲ್ಲಿ ಜಿಲ್ಲೆಯ ಸ್ಥಳೀಯ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಸಡಗರ, ಸಂಭ್ರಮದಿಂದ ನಡೆಯಿತು.

ಮೊದಲ ದಿನ 50ಕ್ಕೂ ಹೆಚ್ಚು ಕಲಾತಂಡಗಳು ತಮ್ಮ ಕಲೆ ಪ್ರದರ್ಶನ ಮಾಡುವ ಮೂಲಕ ಬೆರಳೆಣಿಕೆಯಷ್ಟು ಪ್ರೇಕ್ಷಕರ ಮನ ಸೆಳೆಯುವಲ್ಲಿ ಯಶಸ್ವಿಯಾದರು. ಚಾಮರಾಜೇಶ್ವರ ಸ್ವಾಮಿ ದೇವಸ್ಥಾನದ ಮುಂಭಾಗದ ವೇದಿಕೆಯಲ್ಲಿ ಮಹದೇವಸ್ವಾಮಿ ಮತ್ತು ತಂಡದಿಂದ ಸ್ಯಾಕ್ಸೋಫೋನ್ ವಾದನ, ವಿನ್ಮಯಿ ಕೆ.ಎಚ್. ಕೊಂಗರಹಳ್ಳಿ ತಂಡದಿಂದ ಭರತ ನಾಟ್ಯ,



ಶ್ರೀಶಾರದ ನೃತ್ಯ ಕಲಾ ತಂಡದಿಂದ ನೃತ್ಯ ರೂಪಕ, ಚಿನ್ನಮ್ಮ ಮತ್ತು ತಂಡದಿಂದ ಸೋಬಾನೆ ಪದ, ಚಂದ್ರಶೇಖರ್, ಮಂಜುನಾಥ್, ಪರಶಿವಮೂರ್ತಿ ತಂಡದಿಂದ ಭಕ್ತಿಗೀತೆ ಗಾಯನ, ಬಸವರಾಜು, ಬಾಗಳಿ ಮಹದೇವಸ್ವಾಮಿ ತಂಡದಿಂದ ಭಾವಯಾನ ಸುಗಮ ಸಂಗೀತ ಕಾರ್ಯಕ್ರಮ ನಡೆಯಿತು.

ಸಂಜೆ 4ಗಂಟೆಯ ಸುಮಾರಿನಲ್ಲಿ ಎಸ್. ಶಾಂತರಾಜು, ಕಲೆ ನಟರಾಜು, ನಾಗರಾಜು, ಜೈಗುರು, ಎಂ.ಆರ್. ಲೋಕೇಶ್ ತಂಡದಿಂದ ನಡೆದ ಜನಪದ ಗಾಯನ ಮಧುರವಾಗಿತ್ತು. ಬಳಿಕ ಜೈ ಭುವನೇಶ್ವರಿ ಕನ್ನಡ ಯುವ ವೇದಿಕೆ ತಂಡದಿಂದ ನಡೆದ ಶ್ರೀಚಾಮುಂಡೇಶ್ವರಿ ನೃತ್ಯ ರೂಪಕ ಪ್ರೇಕ್ಷಕರನ್ನು ಆಕರ್ಷಿಸಿತ್ತು. ರಂಗಲಕ್ಷಣಂ ಫೌಂಡೇಶನ್ ನಿಂದ ನಡೆದ ನೃತ್ಯ ರೂಪಕ ಚೆನ್ನಾಗಿ ಮೂಡಿ ಬಂತು. ಸಂಜೆ 8 ಗಂಟೆಯ ಸುಮಾರಿನಲ್ಲಿ ಜಿಲ್ಲೆಯ ವಿವಿಧ ಕಾಲೇಜಿನ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಪ್ರೇಕ್ಷಕರಿಲ್ಲದ ಖಾಲಿ ಸಭಾಂಗಣ: ನಗರದ ಜೆ.ಎಚ್. ಪಟೇಲ್ ಸಭಾಂಗಣದಲ್ಲಿಯೂ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಆದರೆ, ಇಲ್ಲಿನ ಕಾರ್ಯಕ್ರಮದಲ್ಲಿ ಪ್ರೇಕ್ಷಕರಿಲ್ಲದೇ ಇಡೀ ಸಭಾಂಗಣ ಭಣಗುಡುತ್ತಿತ್ತು.

ಬೆಳಗ್ಗೆ 10ಗಂಟೆಗೆ ಆರಂಭವಾದ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಪ್ರೇಕ್ಷಕರ ಕೊರತೆ ಕಾಡಿತ್ತು. ಇಡೀ ಸಭಾಂಗಣದಲ್ಲಿ ಬೆರಳಣಿಕೆಯಷ್ಟು ಮಂದಿ ಮಾತ್ರ ಇದ್ದರು. ಸುಮಾರು 11 ಕಲಾ ತಂಡಗಳು ಸೋಬಲಿಗರ ಗೀತೆ, ತಂಬೂರಿ ಪದ, ಭಜನೆ, ಶಿವ ಭಜನೆ, ಹರಿಕಥೆ, ಭಕ್ತಿಗೀತೆ, ಸುಗಮ ಸಂಗೀತ, ಸೋಭಾನೆ ಪದ, ಜನಪದ ಗೀತೆ, ನೃತ್ಯ ಕಾರ್ಯಕ್ರಮಗಳು ನಡೆಯಿತು.

ರೈತರ ಸಭೆಯಿಂದ ವಿಳಂಬ: ಮಧ್ಯಾಹ್ನ 2ಗಂಟೆಯ ಸುಮಾರಿನಲ್ಲಿ ರೈತರ ಸಭೆಯನ್ನು ಜೆ.ಎಚ್. ಪಟೇಲ್ ಸಭಾಂಗಣದಲ್ಲಿ ದಿಢೀರ್ ಆಯೋಜನೆ ಮಾಡಲಾಗಿದ್ದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಮಧ್ಯಾಹ್ನದ ನಂತರ ವಿಳಂಬವಾಗಿ ಆರಂಭವಾಯಿತು.

ಬರದ ಹಿನ್ನೆಲೆಯಲ್ಲಿ ವಿದ್ಯುತ್ ಸಮಸ್ಯೆ, ಸಹಕರಿಸಲು ಸಚಿವರ ಮನವಿ

ಚಾಮರಾಜನಗರ, ಅ.17– ರಾಜ್ಯದಲ್ಲಿ ಬರ ಪರಿಸ್ಥಿತಿಯಿದ್ದು, ವಿದ್ಯುತ್‌ನ ಸಮಸ್ಯೆ ತಲೆದೋರಿದೆ. ಹೀಗಾಗಿ ರೈತರು ಇದನ್ನು ಅರ್ಥೈಸಿಕೊಂಡು ಸರ್ಕಾರಕ್ಕೆ ಸಹಕಾರ ನೀಡಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಮನವಿ ಮಾಡಿದರು.

ನಗರದ ಜೆ.ಎಚ್. ಪಟೇಲ್ ಸಭಾಂಗಣದಲ್ಲಿ ಮಂಗಳವಾರ ನಡೆದ ರೈತ ಮುಖಂಡರ ಸಭೆಯಲ್ಲಿ ಮಾತನಾಡಿ, ರಾಜ್ಯದಲ್ಲಿ ಬರಗಾಲ ಆವರಿಸಿದ್ದು, ಎಲ್ಲೆಡೆ ವಿದ್ಯುತ್ ಸಮಸ್ಯೆ ಉಂಟಾಗಿದೆ. ಇದು ಕೇವಲ ಚಾಮರಾಜನಗರದಲ್ಲಿ ಮಾತ್ರ ಉದ್ಭವಿಸಿಲ್ಲ. ಹೀಗಾಗಿ, ರೈತರು ಸದ್ಯದ ಪರಿಸ್ಥಿತಿಯನ್ನು ಅರ್ಥೈಸಿಕೊಂಡು ಸಹಕರಿಸಬೇಕು ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರೈತರ ಪರವಾಗಿದ್ದು, ಈ ನಿಟ್ಟಿನಲ್ಲಿ ಸೆಸ್ಕಾಂ ಇಲಾಖೆ ಅಧಿಕಾರಿಗಳೊಂದಿಗೆ ಹಲವು ಸಭೆಗಳನ್ನು ನಡೆಸಿದ್ದಾರೆ. ರಾಜ್ಯದಲ್ಲಿ ಲಭ್ಯವಿರುವ ವಿದ್ಯುತ್ ಅನ್ನು ಪರಿಗಣಿಸಿ, ಕನಿಷ್ಠ 5 ಗಂಟೆಗಳ ಕಾಲವಾದರೂ ರೈತರಿಗೆ ನಿರಂತರವಾಗಿ ವಿದ್ಯುತ್ ನೀಡುವಂತೆ ಸೂಚನೆ ನೀಡಿದ್ದಾರೆ ಎಂದರು.

ರಾಜ್ಯದಲ್ಲಿ ವಿದ್ಯುತ್‌ನ ಅಭಾವ ಉಂಟಾಗಿದ್ದು, ವಿದ್ಯುತ್ ಅನ್ನು ನೆರೆ ರಾಜ್ಯಗಳಾದ ಪಂಜಾಬ್, ಉತ್ತರ ಪ್ರದೇಶದಲ್ಲಿ ಖರೀದಿಸಲು ಎಲ್ಲಾ ಪ್ರಕ್ರಿಯೆಗಳನ್ನು ಸರ್ಕಾರ ಮಾಡುತ್ತಿದ್ದು, ವಿದ್ಯುತ್ ಖರೀದಿಯಾದ ಕೂಡಲೇ ರೈತರ ಬೇಡಿಕೆಯಂತೆ 7 ಗಂಟೆಗಳ ಕಾಲ ನಿರಂತರ ವಿದ್ಯುತ್ ನೀಡಲಾಗುವುದು. ಆ ನಂತರ ಕಾಂಗ್ರೆಸ್‌ನ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದಂತೆ 10 ಗಂಟೆಗಳ ಕಾಲ ವಿದ್ಯುತ್ ನೀಡಲಾಗುವುದು ಎಂದು ಭರವಸೆ ನೀಡಿದರು.

ಒಂದನೇ ಪುಟದಿಂದ

ರಾಜ್ಯದ ಆಡಳಿತದಲ್ಲಿ ಕನ್ನಡಕ್ಕೆ ಆದ್ಯತೆ

ಏಕೀಕರಣಕ್ಕಾಗಿ ಹೋರಾಟ ಮಾಡಿದರು. ಸಾಂಪ್ರದಾಯಿಕವಾಗಿ ರಾಜ್ಯೋತ್ಸವ ಆಚರಿಸಿಕೊಂಡು ಬರುತ್ತಿದ್ದರೂ ಮೈಸೂರು ರಾಜ್ಯವೆಂದೇ ಕರೆಯಲಾಗುತ್ತಿತ್ತು. ಮೈಸೂರು ರಾಜವಂಶಸ್ಥರು ಆಳಿದ್ದರಿಂದ ಆ ಹೆಸರಿತ್ತು. ವಿಶಾಲ ಕರ್ನಾಟಕವಾದ ನಂತರ ಮುಂಬೈ ಕರ್ನಾಟಕ, ಆಂಧ್ರ, ತಮಿಳುನಾಡು ರಾಜ್ಯಗಳಿಂದ ಹಲವು ಪ್ರದೇಶಗಳು ಒಗ್ಗೂಡಿ ಕರ್ನಾಟಕವಾಯಿತು. ದೇವರಾಜ ಅರಸು ಅವರು ಮುಖ್ಯಮಂತ್ರಿಯಾದ ಸಂದರ್ಭದಲ್ಲಿ 1973 ನವೆಂಬರ್ 01, ರಂದು ಕರ್ನಾಟಕ ಎಂದು ಮರುನಾಮಕರಣವಾಯಿತು. ಕರ್ನಾಟಕ ಗತವೈಭವ ಎಂಬ ಆಲೂರು ವೆಂಕಟರಾಯರ ಪುಸ್ತಕದಿಂದ ಆಯ್ದು ಅಖಂಡ ಕರ್ನಾಟಕಕ್ಕೆ ಕರ್ನಾಟಕ ಎಂದು ಮರುನಾಮಕರಣ ಮಾಡಲಾಯಿತು ಎಂದು ವಿವರಿಸಿದರು.

ನವೆಂಬರ್ 1ಕ್ಕೆ 50 ವರ್ಷಗಳು ತುಂಬುತ್ತದೆ. ವಾಸ್ತವವಾಗಿ ಕಳೆದ ವರ್ಷವೇ ಇದನ್ನು ಆಚರಿಸಬೇಕಿತ್ತು. ಆದರೆ ಹಿಂದಿನ ಸರ್ಕಾರದವರು ಮಾಡಿಲ್ಲ. ಈ ಬಾರಿಯ ಬಜೆಟ್ ಮಂಡಿಸುವ ಸಂದರ್ಭದಲ್ಲಿ ಇದೊಂದು ಮಹತ್ವದ ಘಟನೆ. ಇದನ್ನು ವಿಶೇಷವಾಗಿ ಆಚರಿಸದೇ ಹೋದರೆ ಲೋಪವಾಗುತ್ತದೆ ಎಂದು ತೀರ್ಮಾನಿಸಿ, ಬಜೆಟ್‌ನಲ್ಲಿ ಘೋಷಣೆ ಮಾಡಿ ನವೆಂಬರ್ 1ರಿಂದ 2024 ನವೆಂಬರ್ 1 ರವರೆಗೆ ವರ್ಷವಿಡೀ ಕರ್ನಾಟಕ ಸಂಭ್ರಮವನ್ನು ಆಚರಿಸಲಾಗುತ್ತಿದೆ ಎಂದರು. ಕರ್ನಾಟಕ ಸಂಭ್ರಮ-50 ಲಾಂಛನವನ್ನು ಬಿಡುಗಡೆ ಮಾಡಿದ್ದು, ಅದನ್ನು ವಿನ್ಯಾಸಗೊಳಿಸಿದ ರವಿರಾಜ್.ಜಿ.ಹುಲಗೂರು ಅವರನ್ನು ಅಭಿನಂದಿಸಿದರು. ಲಾಂಛನದ ವಿನ್ಯಾಸ ಉತ್ತಮವಾಗಿದೆ ಎಂದು ಮುಖ್ಯಮಂತ್ರಿಗಳು ಮೆಚ್ಚುಗೆ ವ್ಯಕ್ತಪಡಿಸಿದರು.

ಇಬ್ರಾಹಿಂ ಹಾಜರಿದ್ದು, ಸಮ್ಮತಿಸಿದ್ದರು

ಕೂಡ ಕೊಟ್ಟಿದ್ದರು. ಪಕ್ಷದಲ್ಲಿ ಯಾವುದೇ ರೀತಿಯ ಬಂಡಾಯ ಇಲ್ಲ. ಪಕ್ಷ ಎರಡು ಭಾಗವೂ ಆಗುವುದಿಲ್ಲ ಎಂದು ಸ್ಪಷ್ಟ ಪಡಿಸಿದರು. ವಿಧಾನಸಭೆ ಚುನಾವಣೆಯಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರಲಿಲ್ಲ ವೆಂದು ಇಬ್ರಾಹಿಂ ರಾಜ್ಯಾಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಆಗ ದೇವೇಗೌಡರು ರಾಜೀನಾಮೆ ಬೇಡ ಪಕ್ಷ ಕಟ್ಟೋಣ ಎಂಬ ಕಿವಿಮಾತು ಹೇಳಿದ್ದರು ಎಂದರು. ಅಭಿಮಾನಿಗಳ ಒತ್ತಡಕ್ಕೆ ಮಣಿದು ಇಬ್ರಾಹಿಂ ಸಭೆ ನಡೆಸಿದ್ದಾರೆ. ದೆಹಲಿಗೆ ಕುಮಾರಸ್ವಾಮಿ ಕರೆದಿಲ್ಲ ಎಂಬ ಕಾರಣಕ್ಕೆ ಇಬ್ರಾಹಿಂ ಬೇಸರ ಗೊಂಡಿದ್ದಾರೆಂದರು. ಮಾಜಿ ಶಾಸಕರಾದ ಮಹಿಮಾ ಪಟೇಲ್ ಹಾಗೂ ನಾಡಗೌಡರು ಪಕ್ಷಕ್ಕೆ ಸೇರುವುದಾದರೆ ಅಧ್ಯಕ್ಷರಾಗಲಿ ಎಂದು ಹೇಳಿದ್ದರು. ವಿಧಾನಸಭೆ ಚುನಾವಣೆಗೂ ಮುನ್ನ ಜೆಡಿಎಸ್ ಮುಗಿಸಲು ಎರಡೂ ರಾಷ್ಟ್ರೀಯ ಪಕ್ಷಗಳು ತೀರ್ಮಾನ ಮಾಡಿದ್ದವು. ಆಗ ಇಬ್ರಾಹಿಂ ಅವರನ್ನು ರಾಜ್ಯಾಧ್ಯಕ್ಷರನ್ನಾಗಿ ದೇವೇಗೌಡರು ಮಾಡಿದರು. ಇಬ್ರಾಹಿಂ ಅವರೊಂದಿಗೆ ಮಾತನಾಡುವುದಾಗಿ ದೇವೇಗೌಡರು ಹೇಳಿದ್ದಾರೆ.

ಲೋಕಸಭೆ ಸೀಟ್ ಹಂಚಿಕೆ ವಿಚಾರದಲ್ಲಿ ಯಾವುದೇ ತೀರ್ಮಾನವಾಗಿಲ್ಲ. ಕಾಂಗ್ರೆಸ್ ಜೊತೆ ಕೈಜೋಡಿಸಿ ಜೆಡಿಎಸ್ ಮುಗಿಸುವ ಕೆಲಸ ಮಾಡಬೇಡಿ ಎಂದು ಇಬ್ರಾಹಿಂ ಅವರಿಗೆ ಹೇಳುತ್ತೇವೆ. ಪಕ್ಷ ಈಗ ಸಂಕಷ್ಟದಲ್ಲಿದ್ದು ಇಬ್ರಾಹಿಂ ಅವರೇ ರಾಜ್ಯಾಧ್ಯಕ್ಷರಾಗಿರಬೇಕೆಂದು ಮನವಿ ಮಾಡುತ್ತೇವೆ ಎಂದು ಅವರು ತಿಳಿಸಿದರು.

ರೈತರ ಕೃಷಿ ಪಂಪ್ ಸೆಟ್‌ಗಳಿಗೆ ರಾಜ್ಯ ಸರ್ಕಾರ 5 ಗಂಟೆ ವಿದ್ಯುತ್ ನೀಡುವುದಾಗಿ ಹೇಳಿದೆ. ಅದು ಸಾಲುವುದಿಲ್ಲ. ಬಿಜೆಪಿ ಸರ್ಕಾರದ ಅವಧಿಯಲ್ಲಿ ನೀಡಿದ್ದಂತೆ ರೈತರಿಗೆ 7 ಗಂಟೆ ವಿದ್ಯುತ್ ನೀಡಬೇಕು. ಇಲ್ಲದಿದ್ದರೆ ಕತ್ತಲೆಭಾಗ್ಯ ಶುರುವಾಗುತ್ತದೆ. ಕೇವಲ ಗ್ಯಾರಂಟಿ ಯೋಜನೆಗಳಿಗೆ ಹಣ ನೀಡುವುದಲ್ಲ, ವಿದ್ಯುತ್ ಖರೀದಿಗೂ ಹಣ ಒದಗಿಸಬೇಕು ಎಂದು ಅವರು ಒತ್ತಾಯಿಸಿದರು.

ಗೋಲ್ಡ್ ಕಾರ್ಡ್ ಮಾರಾಟ

2,000 ರೂ. ದರ ನಿಗದಿ ಮಾಡಲಾಗಿದೆ ಎಂದು ಮಾಹಿತಿ ನೀಡಿದ್ದಾರೆ. ಇನ್ನು ಬನ್ನಿಮಂಟಪದಲ್ಲಿ ಅಕ್ಟೋಬರ್ 24ರಂದು ಸಂಜೆ ನಡೆಯುವ ಪಂಜಿನ ಕವಾಯಿತು ವೀಕ್ಷಣೆಗೆ ಪ್ರತಿ ಟಿಕೆಟ್ ಬೆಲೆ 500 ರೂ. ನಿಗದಿ ಮಾಡಲಾಗಿದೆ. ಗೋಲ್ಡ್ ಕಾರ್ಡ್ ಹಾಗೂ ಟಿಕೆಟ್ ಖರೀದಿಗಾಗಿ **mysoredasara.gov.in** ವೆಬ್‌ಸೈಟ್ ಸಂಪರ್ಕಿಸುವಂತೆ ತಿಳಿಸಿದ್ದಾರೆ.

ಆನ್‌ಲೈನ್ ಮೂಲಕ ಗೋಲ್ಡ್ ಕಾರ್ಡ್, ಟಿಕೆಟ್ ಖರೀದಿಸಿದವರಿಗೆ ಗೋಲ್ಡ್ ಕಾರ್ಡ್ ಹಾಗೂ ಟಿಕೆಟ್ ಸ್ವೀಕರಿಸುವ ಸ್ಥಳ, ದಿನಾಂಕ, ಸಮಯ ಹಾಗೂ ಇನ್ನಿತರೆ ಮಾಹಿತಿಗಳನ್ನು ಸಂಬಂಧಿಸಿದವರ ಮೊಬೈಲ್‌ಗೆ ಎಸ್‌ಎಂಎಸ್, ಇ-ಮೇಲ್ ಐಡಿಗೆ ಮಾಹಿತಿ ಕಳುಹಿಸಲಾಗುವುದು ಎಂದು ಹೇಳಿದ್ದಾರೆ. ಇದನ್ನು ಖರೀದಿ ಮಾಡಿದವರು ಒಂದು ಫೋಟೊ, ಐಡಿ ಹಾಜರುಪಡಿಸಿ ಗೋಲ್ಡ್ ಕಾರ್ಡ್ ಮತ್ತು ಟಿಕೆಟ್ ಪಡೆದುಕೊಳ್ಳಬಹುದು ಎಂದು ತಿಳಿಸಿದ್ದಾರೆ. ಆನ್‌ಲೈನ್ ಹೊರತುಪಡಿಸಿ ಇತರೆ ಯಾವುದೇ ರೀತಿಯಲ್ಲಿ ಗೋಲ್ಡ್ ಕಾರ್ಡ್ ಮತ್ತು ಟಿಕೆಟ್ ಮಾರಾಟ ಇರುವುದಿಲ್ಲ ಎಂದು ಡಾ.ರಾಜೇಂದ್ರ ಸ್ಪಷ್ಟಪಡಿಸಿದ್ದಾರೆ.

ಪಾರ್ಕಿಂಗ್ ಇಂದು ಲೋಕಾರ್ಪಣೆ

ಹಾಗೂ ಮೈನಸ್ ಟು(-2) ಹಂತಗಳಲ್ಲಿ ತಲಾ 200ರಂತೆ ಒಟ್ಟು 400 ಕಾರುಗಳನ್ನು ನಿಲುಗಡೆ ಮಾಡಬಹುದು. ಇಲ್ಲಿ ದ್ವಿಚಕ್ರ ವಾಹನಗಳ ನಿಲುಗಡೆಗೆ ಅವಕಾಶವಿರುವುದಿಲ್ಲ. ಪುರಭವನದ ಉತ್ತರ ಗೇಟ್(ಚಾಮರಾಜ ಒಡೆಯರ್ ವೃತ್ತದ ಕಡೆ) ಮೂಲಕ ಮಲ್ಟಿ ಲೆವೆಲ್ ಪಾರ್ಕಿಂಗ್ ಸಂಕೀರ್ಣ ಪ್ರವೇಶಿಸಬೇಕು. ಅಲ್ಲಿಂದ ಗಾಂಧೀ ವೃತ್ತದ ಕಡೆಗೆ ನಿರ್ಗಮಿಸಬೇಕು. ಒಂದು ಕಾರು ನಿಲುಗಡೆಗೆ ಗಂಟೆಗೆ 30 ರೂ., ನಂತರದ ಪ್ರತೀ ಗಂಟೆಗೆ ಹೆಚ್ಚುವರಿ 10 ರೂ. ಹಾಗೂ ದಿನಕ್ಕೆ 60 ರೂ. ಶುಲ್ಕ ನಿಗದಿಪಡಿಸಲಾಗಿದೆ ಎಂದು ತಿಳಿಸಿದರು.

ಬ್ಯಾಟರಿ ವಾಹನ ವ್ಯವಸ್ಥೆ: ಇಲ್ಲಿ ಕಾರು ನಿಲುಗಡೆ ಮಾಡುವವರಿಗೆ ಡಿ.ದೇವರಾಜ ಅರಸು ರಸ್ತೆ, ಅಶೋಕ ರಸ್ತೆ ಹಾಗೂ ಸಯ್ಯಾಜಿರಾವ್ ರಸ್ತೆ(ಆಯುರ್ವೇದ ಆಸ್ಪತ್ರೆ ವೃತ್ತ)ಗೆ ಬ್ಯಾಟರಿ ಚಾಲಿತ ವಾಹನಗಳ ವ್ಯವಸ್ಥೆ ಮಾಡಲಾಗುವುದು. ಇದಕ್ಕಾಗಿ ನಗರ ಪಾಲಿಕೆ ವತಿಯಿಂದಲೇ 10 ವಾಹನಗಳನ್ನು ನೀಡುವ ಚಿಂತನೆ ಇದೆ. ದರ ನಿಗದಿ, ಪಾರ್ಕಿಂಗ್ ಶುಲ್ಕದ ಜೊತೆಗೆ ಬ್ಯಾಟರಿ ವಾಹನ ಟಿಕೆಟ್ ದರ ಪಡೆಯುವುದು ಅಥವಾ ಪ್ರತ್ಯೇಕ ಶುಲ್ಕ ಪಡೆಯುವ ಬಗ್ಗೆ ಚರ್ಚೆ ಮಾಡಿ, ತೀರ್ಮಾನಿಸಲಾಗುವುದು. ಆದರೆ ಬ್ಯಾಟರಿ ಚಾಲಿತ ವಾಹನ ಸಂಚಾರಕ್ಕೆ ಕಡಿಮೆ ದರ ನಿಗದಿಪಡಿಸುವ ಚಿಂತನೆಯಿದೆ ಎಂದು ಹೇಳಿದರು.

ಸಾಕಷ್ಟು ಅನುಕೂಲ: ಮಲ್ಟಿ ಲೆವೆಲ್ ಪಾರ್ಕಿಂಗ್ ಸಂಕೀರ್ಣ ಕಾರ್ಯಾರಂಭದಿಂದ ಡಿ.ದೇವರಾಜ ಅರಸು ರಸ್ತೆ, ಸಯ್ಯಾಜಿ ರಾವ್ ರಸ್ತೆ, ಅಶೋಕ ರಸ್ತೆ ಸೇರಿದಂತೆ ಸುತ್ತಮುತ್ತಲ ರಸ್ತೆಗಳ ವಾಹನ ದಟ್ಟಣೆ ಸ್ವಲ್ಪ ಮಟ್ಟಿಗೆ ತಗ್ಗಲಿದೆ. ಅರಮನೆ, ಸಬರ್ಬನ್ ಬಸ್ ನಿಲ್ದಾಣಕ್ಕೆ ಹತ್ತಿರದಲ್ಲಿರುವುದರಿಂದ ತುಂಬಾ ಜನರಿಗೆ ಅನುಕೂಲವಾಗಲಿದೆ. ಜೊತೆಗೆ ಇಲ್ಲಿಂದ ಬ್ಯಾಟರಿ ಚಾಲಿತ ವಾಹನ ವ್ಯವಸ್ಥೆ ಮಾಡುವ ಮೂಲಕ ಪರಿಸರ ಸ್ನೇಹಿ ಸಂಚಾರ ಕಲ್ಪಿಸಿದಂತಾ ಗುತ್ತದೆ ಎಂದು ತಿಳಿಸಿದರು.

ದಶಕದಿಂದ ನಿರ್ಮಾಣ: ಈ ಮಲ್ಟಿ ಲೆವೆಲ್ ಪಾರ್ಕಿಂಗ್ ನಿರ್ಮಾಣ ಶುರುವಾಗಿ 12 ವರ್ಷಗಳೇ ಕಳೆದಿವೆ. ಈ ಸಂಬಂಧ ಪ್ರತಿಕ್ರಿಯಿಸಿದ ಮೇಯರ್ ಶಿವಕುಮಾರ್, 2011ರಲ್ಲಿ ಆಂಧ್ರ ಮೂಲದ ಭಾಬ್ರಿಯಾ ಅಸೋಸಿಯೇಟ್ಸ್ ಕಂಪನಿಗೆ ಸುಮಾರು 18 ಕೋಟಿ ರೂಗೆ ಟೆಂಡರ್ ನೀಡಲಾಗಿತ್ತು. ಆ ಕಂಪನಿಗೆ ಕಾಳಜಿ ಇರಲಿಲ್ಲ. ಜೊತೆಗೆ ಹಿಂದಿನ ನಮ್ಮ ಅಧಿಕಾರಿಗಳ ನಿರ್ಲಕ್ಷದಿಂದ ಕಾಮಗಾರಿ ನಿಂತಿತ್ತು. ಬಳಿಕ ನಾಲ್ಕೂವರೆ ಕೋಟಿ ಮರು ಟೆಂಡರ್ ಮೂಲಕ ಕಾಮಗಾರಿ ಪುನರಾರಂಭಿಸಲಾಯಿತು. ನಾನು ಮೇಯರ್ ಆದ ಬಳಿಕ ಕಾಮಗಾರಿಗೆ ವೇಗ ನೀಡಿ, ಪೂರ್ಣಗೊಳಿಸಲಾಗಿದೆ ಎಂದರು.

ವಕೀಲರೊಂದಿಗೆ ಚರ್ಚೆ: ಭಾಬ್ರಿಯಾ ಕಂಪನಿಗೆ ಸುಮಾರು 1.75 ಕೋಟಿ ರೂ. ಬಾಕಿ ನೀಡಬೇಕಿತ್ತು. ಆದರೆ ಕಂಪನಿಯವರಿಗೆ 13 ಕೋಟಿ ರೂ. ನೀಡುವಂತೆ ನ್ಯಾಯಾಲಯದ ಆದೇಶವಾಗಿದೆ. ಬಡ್ಡಿ ಸೇರಿ ಸುಮಾರು 18 ಕೋಟಿಯಾಗುತ್ತದೆ. ಹಾಗಾಗಿ ಮುಂದಿನ ಕ್ರಮದ ಬಗ್ಗೆ ದಸರಾ ನಂತರ ಹೈಕೋರ್ಟ್ ವಕೀಲರೊಂದಿಗೆ ಚರ್ಚೆ ನಡೆಸಲಾಗುವುದು ಎಂದು ತಿಳಿಸಿದರು.

ಅ.23ರಂದು ಏರ್ ಶೋ

1 ಗಂಟೆ ಮುಂಚೆ ಬರಬೇಕು: ಅ.22ರಂದು ನಡೆಯುವ ಪೂರ್ವಾಭ್ಯಾಸ ಹಾಗೂ ಅ.23ರ ಏರ್ ಶೋಗೆ ಒಂದು ಗಂಟೆ ಮುಂಚಿತವಾಗಿ ಅಂದರೆ ಮಧ್ಯಾಹ್ನ 3 ಗಂಟೆಯೊಳಗೆ ವೀಕ್ಷಕರು ಹಾಜರಿರಬೇಕು. ನಂತರದಲ್ಲಿ ಬರುವವರಿಗೆ ಪ್ರವೇಶವಿಲ್ಲ. ಪೂರ್ವಾಭ್ಯಾಸದ ದಿನ ಸಾರ್ವಜನಿಕರಿಗೆ ಮುಕ್ತ ಅವಕಾಶವಿರಲಿದೆ. ಆದರೆ ಅ.23ರ ಏರ್ ಶೋ ಹಾಗೂ ಅದೇ ದಿನ ಸಂಜೆ 7 ಗಂಟೆಗೆ ನಡೆಯಲಿರುವ ಪಂಜಿನ ಕವಾಯತು ಪೂರ್ವಾಭ್ಯಾಸ ವೀಕ್ಷಣೆಗೆ ಪೊಲೀಸ್ ಇಲಾಖೆ ವತಿಯಿಂದ ವಿತರಿಸುವ ಪಾಸ್ ಪಡೆದುಕೊಳ್ಳಬೇಕು. ಪಾಸ್ ಇದ್ದವರಿಗೆ ಮಾತ್ರ ಪ್ರವೇಶಾವಕಾಶ ನೀಡಲಾಗುತ್ತದೆ. ಏರ್ ಶೋ ಮುಗಿದ ನಂತರ, ಸಂಜೆ 7ಕ್ಕೆ ಪಂಜಿನ ಕವಾಯತು ತಾಲೀಮು ಆರಂಭವಾಗುತ್ತದೆ. ಹಾಗಾಗಿ ಕುಡಿಯುವ ನೀರು ಹಾಗೂ ಬಿಸಿಲು, ಮಳೆಯಿಂದ ರಕ್ಷಣೆಗೆ ಛತ್ರಿ ಇನ್ನಿತರ ಅತ್ಯಗತ್ಯ ವಸ್ತುಗಳನ್ನು ತೆಗೆದುಕೊಂಡು ಬರುವುದು ಸೂಕ್ತ ಎಂದು ಸಲಹೆ ನೀಡಿದರು.

ಕಾವೇರಿ ತೀರ್ಥೋದ್ಭವ

ಕೆಳಭಾಗದಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿತ್ತು. ಭಾಗಮಂಡಲ ಮತ್ತು ತಲಕಾವೇರಿಯಲ್ಲಿ ಸಂಚಾರಿ ಪೊಲೀಸರ ಸೇರಿದಂತೆ ಕಾನೂನು ಸುವ್ಯವಸ್ಥೆ ಕಾಪಾಡಲು ಹೆಚ್ಚುವರಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ತಲಕಾವೇರಿಯಲ್ಲಿ ಕೊಡಗು ಏಕೀಕರಣ ರಂಗದ ಪ್ರಮುಖರು ಅನ್ನದಾನ ವ್ಯವಸ್ಥೆ ಕಲ್ಪಿಸಿದ್ದರು. ಭಕ್ತರಿಗೆ ಬೆಳಗಿನ ಉಪಹಾರ, ಮಧ್ಯಾಹ್ನ ಅನ್ನದಾನದ ವ್ಯವಸ್ಥೆ ಮಾಡಲಾಗಿತ್ತು.

ಇದಕ್ಕೂ ಮುನ್ನ ಶ್ರೀ ಕಾವೇರಿ ತುಲಾ ಸಂಕ್ರಮಣ ಪವಿತ್ರ ತೀರ್ಥೋದ್ಭವ ಹಿನ್ನೆಲೆ ಶ್ರೀ ಭಾಗಮಂಡಲ ಭಗಂಡೇಶ್ವರ ಮತ್ತು ತಲಕಾವೇರಿ ಪವಿತ್ರ ಕ್ಷೇತ್ರದಲ್ಲಿ ಸಿದ್ಧತೆಗಳನ್ನು ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು, ಶಾಸಕ ಎ.ಎಸ್.ಪೊನ್ನಣ್ಣ ಭಾನುವಾರ ಭಾಗಮಂಡಲ ಭಗಂಡೇಶ್ವರ ದೇವಾಲಯ, ತ್ರಿವೇಣಿ ಸಂಗಮ ಹಾಗೆಯೇ ತಲಕಾವೇರಿ ಕೇತ್ರಕ್ಕೆ ಭೇಟಿ ನೀಡಿ ಸಿದ್ಧತೆ ಪರಿಶೀಲಿಸಿದ್ದರು.ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು, ಕಾವೇರಿ ತುಲಾ ಸಂಕ್ರಮಣ ಪವಿತ್ರ ತೀರ್ಥೋದ್ಭವ ಸಂಬಂಧ ಭಾಗಮಂಡಲ ದೇವಾಲಯದಲ್ಲಿ ನಂದಾದೀಪ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು, ತಕ್ಕ ಮುಖ್ಯಸ್ಥರ ಸಮ್ಮುಖದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಕ್ಷಯ ಪಾತ್ರೆ ಇರಿಸಿದ್ದರು.

ದಸರಾ ಕವಿಗೋಷ್ಠಿ ; ಖ್ಯಾತ ಸಾಹಿತಿ ಜಯಂತ್ ಕಾಯ್ಕಿಣಿ ಉದ್ಘಾಟನೆ

ಬರೀ ಪ್ರಶಸ್ತಿಗಳಿಗಾಗಿ ಸಾಹಿತ್ಯ ಬರೆಯಬಾರದು

ಕವಿಗಳಿಗೆ ಕಾಯ್ಕಿಣಿ ಕಿವಿಮಾತು



ಮೈಸೂರು, ಅ.17(ಜಿಎ)-ನಮ್ಮಲ್ಲಿ ಓದುಗರಿಗಿಂತ ಹೆಚ್ಚು ಕವಿಗಳಿದ್ದಾರೆ. ಕವಿಗಳಿಗಿಂತ ಹೆಚ್ಚು ಪ್ರಶಸ್ತಿಗಳಿವೆ. ಪ್ರಶಸ್ತಿಗಳ ಆಸೆಗಾಗಿ ಕವಿತೆ, ಸಾಹಿತ್ಯ ಬರೆಯಬಾರದು ಎಂದು ಖ್ಯಾತ ಸಾಹಿತಿ ಜಯಂತ್ ಕಾಯ್ಕಿಣಿ ಅಭಿಪ್ರಾಯಪಟ್ಟರು.

ದಸರಾ ಮಹೋತ್ಸವದ ಅಂಗವಾಗಿ ಮಂಗಳವಾರ ಕಲಾಮಂದಿರದಲ್ಲಿ ಆಯೋಜಿಸಿದ್ದ ದಸರಾ ಕವಿಗೋಷ್ಠಿ ಉದ್ಘಾಟಿಸಿ ಮಾತನಾಡಿದ ಅವರು, ಸಾಹಿತ್ಯ ಎಂಬುದು ವೈಚಾರಿಕತೆಯ ಹೊಸ ಬಾಗಿಲನ್ನು ತೆರೆಯುತ್ತದೆ. ಕನ್ನಡ ಪಾಠಶಾಲೆಯಲ್ಲಿ ಪಾಠ ಮಾಡುವ ಶಿಕ್ಷಕರು ತಮ್ಮ ಮಕ್ಕಳನ್ನು ಆಂಗ್ಲ ಪಾಠಶಾಲೆಗೆ ಸೇರಿಸುತ್ತಿರುವ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಕನ್ನಡ ಭಾಷೆ ಸಾಹಿತ್ಯ ಕುರಿತು ಚಿಂತಿಸುವ ಅವಶ್ಯಕತೆ ನಿಜವಾಗಿಯೂ ನಮ್ಮ ಮುಂದಿದೆ ಎಂದರು.

ಸಾಹಿತ್ಯ ಮಾರ್ಗದಲ್ಲಿ ಬದುಕಿನ ಹೊಸತನ್ನು ಹುಡುಕುವುದು ಹಾಗೂ ವಿಕಾಸದ ಅನ್ವೇಷಣೆ ಮುಖ್ಯ. ಇದಕ್ಕೆ ಸಾಹಿತ್ಯ ಮೂಲಾಧಾರ. ಪ್ರಶಸ್ತಿಗಳ ಆಸೆಗಾಗಿ ಕವಿತೆ, ಸಾಹಿತ್ಯ ಬರೆಯುವುದಲ್ಲ. ಹೊಸ ತಲೆಮಾರು ಮೊದಲು ಓದುವುದನ್ನು ಮುಂದುವರಿಸಬೇಕು. ಏನನ್ನು ಓದದೇ ಹೊಸದನ್ನು ಬರೆಯಲು ಸಾಧ್ಯವಿಲ್ಲ ಎಂದು ಯುವ ಕವಿಗಳಿಗೆ ಕಿವಿಮಾತು ಹೇಳಿದರು.

> ಕುಮಾರಸ್ವಾಮಿ ಅವರನ್ನು ಪಕ್ಷದಿಂದ ಉಚ್ಚಾಟನೆ ಮಾಡುವ ಇಬ್ರಾಹಿಂ ಅವರ ನಿರ್ಧಾರ ಸರಿ ಇದೆ. ಕುಮಾರಸ್ವಾಮಿ ಅವರು ವೈಯಕ್ತಿಕವಾಗಿ ಬಿಜೆಪಿ ಜೊತೆ ಮೈತ್ರಿ ಮಾತನಾಡಿಕೊಂಡು ಜಾತ್ಯಾತೀತತೆ ಕಳೆದಿದ್ದಾರೆ. ಇಬ್ರಾಹಿಂ ಅವರ ನಿಲುವು ರಾಜ್ಯ ರಾಜಕಾರಣಕ್ಕೆ ಸರಿ ಇದೆ. ಪಕ್ಷದಿಂದ ಉಚ್ಚಾಟನೆ ಮಾಡುವ ಎಲ್ಲಾ ರೀತಿಯ ಅಧಿಕಾರವಿದೆ. ಪಕ್ಷದ ಜಾತ್ಯಾತೀತತೆ ಶಕ್ತಿಯನ್ನು ಕೊಲೆ ಮಾಡಿ, ಜಾತಿ, ಕೋಮುವಾದ ವ್ಯವಸ್ಥೆಯ ಸಂಸ್ಥೆ ಬಿಜೆಪಿ ಜೊತೆ ಹೋಗುವ ಕುಮಾರಸ್ವಾಮಿ ಅವರನ್ನು ಉಚ್ಚಾಟನೆ ಮಾಡುವ ಶಕ್ತಿ ಇಬ್ರಾಹಿಂಗೆ ಇದೆ. ನಾನು ರಾಜ್ಯಾಧ್ಯಕ್ಷನಾಗಿ ಮುಂದುವರೆದಿದ್ದರೆ, ಕುಮಾರಸ್ವಾಮಿ ಅವರನ್ನು 6 ವರ್ಷ ಪಕ್ಷದಿಂದ ಉಚ್ಚಾಟನೆ ಮಾಡುತ್ತಿದ್ದೆ.
>
> -ಹೆಚ್.ವಿಶ್ವನಾಥ್, ವಿಧಾನಪರಿಷತ್ ಸದಸ್ಯ

ನಂತರ ಸಮಾಜ ಕಲ್ಯಾಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಮಾತನಾಡಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಆಡಳಿತವು ಈಗಿನ ಸಾಹಿತ್ಯ ಚಳುವಳಿಗೆ ಪ್ರೇರಣೆಯಾಗಲಿ. ಈ ಕವಿಗೋಷ್ಠಿ ವೇದಿಕೆಯಲ್ಲಿ ಸಮಾಜದ ಎಲ್ಲಾ ಸಮಸ್ಯೆಗಳನ್ನು ಕುರಿತು ಸುದೀರ್ಘ ಚರ್ಚೆಯಾಗಲಿ. ಸಾಹಿತ್ಯ ಕ್ಷೇತ್ರವು ಸಮಾಜದ ಮೇಲೆ ಬಹಳ ಪ್ರಭಾವ ಬೀರುತ್ತದೆ. ಸಾಹಿತ್ಯಕ್ಕೆ ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಶಕ್ತಿ ಇದೆ. ಈ ಹಿನ್ನೆಲೆಯಲ್ಲಿ ಸಾಹಿತ್ಯದ ಮೂಲಕ ಜನರಲ್ಲಿ ಜಾಗೃತಿ ಮೂಡಿಸುವಂತಾಗಲಿ ಎಂದು ತಿಳಿಸಿದರು.

ವಚನ ಸಾಹಿತ್ಯ ಚಳುವಳಿಯ ಮೂಲಕ ಸಮಾಜದಲ್ಲಿನ ಬದಲಾವಣೆಗಾಗಿ ಜಾಗೃತಿಯನ್ನು ಮೂಡಿಸಲಾಗಿದೆ. ಅದರಂತೆ ಪ್ರಸ್ತುತ ನಮ್ಮ ದೇಶದಲ್ಲಿ ನಡೆಯುತ್ತಿರುವ ಅಸ್ಪೃಶ್ಯತೆ ಆಚರಣೆ, ಮಾನವ ಹಕ್ಕುಗಳ ಉಲ್ಲಂಘನೆ, ಲಿಂಗ ತಾರತಮ್ಯ, ಜಾತಿ ಪ್ರಭಾವ, ಅಧರ್ಮದ ನಡೆ ಇವೆಲ್ಲವನ್ನೂ ತಿದ್ದಿ ಸರಿದಾರಿಗೆ ತರಬೇಕಿದೆ. ಅದರೊಂದಿಗೆ ನಮ್ಮ ವಾಕ್ ಸ್ವಾತಂತ್ರ್ಯದ ಮೂಲಕ ಪ್ರಜಾಪ್ರಭುತ್ವ ತಳಹದಿಯನ್ನು ಸದೃಢಪಡಿಸುವ ಕೆಲಸ ಸಾಹಿತ್ಯ ಕ್ಷೇತ್ರದಿಂದ ಆಗಬೇಕಿದೆ ಎಂದರು.

ಮರ್ಯಾದೆ ಹತ್ಯೆಯಂತಹ ಪ್ರಕರಣ ಇಡೀ ಮಾನವ ಕುಲ ತಲೆತಗ್ಗಿಸುವಂತದ್ದು. ಇಂತಹ ಅನೇಕ ಅನಿಷ್ಟ ಪದ್ಧತಿಗಳನ್ನು ಖಂಡಿಸುವ ಮೂಲಕ ನಿರ್ಮೂಲನೆ ಮಾಡಬೇಕು. ಸಾಹಿತ್ಯದ ಮೂಲಕ ಎಲ್ಲಾ ಅನಿಷ್ಟ ಪದ್ಧತಿಗಳ ನಿರ್ಮೂಲನೆ ಮಾಡುವ ಪ್ರಯತ್ನ ಮಾಡಬೇಕು. ಮನುಷ್ಯರು ನೆಮ್ಮದಿಯಿಂದ ಬಾಳುವಂತಹ ವಾತಾವರಣ ನಿರ್ಮಾಣವಾಗಬೇಕು ಎಂದು ಅಭಿಪ್ರಾಯಪಟ್ಟರು.

ಖ್ಯಾತ ಕವಯಿತ್ರಿ ಮಾಲತಿ ಶೆಟ್ಟಿ ಮಾತನಾಡಿ, ವಿವಿಧ ವೇದಿಕೆಗಳಲ್ಲಿ ದಸರಾ ಕವಿಗೋಷ್ಠಿಗಳು ನಡೆಯಲಿದ್ದು, ದಸರಾ ಕವಿಗಳಿಗೆ ಉತ್ತಮ ವೇದಿಕೆ ಕಲ್ಪಿಸಿಕೊಟ್ಟಿವೆ. ಕನ್ನಡದ ಹಿರಿಯ ಕವಿಗಳು ಕನ್ನಡ ಸಾಹಿತ್ಯಕ್ಕೆ ಮಹತ್ತರ ಕೊಡುಗೆ ನೀಡಿದ್ದಾರೆ. ಕವಿಯಾದವರಿಗೆ ಆಂತರಿಕ ಪ್ರತಿಭೆಯ ಜ್ಯೋತಿ ಇರುತ್ತದೆ. ಸಾಹಿತ್ಯ ಸೃಷ್ಟಿಗೆ ನಿರಂತರ ಅಧ್ಯಯನದ ಅವಶ್ಯಕತೆ ಇದೆ ಎಂದರು.

ಕಾರ್ಯಕ್ರಮದಲ್ಲಿ ಶಾಸಕರಾದ ತನ್ವೀರ್ ಸೇಠ್, ಕೆ.ಹರೀಶ್ ಗೌಡ, ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್, ಮೇಯರ್ ಶಿವಕುಮಾರ್, ಉಪ ಮೇಯರ್ ಡಾ.ಜಿ. ರೂಪ, ಖ್ಯಾತ ಸಾಹಿತಿ ಕುಂ. ವೀರಭದ್ರಪ್ಪ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಕವಿಗೋಷ್ಠಿ ಉಪಸಮಿತಿಯ ಉಪ ವಿಶೇಷಾಧಿಕಾರಿ ಡಾ.ಎಂ.ದಾಸೇಗೌಡ, ಕಾರ್ಯಾಧ್ಯಕ್ಷರಾದ ಡಾ.ವಿಜಯಕುಮಾರಿ ಎಸ್. ಕರಿಕಲ್, ಕಾರ್ಯದರ್ಶಿ ಎಂ.ಎಸ್.ಗಿರಿಧರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ದಸರಾದಲ್ಲಿ ಬರೀ ಅಧಿಕಾರಿಗಳ ದರ್ಬಾರ್

ನಗರದ ಕಲಾಮಂದಿರದಲ್ಲಿ ಆಯೋಜಿಸಿದ್ದ ದಸರಾ ಕವಿಗೋಷ್ಠಿಯಲ್ಲಿ ಮುಖ್ಯ ಅತಿಥಿಯಾಗಿದ್ದ ಸಾಹಿತಿ ಹಾಗೂ ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಮಾತನಾಡಿ, ಸಾಹಿತ್ಯದಲ್ಲಿ ಹಲವಾರು ಪ್ರಕಾರವಿದೆ. ಆದರೆ, ರಾಜಕೀಯ ಸಾಹಿತ್ಯವಿಲ್ಲ. ಇಂದು ಜಗತ್ತು ನಡೆಯುತ್ತಿರುವುದೇ ಜನತಂತ್ರದಿಂದ. ಆದ್ದರಿಂದ ಸಾಹಿತಿಗಳು ರಾಜಕೀಯದ ಬಗ್ಗೆ ಸಾಹಿತ್ಯ ಬರೆಯಬೇಕು. ಆದರೆ, ಸಾಹಿತಿಗಳು ಇದನ್ನು ಒಪ್ಪುವುದಿಲ್ಲ. ರಾಜಕಾರಣಿಗಳನ್ನು ಮೈಲಿಗೆಯಿಂದ ನೋಡುತ್ತಾರೆ ಎಂದರು.

ಮತ್ತೊಂದೆಡೆ ರಾಜಕಾರಣಿ ಬರೆಯುತ್ತಾರೆ ಎಂದರೆ, ಅವರಿಗೆ ಪ್ರೋತ್ಸಾಹವಿಲ್ಲ. ಹಾಗೇ ಎರಡು ಪಕ್ಷಗಳ ರಾಜಕಾರಣಿಗಳು ನಿತ್ಯವೂ ಒಬ್ಬರ ಮೇಲೆ ಒಬ್ಬರು ವಾಗ್ದಾಳಿ ನಡೆಸುತ್ತಿದ್ದರು. ರಾಜಕಾರಣಿಗಳನ್ನು ಖಂಡಿಸುವ ಗಂಡೆದೆ ಯಾವ ಸಾಹಿತಿಗೂ ಇಲ್ಲ. ರಾಜಕೀಯ ಸಾಹಿತ್ಯಕ್ಕೂ ಇಂದು ಮೌಲ್ಯಬೇಕು. ಸಾಹಿತ್ಯ ಕ್ಷೇತ್ರದಿಂದ ನಾನು ಆಯ್ಕೆಯಾಗಿದ್ದು, ಈವರೆಗೂ ಏಳು ಪುಸ್ತಕಗಳನ್ನು ಬರೆದಿದ್ದೇನೆ. ಹಾಗೇ ಏಳು ದಸರಾದ ನೇತೃತ್ವ ವಹಿಸಿಕೊಂಡಿದ್ದೇನೆ. ಆದರೆ, ಈ ಬಾರಿ ದಸರಾದಲ್ಲಿ ಅಧಿಕಾರಿಗಳ ದರ್ಬಾರ್ ನಡೆಯುತ್ತಿದೆ. ಯಾವ ಉಪ ಸಮಿತಿಯಲ್ಲಿಯೂ ಜನಪ್ರತಿನಿಧಿಗಳಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ದಸರಾ ದೀಪಾಲಂಕಾರ ಚೆನ್ನಾಗಿದೆ ಆದರೆ, ಎಲ್ಲಾ ಅಧಿಕಾರಿಗಳ ದರ್ಬಾರ್ ನಡೆಯುತ್ತಿದೆ. ದಸರಾದಲ್ಲಿ ಹೊಸ ವಿಷಯಗಳನ್ನು ಅಳವಡಿಸಿಲ್ಲ. ಈ ಹಿಂದೆ ನಾವು ಹೊಸ ಗಜಪಯಣ, ಗೀತ್ ಸಂಗೀತ್ ಆರಂಭಿಸಿದ್ದೆವು. ಈ ಮೊದಲು ದಸರಾ ಕಾರ್ಯಕ್ರಮದಲ್ಲಿ ಕಲಾವಿದರು ಭಾಗವಹಿಸುವುದೇ ಧನ್ಯ ಎಂದು ಹೇಳುತ್ತಿದ್ದರು. ಆದರೆ, ಈಗ 'ನೀನು ಮಸಿ ತಗೋ ನಾ ಮಸಿ ತಗೋತಿನಿ' ಎಂಬ ಪದ್ಧತಿ ನಡೆಯುತ್ತಿದೆ. 2003ರಲ್ಲಿ ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿಯಾದ ಸಂದರ್ಭದಲ್ಲಿ ಇದೇ ರೀತಿ ಬರದ ಛಾಯೆ ಇತ್ತು. ಅಂದು ನಾವು ಪ್ರಾಯೋಜಕತ್ವದಲ್ಲಿಯೇ ದಸರಾ ನಡೆಸಿದ್ದೆವು. ಕರ್ನಾಟಕದಲ್ಲಿ ಇನ್ಫೋಸಿಸ್, ಟಿವಿಎಸ್ ಸೇರಿದಂತೆ ಅನೇಕ ಸಂಸ್ಥೆಗಳಿವೆ. ಅವರ ಪ್ರಾಯೋಜಕತ್ವದಲ್ಲಿ ದಸರಾ ಮಾಡಿ. ದಸರಾ ಆಡಂಬರಕ್ಕೆ ಸೀಮಿತವಾಗಬಾರದು ಎಂದು ಮುಖ್ಯಮಂತ್ರಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವರಲ್ಲಿ ಮನವಿ ಮಾಡಿದರು.

ದಸರಾ ಬಗ್ಗೆ ಅಪಸ್ವರವಿಲ್ಲ

ದಸರಾ ಮಹೋತ್ಸವ ಹಲವಾರು ವರ್ಷಗಳಿಂದ ತನ್ನದೇ ಛಾಪು ಮೂಡಿಸಿದೆ. ರಾಜ್ಯದ ಜನರ ಬದುಕು ಮಳೆ, ಬೆಳೆಯಿಂದ ಉತ್ತಮವಾಗಲಿ ಎಂದು ಪ್ರಾರ್ಥನೆ ಮಾಡಿ, ದಸರಾ ಆರಂಭಿಸಿದ್ದೇವೆ. ಅನೇಕ ಕಾರ್ಯಕ್ರಮಗಳು ನಡೆಯುತ್ತಿವೆ. ದಸರಾ ಕಾರ್ಯಕ್ರಮಗಳ ಬಗ್ಗೆ ಅಪಸ್ವರವಿಲ್ಲ. ಆದರೆ, ಇನ್ನೂ ವ್ಯವಸ್ಥಿತವಾಗಿ ಮಾಡಬಹುದಾಗಿತ್ತು.

-ತನ್ವೀರ್ ಸೇಠ್, ಶಾಸಕ

ಮೈಸೂರು ತಲುಪಿದ ಹೆಚ್ಚುವರಿ ಬಾಂಬ್‌ಸ್ಕ್ವಾಡ್, ಶ್ವಾನದಳ

ಡಿಸಿಪಿ ಎಂ. ಮುತ್ತುರಾಜ್‌ರಿಂದ ಕರ್ತವ್ಯ ನಿರ್ವಹಣೆ ಕುರಿತು ವಿವರಣೆ



ಮೈಸೂರು, ಅ. 17(ಆರ್‌ಕೆ)- ದಸರಾ ಮಹೋತ್ಸವದ ಭದ್ರತೆಗಾಗಿ ನಿಯೋಜನೆಗೊಂಡ ಬಾಂಬ್ ಸ್ಕ್ವಾಡ್ ಹಾಗೂ ಶ್ವಾನದಳದ ಹೆಚ್ಚುವರಿ ಸಿಬ್ಬಂದಿ ಮೈಸೂರು ತಲುಪಿದೆ.

ಹೊರ ಜಿಲ್ಲೆಗಳಿಂದ ಬಂದಿರುವ ಆಂಟಿಸೆಬಟಿಕ್ ಚೆಕ್‌ನ 18 ತಂಡಗಳು, ಶ್ವಾನದಳದ 18 ತಂಡ ಹಾಗೂ 3 ಬಾಂಬ್ ಪತ್ತೆ ಮತ್ತು ನಿಗ್ರಹ ದಳದ ಸಿಬ್ಬಂದಿಗೆ ಮೈಸೂರಿನ ನಜರ್‌ಬಾದ್‌ನಲ್ಲಿರುವ ಪೊಲೀಸ್ ಆಯುಕ್ತರ ಕಚೇರಿ ಆವರಣದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಡಿಸಿಪಿ ಎಂ. ಮುತ್ತುರಾಜ್ ದಸರಾ ಭದ್ರತಾ ಹಾಗೂ ಮುನ್ನೆಚ್ಚರಿಕೆಗಾಗಿ ನಿರ್ವಹಿಸಬೇಕಾದ ಕ್ರಮದ ಬಗ್ಗೆ ಮಾಹಿತಿ ನೀಡಿದರು.

ಮೈಸೂರಿನ ರೈಲು ನಿಲ್ದಾಣ, ಬಸ್ ಸ್ಟ್ಯಾಂಡ್, ಏರ್‌ಪೋರ್ಟ್, ಅರಮನೆ ಆವರಣ, ಕುಪ್ಪಣ್ಣ ಪಾರ್ಕ್, ದಸರಾ ವಸ್ತುಪ್ರದರ್ಶನ ಆವರಣ, ಕಲಾಮಂದಿರ, ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನ ಸೇರಿದಂತೆ ದಸರಾ ಕಾರ್ಯಕ್ರಮ ನಡೆಯುವ ಎಲ್ಲಾ ಸ್ಥಳಗಳು, ಬನ್ನಿ ಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ನಿತ್ಯ ತಪಾಸಣೆ ನಡೆಸಬೇಕು ಎಂದು ತಾಕೀತು ಮಾಡಿದರು.

ಚಾಮುಂಡಿಬೆಟ್ಟ, ಪ್ರವಾಸಿ ತಾಣಗಳು, ಹೋಟೆಲ್‌ಗಳು, ಪ್ರವಾಸಿಗರು ವಾಸ್ತವ್ಯ ಹೂಡುವ ಸ್ಥಳಗಳಲ್ಲೂ ತೀವ್ರ ತಪಾಸಣೆ ನಡೆಸಿ ಸಂಶಯ ಬಂದ ತಕ್ಷಣ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದು ಮುಂಜಾಗರೂಕ ಕ್ರಮ ವಹಿಸಲು ನೆರವಾಗಬೇಕೆಂದು ಸೂಚಿಸಿದ ಅವರು, ಯಾವುದೇ ಸ್ಫೋಟಕ ವಸ್ತುಗಳು, ವಿಧ್ವಂಸಕ ಕೃತ್ಯಕ್ಕೆ ಬಳಸುವ ಪರಿಕರಗಳ ಬಗ್ಗೆ ಸುಳಿವು ಸಿಕ್ಕಿದಲ್ಲಿ ತಕ್ಷಣ ಕಾರ್ಯೋನ್ಮುಖರಾಗುವಂತೆಯೂ ತಿಳಿಸಿದರು.

ದಸರಾ ಮಹೋತ್ಸವ ವೀಕ್ಷಿಸಲೆಂದು ದೇಶ-ವಿದೇಶಗಳಿಂದ ಪ್ರವಾಸಿಗರು ಆಗಮಿಸುವುದರಿಂದ ಯಾವುದೇ ಸಣ್ಣಪುಟ್ಟ ಅಹಿತಕರ ಘಟನೆಗಳೂ ಸಂಭವಿಸದಂತೆ ಕಟ್ಟೆಚ್ಚರ ವಹಿಸಬೇಕಾಗಿರುವುದರಿಂದ ಆಂಟಿಸೆಬಟಿಕ್ ಚೆಕ್ ಟೀಂ, ಡಾಗ್ ಸ್ಕ್ವಾಡ್ ಹಾಗೂ ಬಾಂಬ್ ಪತ್ತೆ ಮತ್ತು ನಿಷ್ಕ್ರಿಯ ದಳದ ಸಿಬ್ಬಂದಿ ಎಚ್ಚರಿಕೆಯಿಂದ ಕೆಲಸ ಮಾಡಬೇಕೆಂದು ಮುತ್ತುರಾಜ್ ಸೂಚಿಸಿದರು.

ದಸರೆಗೆ ಭಾರಿ ಪೊಲೀಸ್ ಭದ್ರತೆ ಮಾಡಿ ಕಟ್ಟೆಚ್ಚರ ವಹಿಸಿರುವುದರಿಂದ ಜನರು ಯಾವುದೇ ಆತಂಕವಿಲ್ಲದೇ ನಿರಾಳವಾಗಿ ಮೈಸೂರಿಗೆ ಬಂದು ನವರಾತ್ರಿ ಉತ್ಸವವನ್ನು ನೋಡಿ ಸಂಭ್ರಮಿಸಬಹುದು. ಪೊಲೀಸರು ಎಲ್ಲರ ಸುರಕ್ಷತೆಗಾಗಿ ಅಗತ್ಯ ಕ್ರಮ ಕೈಗೊಂಡಿದ್ದೇವೆ ಎಂದು ಡಿಸಿಪಿ ಅಭಯ ನೀಡಿದ್ದಾರೆ.

ರಾಜ್ಯಮಟ್ಟದ ಚಿತ್ರಕಲೆ ಸ್ಪರ್ಧೆಯಲ್ಲಿ ನೂರಾರು ವಿದ್ಯಾರ್ಥಿಗಳು ಭಾಗಿ

ಮೈಸೂರು, ಅ.17(ಜಿಎ)-ಪರಿಸರ, ಪ್ರಾಣಿ, ಪಕ್ಷಿಗಳು, ಪಾರಂಪರಿಕ ತಾಣ, ಮೈಸೂರು ದಸರಾ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಭಾರತದ ಮೈಲುಗಲ್ಲಿನ ಮಹತ್ವವನ್ನು ಮಕ್ಕಳು ಚಿತ್ರಕಲೆ ಮೂಲಕ ಸಾರಿದರು.



ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಲಲಿತಕಲೆ ಮತ್ತು ಕರಕುಶಲ ಉಪ ಸಮಿತಿಯ ವತಿಯಿಂದ ಕಲಾಮಂದಿರದ ಆವರಣದಲ್ಲಿ ಆಯೋಜಿಸಿದ್ದ ಮಕ್ಕಳ ರಾಜ್ಯ ಮಟ್ಟದ ಚಿತ್ರ ಬಿಡಿಸುವ ಸ್ಪರ್ಧೆಯಲ್ಲಿ 325 ವಿದ್ಯಾರ್ಥಿಗಳು ಭಾಗವಹಿಸಿದ್ದರು.

1 ರಿಂದ 4ನೇ ತರಗತಿ ವಿದ್ಯಾರ್ಥಿಗಳು ಪರಿಸರ, ಪ್ರಾಣಿ, ಪಕ್ಷಿಗಳು, ಮೈಸೂರು ದಸರಾದ ವಿಷಯ ಕುರಿತು ಚಿತ್ರ ಬಿಡಿಸಿದರೆ, 5 ರಿಂದ 7ನೇ ತರಗತಿ ವಿದ್ಯಾರ್ಥಿಗಳು ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಭಾರತದ ಮೈಲುಗಲ್ಲನ್ನು ಚಿತ್ತಾರದ ಮೂಲಕ ಸಾರಿದರು. 8 ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಕರ್ನಾಟಕದಲ್ಲಿ ವಿಶ್ವ ಪಾರಂಪರಿಕ ತಾಣಗಳ ವಿಷಯ ಕುರಿತು ಚಿತ್ರ ಬಿಡಿಸಿದರು.

ಗೃಹರಕ್ಷಕ ಕ್ಷೇಮಾಭಿವೃದ್ಧಿ ನಿಧಿಯಿಂದ ನೆರವು



ಮೈಸೂರು, ಅ.17(ಜಿಎ)-ಗೃಹರಕ್ಷಕ ಕ್ಷೇಮಾಭಿವೃದ್ಧಿ ನಿಧಿ ಯೋಜನೆಯಡಿ ಅನಾರೋಗ್ಯಕ್ಕೊಳಗಾದ ಮತ್ತು ನಿಧನರಾದ ಗೃಹರಕ್ಷಕ ಕುಟುಂಬದವರಿಗೆ ಜಿಲ್ಲಾ ಕಮಾಂಡೆಂಟ್ ಡಾ.ಎಂ.ಕಾಂತರಾಜು ಚೆಕ್ ವಿತರಿಸಿದರು.

ಗೃಹರಕ್ಷಕದಳದ ಜಿಲ್ಲಾ ಕಚೇರಿಯಲ್ಲಿ ನಡೆದ ಸರಳ ಸಮಾರಂಭದಲ್ಲಿ ಮೈಸೂರು ಘಟಕದ ಗೃಹರಕ್ಷಕ ಜವರೇಗೌಡರ ಪತ್ನಿ ಆರೋಗ್ಯ ನಿರ್ವಹಣೆಗಾಗಿ 12,160 ರೂ., ಬಾಬುರಾವ್ ಪತ್ನಿಗೆ 26,758 ರೂ., ಶಂಕರ್ ಪುತ್ರಿ ವ್ಯಾಸಂಗಕ್ಕೆ 5,000 ರೂ., ನಂಜನಗೂಡು ಘಟಕದ ಗೃಹರಕ್ಷಕ ಮಹದೇವಮೂರ್ತಿ ಅನಾರೋಗ್ಯದಿಂದ ನಿಧನರಾದ ಹಿನ್ನೆಲೆಯಲ್ಲಿ ಅವರ ಕುಟುಂಬಕ್ಕೆ 57,068 ರೂ. ಚೆಕ್ಕನ್ನು ಹಸ್ತಾಂತರಿಸಲಾಯಿತು.

ಈ ವೇಳೆ ಸಹಾಯಕ ಆಡಳಿತಾಧಿಕಾರಿ ವಿಶ್ವನಾಥ್, ಸಹಾಯಕ ಬೋಧಕ ಮಂಜುನಾಥ್, ಘಟಕಾಧಿಕಾರಿ ಸಂಪತ್ ಕುಮಾರ್ ಉಪಸ್ಥಿತರಿದ್ದರು.

ದಸರಾ ದೀಪಾಲಂಕಾರ ವೀಕ್ಷಿಸಲು ಅಂಬಾರಿ ಬಸ್‌ಗೆ ಭಾರಿ ಬೇಡಿಕೆ

ಮೈಸೂರು, ಅ. 17(ಆರ್‌ಕೆ)- ಪ್ರವಾಸಿಗರು ಸೇರಿದಂತೆ ಜನರಿಗಾಗಿ ಗಂಟೆಗಟ್ಟಲೆ ಕಾಯುತ್ತಿದ್ದ ಅಂಬಾರಿ ಡಬಲ್ ಡೆಕ್ಕರ್ ಬಸ್‌ಗಳಿಗೀಗ ಭಾರಿ ಬೇಡಿಕೆ ಬಂದಿದೆ.

ರಾತ್ರಿ ವೇಳೆ ವಿದ್ಯುತ್ ದೀಪಾಲಂಕಾರದಲ್ಲಿ ಕಂಗೊಳಿಸುತ್ತಿರುವ ಸಾಂಸ್ಕೃತಿಕ ನಗರಿಯ ಸೌಂದರ್ಯ ಸವಿಯಲು ಸ್ಥಳೀಯ ಮತ್ತು ಹೊರಗಿನ ಪ್ರವಾಸಿಗರು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ (ಕೆಎಸ್‌ಟಿಡಿಸಿ)ದ ಡಬಲ್ ಡೆಕ್ಕರ್ ಅಂಬಾರಿ ಬಸ್‌ಗಳಲ್ಲಿ ಕುಟುಂಬ ಸಮೇತ ಪ್ರಯಾಣಿಸಲು ಈಗಲೂ ಮುಗಿಬೀಳುತ್ತಿದ್ದಾರೆ.

ಆನ್‌ಲೈನ್ ಮತ್ತು ಆಫ್‌ಲೈನ್ ಟಿಕೆಟ್ ವ್ಯವಸ್ಥೆ ಇರುವುದರಿಂದ ಈಗಾಗಲೇ 6 ದಿನಗಳವರೆಗೂ ಮುಂಗಡ ಟಿಕೆಟ್ ಬುಕ್ ಮಾಡಿಕೊಳ್ಳಲಾಗಿದ್ದು, ಟಿಕೆಟ್‌ಗಾಗಿ ಜನರಿಂದ ದಸರಾ ಮಹೋತ್ಸವಕ್ಕೆ ಚಾಲನೆ ದೊರೆತ ದಿನದಿಂದಲೇ ವಿದ್ಯುತ್ ದೀಪಾಲಂಕಾರವೂ ಆರಂಭವಾಗಿರುವುದರಿಂದ ಅಕ್ಟೋಬರ್ 15ರಿಂದಲೇ ಎಲ್ಲಾ 6 ಅಂಬಾರಿ ಬಸ್‌ಗಳ ಎಲ್ಲಾ ಟ್ರಿಪ್‌ನ ಆಸನಗಳೂ ಭರ್ತಿಯಾಗುತ್ತಿವೆ.



ಪ್ರತೀದಿನ ಸಂಜೆ 6.30, ರಾತ್ರಿ 8 ಹಾಗೂ ರಾತ್ರಿ 9.30 ಗಂಟೆಗೆ ಮೈಸೂರಿನ ಜೆಎಲ್‌ಬಿ ರಸ್ತೆಯ ಮಯೂರ ಹೊಯ್ಸಳ ಹೋಟೆಲ್ ಬಳಿಯಿಂದ ಅಂಬಾರಿ ಬಸ್‌ಗಳು ಪ್ರಯಾಣ ಬೆಳೆಸಲಿದ್ದು, ಒಂದು ಟ್ರಿಪ್‌ಗೆ ತಲಾ 40ರಂತೆ 6 ಅಂಬಾರಿ ಬಸ್‌ಗಳಲ್ಲಿ 240 ಮಂದಿ ದೀಪಾಲಂಕಾರ ವೀಕ್ಷಿಸಲಿದ್ದು, ಮೂರೂ ಟ್ರಿಪ್‌ನಿಂದ ದಿನಕ್ಕೆ 720 ಮಂದಿ ಮೈಸೂರು ಸೌಂದರ್ಯವನ್ನು ಕಣ್ತುಂಬಿಕೊಳ್ಳುತ್ತಿದ್ದಾರೆ.

ಅದರಲ್ಲೂ ಅಪ್ಪರ್ ಡೆಕ್ಕರ್ (ಮೇಲ್ಮಹಡಿ)ಗೆ ಅತೀ ಹೆಚ್ಚು ಬೇಡಿಕೆ ಇದ್ದು, ಟಿಕೆಟ್ ದರ 500 ರೂ. ಆಗಿದ್ದರೂ, ಅದರಲ್ಲೇ ಪ್ರಯಾಣಿಸಲು ಹೆಚ್ಚು ಮಂದಿ ಬಯಸುತ್ತಿದ್ದಾರೆ. ಆಸನಗಳು ಸಿಗದಿದ್ದರೂ, ನಿಂತುಕೊಂಡೇ ಪ್ರಯಾಣಿಸುತ್ತೇವೆ ಟಿಕೆಟ್ ಕೊಡಿ ಎಂದು ಜನರು ಒತ್ತಾಯಿಸುತ್ತಿರುವುದರಿಂದ ಆಸನ ಸಾಮರ್ಥ್ಯಕ್ಕಿಂತಲೂ ಅಧಿಕ ಮಂದಿ ಈ ಅವಕಾಶವನ್ನು ಬಳಸಿಕೊಳ್ಳುತ್ತಿದ್ದಾರೆ. ದಸರಾ ಮಹೋತ್ಸವದ ವೇಳೆ ಭಾರಿ ಬೇಡಿಕೆ ಇರುವುದರಿಂದ ಕೆಎಸ್‌ಟಿಡಿಸಿಯು ಅಂಬಾರಿ ಬಸ್‌ನ ಪ್ರಯಾಣ ದರವನ್ನು ಲೋಯರ್ ಡೆಕ್ಕರ್‌ಗೆ 250 ರೂ. ಹಾಗೂ ಅಪ್ಪರ್ ಡೆಕ್ಕರ್‌ಗೆ ತಲಾ 500 ರೂ.ಗಳಿಗೆ ಪರಿಷ್ಕರಣೆ ಮಾಡಿದೆ. ಮುಖ್ಯಮಂತ್ರಿಗಳು ವಿದ್ಯುತ್ ದೀಪಾಲಂಕಾರದ ಅವಧಿಯನ್ನು ರಾತ್ರಿ 11 ಗಂಟೆವರೆಗೂ ವಿಸ್ತರಿಸುವಂತೆ ಮೌಖಿಕ ಆದೇಶ ನೀಡಿರುವುದರಿಂದ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ (ಸೆಸ್ಕ್)ದ ಅಧಿಕಾರಿಗಳು ಅವಧಿ ವಿಸ್ತರಿಸಿದ್ದಾರೆ.

ಮಯೂರ ಹೊಯ್ಸಳ ಹೋಟೆಲ್ ಬಳಿಯಿಂದ ಹೊರಡುವ ಅಂಬಾರಿ ಡಬಲ್ ಡೆಕ್ಕರ್ ಬಸ್‌ಗಳು, ಹಳೇ ಡಿಸಿ ಕಚೇರಿ, ಕ್ರಾಫರ್ಡ್ ಹಾಲ್, ಓರಿಯಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟ್, ರಾಮಸ್ವಾಮಿ ಸರ್ಕಲ್, ಚಾಮರಾಜ ಜೋಡಿ ರಸ್ತೆ, ಸರ್ಕಾರಿ ಸಂಸ್ಕೃತ ಪಾಠಶಾಲೆ ಸರ್ಕಲ್, ಅರಮನೆ ದಕ್ಷಿಣ ದ್ವಾರ, ಜಯಮಾರ್ತಾಂಡ ದ್ವಾರ, ಹಾರ್ಡಿಂಜ್ ಸರ್ಕಲ್, ಕೆಆರ್. ಸರ್ಕಲ್, ಸಯ್ಯಾಜಿರಾವ್ ರಸ್ತೆ, ಸರ್ಕಾರಿ ಆಯುರ್ವೇದ ಕಾಲೇಜು ಸರ್ಕಲ್, ಮೈಸೂರು ಮೆಡಿಕಲ್ ಕಾಲೇಜು, ರೈಲ್ವೆ ನಿಲ್ದಾಣ ಸರ್ಕಲ್ ಮೂಲಕ ಮರಳಿ ಮಯೂರ ಹೊಯ್ಸಳ ಹೋಟೆಲ್ ತಲುಪಲಿವೆ.

ಮೈಸೂರು ಮಿತ್ರ

ನೆರೆದವರಲ್ಲಿ ಭಕ್ತಿ-ಭಾವ ತಂದ 'ಕೈವಾರ ತಾತಯ್ಯ'ಅನುಭಾವ ಪದಗಳು, ಮನಸೆಳೆದ ದೇಶಿಯ ನೃತ್ಯಗಳು



ಬೆಂಗಳೂರಿನ ಆಯನಾ ಡ್ಯಾನ್ಸ್ ಕಂಪನಿಯ ಕಲಾವಿದರು ಪ್ರಸ್ತುತ ಪಡಿಸಿದ ಭಾರತೀಯ ನೃತ್ಯ ವೈವಿಧ್ಯತೆ



ಮೈಸೂರು ಅರಮನೆ ಆವರಣ ತುಂತುರು ಮಳೆ ಸಂದರ್ಭದಲ್ಲಿ ಕಂಡು ಬಂದ ದೃಶ್ಯ


ಮೈಸೂರು, ಅ.17(ಎಸ್‌ಪಿಎನ್)- ಅರಮನೆ ಅಂಗಳದಲ್ಲಿ 'ತಾಳ-ಗಾನ-ಯಾನ'ದಲ್ಲಿ ಮಿಂದೆದ್ದ ಸಂಗೀತ ಪ್ರಿಯರು, 'ಕೈವಾರ ತಾತಯ್ಯನ' ಅನುಭಾವ ಪದಗಳನ್ನು ಕೇಳಿ ಭಕ್ತಿ ಭಾವದಲ್ಲಿ ತೇಲಿದರು. ಜತೆಗೆ ಮಹಿಳಾ ಕಲಾವಿದರಿಂದ 'ಡೊಳ್ಳು ಕುಣಿತ' ಮತ್ತು 'ಪೂಜಾ ಕುಣಿತ' ವೇದಿಕೆಗೆ ಹೊಸ ಕಳೆ ತಂದುಕೊಟ್ಟಿತಲ್ಲದೆ, ತುಂತುರು ಮಳೆ ಹನಿಯಲ್ಲೆ 'ಕಥಕ್ ಸಂಭ್ರಮ' ಹಾಗೂ ವೈವಿಧ್ಯಮಯ ಭಾರತೀಯ ನೃತ್ಯ ಪ್ರಾಕಾರಗಳು ಮನಸೂರೆಗೊಂಡವು.

ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಸೋಮವಾರ ಅರಮನೆ ಆವರಣದಲ್ಲಿ ನಡೆದ ಎರಡನೇ ದಿನದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಬೆಂಗಳೂರಿನ ವಿದ್ವಾನ್ ಹರಿ ಮತ್ತು ವಿದುಷಿ ಚೇತನ ನೇತೃತ್ವದ ತಂಡ 'ಕಥಕ್ ನೃತ್ಯ'ವನ್ನು ತುಂತುರು ಮಳೆಯಲ್ಲೇ ಪ್ರದರ್ಶಿಸಿ, ನೃತ್ಯ ಪ್ರಿಯರ ಹೃದಯ ಕದ್ದರು. ಬೆಂಗಳೂರಿನ ಆಯನಾ ಡ್ಯಾನ್ಸ್ ಕಂಪನಿಯ ಕಲಾವಿದರು ಪ್ರಸ್ತುತಪಡಿಸಿದ ಭಾರತೀಯ ನೃತ್ಯ ವೈವಿಧ್ಯತೆ ಪ್ರಮುಖ ಆಕರ್ಷಣೆಯಾಯಿತು.

ಅರಮನೆ ದೀಪ ಬೆಳಕಿನಲ್ಲಿ ಹಿರಿಯ ಜಾನಪದ ಗಾಯಕ ಪಿಚ್ಚಳ್ಳಿ ಶ್ರೀನಿವಾಸ್ ಅವರ ಸಿರಿ ಕಂಠದಲ್ಲಿ ಮೂಡಿ ಬಂದ 'ಎಲ್ಲಿಂದ ಬಂದೆ ದುಂಬಿಯೇ'... 'ಎಲ್ಲಿ ಹೋದೆ ಪ್ರಾಯವೇ'... 'ಜಾತಿಯಲ್ಲಿ ಕೀಳು ಯಾವುದು'... 'ಹೊಸದೊಂದು ಮೀನು'... 'ಬಿದಿರೆ ನೀನ್ಯಾರಿಗಾದವಳು'.. ಅನುಭಾವ ಪದ ಸೇರಿದಂತೆ ಕೈವಾರ ತಾತಯ್ಯನ ಅನುಭಾವ ಪದಗಳನ್ನು ಹಾಡಿದರು. ಇದಕ್ಕೆ ಸಹ ಕಲಾವಿದರು ವಾದ್ಯಗಳನು ನುಡಿಸಿ ಸಹಕಾರ ನೀಡಿದರು.

ವಿದ್ವಾನ್ ಡಾ.ದುಂಡಯ್ಯ ಪೂಜೇರ ತಂಡದ ಸದಸ್ಯರು, 'ತಾಳ-ಗಾನ-ಯಾನ' ಪರಿಕಲ್ಪನೆಯಲ್ಲಿ ಶಾಸ್ತ್ರೀಯ ವಾದ್ಯಗಳಲ್ಲಿ ಪ್ರಮುಖವಾದ ತಬಲವನ್ನು ನುಡಿಸುತ್ತಾ ಭಕ್ತಿ ಪ್ರಧಾನವಾದ ಗೀತೆಯನ್ನು ಹಾಡಿ, 'ಜಿಂಕೆ ನಡಿ'ಗೆಗೆ ತಕ್ಕಂತೆ ತಬಲದ ತಾಳದ ಸಂಯೋಜಿಸಿದ ಶಾಸ್ತ್ರೀಯ ವಾದ್ಯ ವೃಂದ ಕಛೇರಿ ಪ್ರೇಕ್ಷಕರು ತಲೆದೂಗುವಂತೆ ಮಾಡಿತು.

ಜಾನಪದ ಕಲಾವಿದೆ ರಮ್ಯ ಮತ್ತು ತಂಡ ಡೊಳ್ಳು ಕುಣಿತ ಪ್ರಸ್ತುತ ಪಡಿಸಿದರೆ, ಸವಿತಾ ಚಿರು ಕುನ್ನಯ್ಯ ಅವರು ಪೂಜಾ ಕುಣಿತ ಪ್ರಸ್ತುತ ಪಡಿಸಿ ನೋಡುಗರು ಸಹ ಕುಣಿದು ಕುಪ್ಪಳಿಸುವಂತೆ ಮಾಡಿದರು.



ಮೈಸೂರು ಅರಮನೆ ಸಾಂಸ್ಕೃತಿಕ ವೇದಿಕೆಯಲ್ಲಿ ಜಾನಪದ ಕಲಾವಿದೆ ರಮ್ಯ ಹಾಗೂ ಸವಿತಾ ಚಿರು ಕುನ್ನಯ್ಯ ಡೊಳ್ಳು ಕುಣಿತ ದೃಶ್ಯ



ವಿದ್ವಾನ್ ಡಾ.ದುಂಡಯ್ಯ ಪೂಜೇರ ನೇತೃತ್ವದ ತಂಡದವರು 'ತಾಳ-ಗಾನ-ಯಾನ' ಪರಿಕಲ್ಪನೆಯಲ್ಲಿ ಶಾಸ್ತ್ರೀಯ ವಾದ್ಯ ವೃಂದ ಕಛೇರಿ ನಡೆಸಿಕೊಟ್ಟರು.



ಬೆಂಗಳೂರಿನ ವಿದ್ವಾನ್ ಹರಿ ಮತ್ತು ವಿದುಷಿ ಚೇತನ ನೇತೃತ್ವದ ತಂಡದವರು 'ಕಥಕ್ ನೃತ್ಯ'ವನ್ನು ತುಂತುರು ಮಳೆಯಲ್ಲೇ ಪ್ರದರ್ಶಿಸಿದರು.

ಸಿ.ಎಂ.ಇಬ್ರಾಹಿಂ ಒರಿಜಿನಲ್ ಎಂದು ಬೋರ್ಡ್ ಹಾಕಿಕೊಳ್ಳಲಿ!

ಮಾಜಿ ಸಿಎಂ ಕುಮಾರಸ್ವಾಮಿ ಖಡಕ್ ಪ್ರತಿಕ್ರಿಯೆ

ಬೆಂಗಳೂರು,ಅ.17-ಸಿ.ಎಂ.ಇಬ್ರಾಹಿಂ ಅವರೇ ಒರಿಜಿನಲ್ ಎಂದು ಬೋರ್ಡ್ ಹಾಕಿಕೊಳ್ಳಲಿ. ಉಚ್ಚಾಟನೆಯಾದರೂ ಮಾಡಲಿ, ಏನಾದರೂ ಮಾಡಿಕೊಳ್ಳಲಿ, ಅವರಿಗೆ ಬಿಟ್ಟಿದ್ದು ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ತಿರುಗೇಟು ನೀಡಿದ್ದಾರೆ. 'ಒರಿಜಿನಲ್ ಜೆಡಿಎಸ್ ನಮ್ಮದೇ, ಅಧ್ಯಕ್ಷ ಸ್ಥಾನದಿಂದ ನನ್ನನ್ನು ತೆಗೆಯಲು ಆಗಲ್ಲ' ಎಂಬ ಸಿ.ಎಂ. ಇಬ್ರಾಹಿಂ ಹೇಳಿಕೆಗೆ ಪ್ರತಿಕ್ರಿಯಿಸಿದ ಕುಮಾರಸ್ವಾಮಿ, ಸಿ.ಎಂ.ಇಬ್ರಾಹಿಂ ಫ್ರೀ ಇದ್ದಾರೆ. ಏನೂ ಬೇಕಾದರೂ ಮಾತನಾಡಲಿ, ಉಚ್ಚಾಟನೆಯಾದರೂ ಮಾಡಲಿ, ಏನಾದರೂ ಮಾಡಿಕೊಳ್ಳಲಿ. ಅವರಿಗೆ ಬಿಟ್ಟಿದ್ದು. ನಾವು ಎಲ್ಲವನ್ನೂ ಸರಿ ಮಾಡುತ್ತೇವೆ. ನಮ್ಮ ಪಕ್ಷದ ಹಿರಿಯ ನಾಯಕರು ಈ ಬಗ್ಗೆ ನಿರ್ಧಾರ ಕೈಗೊಳ್ಳುತ್ತಾರೆ ಎಂದರು.

ಲೋಕಸಭಾ ಚುನಾವಣೆಗೆ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಳ್ಳುವ ಪಕ್ಷದ ನಾಯಕತ್ವದ ನಿರ್ಧಾರದಿಂದ ಅಸಮಾಧಾನಗೊಂಡಿರುವ ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ 'ಜೆಡಿಎಸ್ ಒರಿಜಿನಲ್ ನಮ್ಮದೇ, ನಾವು ಬಿಜೆಪಿಗೆ ಸಪೋರ್ಟ್ ಮಾಡಲ್ಲ, ನಾವು ಕಾಂಗ್ರೆಸ್‌ಗೆ ಬೆಂಬಲ ನೀಡುತ್ತೇವೆ. ನಾನು ಪ್ರತ್ಯೇಕವಾಗಿ ಕೋರ್ ಕಮಿಟಿ ರಚನೆ ಮಾಡುತ್ತೇನೆ ಎಂದು ಸ್ಫೋಟಕ ಹೇಳಿಕೆ ನೀಡಿದ್ದರು.

ಅತ್ಯುತ್ತಮ ರೀತಿ ಬೊಂಬೆ ಜೋಡಣೆಗೆ ಪಾಲಿಕೆಯಿಂದ ಪುರಸ್ಕಾರ



ಮೈಸೂರು, ಅ.17(ಎಸ್‌ಬಿಡಿ)- ಈ ಬಾರಿ ಮನೆ ಮನೆ ದಸರಾಗೆ ಅವಕಾಶವಿಲ್ಲದ ಕಾರಣ ದಸರಾ ಬೊಂಬೆ ಕೂರಿಸುವವರನ್ನು ಪುರಸ್ಕರಿಸಿ ಪ್ರೋತ್ಸಾಹಿಸಲು ಮೈಸೂರು ನಗರ ಪಾಲಿಕೆ ಮುಂದಾಗಿದೆ.

ಬರದ ಹಿನ್ನೆಲೆಯಲ್ಲಿ ಈ ಬಾರಿ ಸಾಂಪ್ರದಾಯಿಕವಾಗಿ ದಸರಾ ಆಚರಿಸುತ್ತಿರುವುದರಿಂದ ಪ್ರತಿ ಬಾರಿ ಮನೆ ಮನೆ ದಸರಾಗೆ ಅವಕಾಶವಾಗಲಿಲ್ಲ. ಹಾಗಾಗಿ ಬೊಂಬೆ ಕೂರಿಸಿ, ಪೂಜಿಸುವ ಸಂಪ್ರದಾಯವನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಕಾರ್ಯಕ್ರಮ ರೂಪಿಸಲಾಗಿದೆ. ಭಾಗವಹಿಸಿದವರಲ್ಲಿ ತುಂಬಾ ಚೆನ್ನಾಗಿ ಬೊಂಬೆ ಕೂರಿಸಿರುವ 10 ಮಂದಿಗೆ ಪ್ರಥಮ, 10 ಮಂದಿಗೆ ದ್ವಿತೀಯ ಹಾಗೂ 5 ಮಂದಿಗೆ ತೃತೀಯ ಸೇರಿ ಒಟ್ಟು 25 ಮಂದಿಗೆ ಬಹುಮಾನ ಹಾಗೂ ಭಾಗವಹಿಸುವ ಎಲ್ಲರಿಗೂ ಪ್ರಶಸ್ತಿ ಪತ್ರ ನೀಡಲು ನಿರ್ಧರಿಸಲಾಗಿದೆ.

ಇದಕ್ಕಾಗಿ ಪರಿಸರ ಇಂಜಿನಿಯರ್‌ಗಳ ನೇತೃತ್ವದಲ್ಲಿ ಆರೋಗ್ಯ ನಿರೀಕ್ಷಕ(ಹೆಲ್ತ್ ಇನ್ಸ್‌ಪೆಕ್ಟರ್)ರನ್ನು ನಿಯೋಜನೆ ಮಾಡಲಾಗಿದೆ. ಇವರನ್ನು ಸಂಪರ್ಕಿಸಿದರೆ ಅಂತಹವರ ಮನೆಗೆ ತೆರಳಿ ನೋಂದಣಿ ಮಾಡಿಕೊಳ್ಳುತ್ತಾರೆ ಎಂದು ಮೇಯರ್ ಶಿವಕುಮಾರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಇವರನ್ನು ಸಂಪರ್ಕಿಸಿ: ಬಿ.ಹೆಚ್. ಜ್ಯೋತಿ(9916694234) ನೇತೃತ್ವದಲ್ಲಿ 49, 50, 51, 52, 54, 55, 61ನೇ ವಾರ್ಡ್‌ಗಳಿಗೆ ಮೂವರು ಹೆಲ್ತ್ ಇನ್ಸ್‌ಪೆಕ್ಟರ್‌ಗಳು, ಎನ್.ಮಹದೇವಮ್ಮ (7795380993) ನೇತೃತ್ವದಲ್ಲಿ 60, 48, 59, 62, 63, 56, 64, 65ನೇ ವಾರ್ಡ್‌ಗೆ ಮೂವರು, ಅರ್ಪಿತಾ(9591787335) ನೇತೃತ್ವದಲ್ಲಿ 43, 44, 42, 47, 45, 58, 46, 58 ನೇ ವಾರ್ಡ್‌ಗೆ ನಾಲ್ವರು, ಶ್ರೀದೇವಿ(8147240348) ನೇತೃತ್ವದಲ್ಲಿ 19, 21, 6, 18, 22 ಹಾಗೂ ವಿಜಯ ನಗರ 3ನೇ ಹಂತಕ್ಕೆ ಇಬ್ಬರು, ಚಿನ್ಮಯ್ (9902975701) ನೇತೃತ್ವದಲ್ಲಿ 3, 5, 4, 7, 1, 2, 20ನೇ ವಾರ್ಡ್‌ಗಳಿಗೆ ಮೂವರು, ಎಸ್.ಮೈತ್ರಿ(8105739384) ನೇತೃತ್ವದಲ್ಲಿ 23, 24, 25, 40, 41ನೇ ವಾರ್ಡ್‌ಗೆ ಇಬ್ಬರು, ಎಂ.ಎನ್.ನವೀನ್ (9480413750) ನೇತೃತ್ವದಲ್ಲಿ 8, 9, 27, 17, 26, 28ಕ್ಕೆ ಮೂವರು, ಲೋಕೇಶ್ವರಿ(9036716494) ನೇತೃತ್ವದಲ್ಲಿ 15, 33, 13, 16, 29, 10, 11, 12, 14ಕ್ಕೆ ನಾಲ್ವರು ಹಾಗೂ ನೆಫಿಯಾ(9066849003) ನೇತೃತ್ವದಲ್ಲಿ 32, 38, 30, 34, 35, 36, 31, 39, 37 ಹಾಗೂ 53ನೇ ವಾರ್ಡ್‌ಗೆ ಐವರನ್ನು ನಿಯೋಜಿಸಲಾಗಿದೆ.

ಇಂದು ಕಾವೇರಿ ಸಂಕ್ರಮಣ

ಮೈಸೂರು, ಅ. 17- ಮೈಸೂರು ಕೊಡವ ಸಮಾಜದ ವತಿಯಿಂದ ವಿಜಯನಗರ 1ನೇ ಹಂತದಲ್ಲಿರುವ ಕೊಡವ ಸಮಾಜದ ಆವರಣದಲ್ಲಿ ಅ. 18 ರಂದು ಕಾವೇರಿ ಸಂಕ್ರಮಣ ಹಬ್ಬ ಆಚರಿಸಲಾಗುತ್ತಿದೆ. ಅಂದು ಬೆಳಗ್ಗೆ 10.30ಕ್ಕೆ ಕಣಿ ಪೂಜಾ ನಡೆಯಲಿದ್ದು, ಭಾಗವಹಿಸುವ ಎಲ್ಲಾ ಭಕ್ತಾದಿಗಳಿಗೂ ಪವಿತ್ರ ತೀರ್ಥವನ್ನು ವಿತರಿಸಲಾಗುವುದು. ಎಲ್ಲಾ ಭಕ್ತಾದಿಗಳು ಬೆಳಗ್ಗೆ 10.30ಕ್ಕೆ ಕಣಿ ಪೂಜಾ ಮತ್ತು ಹಬ್ಬದ ಸಂಭ್ರಮದಲ್ಲಿ ಭಾಗವಹಿಸಿ ಪವಿತ್ರ ತೀರ್ಥವನ್ನು ಸ್ವೀಕರಿಸುವಂತೆ ಕೋರಲಾಗಿದೆ.

ಕೊಡಗು ಗೌಡ ಸಮಾಜ

ಮೈಸೂರಿನ ಕೊಡಗು ಗೌಡ ಸಮಾಜದ ವತಿಯಿಂದ ವಿಜಯನಗರ 2ನೇ ಹಂತ, ರೈಲ್ವೆ ಬಡಾವಣೆಯಲ್ಲಿರುವ ಸಮಾಜದ ಭವನದಲ್ಲಿ ಅ. 18 ರಂದು ಮಧ್ಯಾಹ್ನ 3.30ಕ್ಕೆ ಶ್ರೀ ಕಾವೇರಿ ತುಲಾ ಸಂಕ್ರಮಣ ಅಂಗವಾಗಿ ಶ್ರೀ ಕಾವೇರಿ ಪೂಜೆ, ಶ್ರೀ ಕಾವೇರಿ ತೀರ್ಥ ವಿತರಣೆ ಮತ್ತು ಪ್ರಸಾದ ವಿನಿಯೋಗ ಹಮ್ಮಿ ಕೊಳ್ಳಲಾಗಿದೆ. ಕುಲಬಾಂಧವರು ಸಮಯಕ್ಕೆ ಸರಿಯಾಗಿ ಆಗಮಿಸಿ, ಪೂಜಾ ಕೈಂಕರ್ಯಗಳಲ್ಲಿ ಪಾಲ್ಗೊಂಡು ಶ್ರೀಮಾತೆಯ ತೀರ್ಥ ಪ್ರಸಾದ ಸ್ವೀಕರಿಸಬೇಕೆಂದು ಕೋರಲಾಗಿದೆ.

ಮನೆ ಮನೆ ಕವಿಗೋಷ್ಠಿ, ಅನುಭವ ಹಂಚಿಕೆಯ 119ನೇ ಕಾರ್ಯಕ್ರಮ

ಮೈಸೂರು, ಅ. 17- ಮೈಸೂರಿನ ಅಭಿರುಚಿ ಬಳಗ, ಎನ್.ವಿ. ರಮೇಶ್ ಕಲಾಬಳಗ, ಆಸಕ್ತಿ ಪ್ರಕಾಶನ ಹಾಗೂ ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತಿನ ಮೈಸೂರು ವಿಭಾಗದ ವತಿಯಿಂದ ದಸರೆಯ ಅಂಗವಾಗಿ 'ಮನೆ ಮನೆ ಕವಿಗೋಷ್ಠಿ ಮತ್ತು ಅನುಭವ ಹಂಚಿಕೆ'ಯ 119ನೇ ಕಾರ್ಯಕ್ರಮವನ್ನು ಮೈಸೂರಿನ ವಿವೇಕಾನಂದನಗರದ ಎಂ.ಆರ್. ಆನಂದ ಮತ್ತು ಶ್ರೀಮತಿ. ಪದ್ಮಾ ಆನಂದ್ ಮನೆಯಲ್ಲಿ ಏರ್ಪಡಿಸಲಾಗಿತ್ತು. ಸದ್ವಿದ್ಯಾ ಶಾಲೆಯ ಪ್ರಾಚಾರ್ಯರಾದ ಸುಮಾ ಪಂಚನಹಳ್ಳಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಆಧ್ಯಾತ್ಮ ಚಿಂತಕಿ ಸುಶೀಲಾ ಶ್ಯಾಮಸುಂದರನ್, ವಿವಿಧ ಸಂಸ್ಥೆಗಳ ಸಂಸ್ಥಾಪಕ ಅಧ್ಯಕ್ಷರಾದ ಎನ್.ವಿ. ರಮೇಶ್ ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ 40 ಜನ ಭಾಗವಹಿಸಿ ತಮ್ಮ ಅನುಭವಗಳನ್ನು ಹಂಚಿಕೊಂಡರು. ಇವರಲ್ಲಿ ಮುಖ್ಯವಾಗಿ ಕೆಎಸ್‌ಆರ್‌ಟಿಸಿಯ ಮೀನಾಕ್ಷಿ, ನಾರಾಯಣರಾವ್, ವಿಜಯ ಲಕ್ಷ್ಮಿ ಭಟ್, ಜಿ.ಕೆ. ಕುಲಕರ್ಣಿ, ನಾಗರಾಜು, ಪ್ರೊ. ಆರ್.ಎ. ಕುಮಾರ್, ಕೆ.ವಿ. ವಾಸು, 90ರ ಹರೆಯದ ಇಂದಿರಾ ಪಾಟೀಲ್, ಬಿ.ಆರ್. ನಾಗರತ್ನ, ಲತಾ ಮೋಹನ್, ಮೋಹನ್‌ಕುಮಾರ್, ಮಮತಾ ಸುಧೀಂದ್ರ ಉಮಾ ರಮೇಶ್, ಕೋಡಿ ಎಂ. ಲೋಲಾಕ್ಷಿ, ಅಲಮೇಲಮ್ಮ ಮರಿಗೌಡ, ಸುಮತಿ ಸುಬ್ರಹ್ಮಣ್ಯ, ಕೆ.ಎನ್. ಸುಬ್ಬರಾವ್, ಪ್ರಭಾಶಾಸ್ತ್ರಿ, ಪದ್ಮಾ ಆನಂದ್ ಹಾಗೂ ಎಂ.ಆರ್. ಆನಂದ್ ತಮ್ಮ ಜೀವನದಲ್ಲಿ ತಾವು ಮರೆಯಲಾಗದ ಸನ್ನಿವೇಶಗಳು ಹಾಗೂ ಹೆಜ್ಜೆಹೆಜ್ಜೆಗೆ ಕಲಿತ ಪಾಠಗಳ ಬಗ್ಗೆ ನಿವೇದಿಸಿದರು.



ಮೈಸೂರು ದಸರಾ ಮಹೋತ್ಸವದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ನೇಮಕಗೊಂಡ ಕೆಪಿಸಿಸಿ ಸದಸ್ಯರಾದ ನಜರ್‌ಬಾದ್ ನಟರಾಜ್ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಅಪರ ಜಿಲ್ಲಾಧಿಕಾರಿ ಪಿ.ಶಿವರಾಜ್, ಮೈಸೂರು ಮಹಾನಗರ ಪಾಲಿಕೆಯ ಹೆಚ್ಚುವರಿ ಆಯುಕ್ತರಾದ ರೂಪ, ಸಹಾಯಕ ಕಾರ್ಯಪಾಲಕ ಕುಬೇರಪ್ಪ, ಸಮಿತಿಯ ಉಪಾಧ್ಯಕ್ಷ ಈಶ್ವರ್ ಚೆಕ್ಕಡಿ, ಶೌಕತ್ ಪಾಷಾ ಹಾಗೂ ಸಮಿತಿಯ ಸದಸ್ಯರು ಹಾಜರಿದ್ದರು.

ರಾಜ್ಯ ಮಟ್ಟದ ಹಾಲು ಕರೆಯುವ ಸ್ಪರ್ಧೆ

ಮೈಸೂರು,ಅ.17-ಮೈಸೂರು ದಸರಾ ನಾಡಹಬ್ಬದ ಪ್ರಯುಕ್ತ ಹಾಲು ಕರೆಯುವ ಸ್ಪರ್ಧೆಯನ್ನು ಅ.21ರಂದು ಬೆಳಿಗ್ಗೆ 6.30 ಗಂಟೆಗೆ ಜೆ.ಕೆ ಮೈದಾನದಲ್ಲಿ ಏರ್ಪಡಿಸಲಾಗಿದ್ದು, ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸುವ ಕಾರ್ಯಕ್ರಮವನ್ನು ಅಂದು ಸಂಜೆ 6.30 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅಧ್ಯಕ್ಷತೆ ವಹಿಸಲಿದ್ದು, ಬಹುಮಾನ ವಿತರಣೆಯನ್ನು ಪಶುಸಂಗೋಪನಾ ಹಾಗೂ ಹಾಗೂ ರೇಷ್ಮೆ ಖಾತೆ ಸಚಿವರು ಹಾಗೂ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ ವೆಂಕಟೇಶ್ ಅವರು ನಡೆಸಿಕೊಡಲಿದ್ದಾರೆ.

ಅಂತರ ರಾಜ್ಯ ಪ್ರವಾಸಿಗರ ವಾಹನಕ್ಕೆ ತೆರಿಗೆ ವಿನಾಯ್ತಿ

ಮೈಸೂರು, ಅ.17- ನಾಡಹಬ್ಬ ಮೈಸೂರು ದಸರಾ ಮಹೋತ್ಸವ ಹಾಗೂ ಶ್ರೀರಂಗಪಟ್ಟಣ ತಾಲೂಕು ವ್ಯಾಪ್ತಿಯ ಕೆಆರ್‌ಎಸ್ ಅಣೆಕಟ್ಟೆ ವೀಕ್ಷಣೆಗೆ ಇತರೆ ರಾಜ್ಯಗಳಿಂದ ಬರುವ ಪ್ರವಾಸಿಗರ ವಾಹನಗಳಿಗೆ ಮಾತ್ರ ಕರ್ನಾಟಕ ಮೋಟಾರು ವಾಹನ ತೆರಿಗೆ ಅಧಿನಿಯಮ-1957ರ ಕಲಂ 16(1) ಅಡಿಯಲ್ಲಿ ಹಾಗೂ ರಾಜ್ಯದ ವಾಹನಗಳ ಮೋಟಾರು ವಾಹನ ಕಾಯ್ದೆ 1988ರ ಸೆಕ್ಷನ್ 88ರ ಸಬ್ ಸೆಕ್ಷನ್(8)ರ(ಕೇಂದ್ರ ಕಾಯ್ದೆ 59/88) ಅನುಸಾರ ಅ.16 ರಿಂದ 24ರವರೆಗೆ ತೆರಿಗೆ ಪಾವತಿಯಿಂದ ವಿನಾಯಿತಿ ನೀಡಿ ಸಾರಿಗೆ ಇಲಾಖೆ ಅಧೀನ ಕಾರ್ಯದರ್ಶಿ ವಿ.ಎಸ್.ಪುಷ್ಪ ಅಧಿಸೂಚನೆ ಹೊರಡಿಸಿದ್ದಾರೆ.

ಅ.20 ರಂದು ಕೃಷಿ ವಸ್ತು ಪ್ರದರ್ಶನ

ಮೈಸೂರು,ಅ.17- ಮೈಸೂರು ದಸರಾ ನಾಡಹಬ್ಬದ ಪ್ರಯುಕ್ತ ಅ.20 ರಂದು ಶುಕ್ರವಾರ ಬೆಳಗ್ಗೆ 11 ಗಂಟೆಗೆ ಜೆ.ಕೆ ಮೈದಾನದಲ್ಲಿ ಕೃಷಿ ವಸ್ತು ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮವನ್ನು ಸಂಗೋಪನಾ ಹಾಗೂ ರೇಷ್ಮೆ ಖಾತೆ ಸಚಿವರು ಹಾಗೂ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಉದ್ಘಾಟಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅವರು ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಮಾಜ ಕಲ್ಯಾಣ ಇಲಾಖೆ ಸಚಿವರು ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ ಮಹದೇವಪ್ಪ, ಕೃಷಿ ಸಚಿವರು ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚೆಲುವರಾಯಸ್ವಾಮಿ ಅವರು ಭಾಗವಹಿಸುವರು.



ಮಹಿಳಾ ಮತ್ತು ಮಕ್ಕಳ ದಸರಾದಲ್ಲಿ ಭರಪೂರ ಮನರಂಜನೆ

●ಮನಸೂರೆಗೊಂಡ 'ಮ್ಯಾಜಿಕ್ ಶೋ' ●ಮಕ್ಕಳ ಸಮೂಹ ನೃತ್ಯ



ಮೈಸೂರು, ಅ.17(ಎಸ್‌ಪಿಎನ್)- ಮೈಸೂರು ದಸರಾ ಮಹೋತ್ಸವದ ಮಹಿಳಾ ಮತ್ತು ಮಕ್ಕಳ ದಸರಾ ಉಪಸಮಿತಿಯು ಜೆ.ಕೆ.ಮೈದಾನದಲ್ಲಿ ಆಯೋಜಿಸಿದ್ದ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಕಲಾವಿದೆ ಸುಮಾ ರಾಜಕುಮಾರ್ ನಡೆಸಿಕೊಟ್ಟ ಮಿಮಿಕ್ರಿ ಕಾರ್ಯಕ್ರಮ(ನಗೆಹಬ್ಬ) ಹಾಗೂ ಮಾತನಾಡುವ ಗೊಂಬೆಯ 'ಮ್ಯಾಜಿಕ್ ಶೋ' ಸಭಿಕರ ಮನಸೂರೆಗೊಂಡಿತು.


ತದನಂತರ ಪಿರಿಯಾಪಟ್ಟಣದ ಕುಮಾರ್ ಸಂಗಡಿಗರು ಡೊಳ್ಳು ಕುಣಿತ, ಕಂಸಾಳೆ ನೃತ್ಯ ಪ್ರದರ್ಶಿಸಿದರು. ನೃತ್ಯ ವಿದ್ಯಾಪೀಠದ ವಿದ್ಯಾರ್ಥಿಗಳಿಂದ ಪ್ರದರ್ಶನಗೊಂಡ ಭರತ ನಾಟ್ಯ ನೃತ್ಯ ಪ್ರಿಯರ ಮನಸೆಳೆಯಿತು. ಇದೇ ವೇದಿಕೆಯಲ್ಲಿ 'ಗಿಚ್ಚಿ ಗಿಲಿ ಗಿಲಿ' ಹೆಸರಾದ ಹಾಸ್ಯ ಕಲಾವಿದ ಚಂದ್ರಪ್ರಭ ಮತ್ತು ವಿನೋದ್ ಗೊಬ್ಬರಗಾಲ ಅವರ ನಗೆಹಬ್ಬ ಸಭಿಕರನ್ನು ನಗೆಗಡಲಿನಲ್ಲಿ ತೇಲುವಂತೆ ಮಾಡಿತು. ಅಂತೆಯೇ ಮೈಸೂರು ಗ್ರಾಮಾಂತರ ಮತ್ತು ನಗರ ಶಿಶು ಅಭಿವೃದ್ಧಿ ಯೋಜನೆಯಡಿ ಅಂಗನವಾಡಿ ಕಾರ್ಯಕರ್ತೆಯರು ನಡೆಸಿಕೊಟ್ಟ ವಿವಿಧ ಜಾನಪದ ಸಮೂಹ ನೃತ್ಯ ಎಲ್ಲರ ಮನಸೆಳೆದವು.

ವಿವಿಧ ಜಿಲ್ಲೆಗಳ ಮಹಿಳಾ ಸಂಘಗಳು: ಮೈಸೂರು ಜಿಲ್ಲೆಯ ಶ್ರೀ ತ್ರಿಪುರ ಸುಂದರಿ ಶ್ರೀ ಶಕ್ತಿ ಸಂಘ, ಮೆಲ್ಲಹಳ್ಳಿಯ ಶ್ರೀ ಭಾಗ್ಯ ಲಕ್ಷ್ಮಿ ಶ್ರೀ ಶಕ್ತಿ ಮಹಿಳಾ ಸ್ವಸಹಾಯ ಸಂಘ, ಕಸ್ತೂರಿ ಸ್ತ್ರೀ ಸಂಘ, ಶ್ರೀ ಪುಣ್ಯಕೋಟಿ ಸ್ತ್ರೀ ಶಕ್ತಿ ಸ್ವಸಹಾಯ ಸಂಘ, ಆರ್.ಟಿ. ಫ್ಯಾನ್ಸಿ ಕಲೆಕ್ಷನ್, ಮೈಸೂರು ಶ್ರೀ ಸಿರಿ ಮಹಿಳಾ ಸ್ವಸಹಾಯ ಸಂಘ, ಚನ್ನಪಟ್ಟಣದ ಶ್ರೀ ಶಾರದಾದೇವಿ ಸ್ವಸಹಾಯ ಸಂಘ, ಅಖಿಲಾ ಭಾರತೀಯ ಗ್ರಾಮ ವಿಕಾಸ ಪರಿಷತ್, ಶ್ರೀ ಅನ್ನಪೂರ್ಣೇಶ್ವರಿ ಸ್ತ್ರೀ ಶಕ್ತಿ ಸ್ವ ಸಹಾಯ ಸಂಘ, ತಿಪಟೂರು ಶ್ರೀ ಕೊಲ್ಲಾಪುರದಮ್ಮ ಸ್ತ್ರೀ ಶಕ್ತಿ ಸ್ವಸಹಾಯ ಸಂಘ, ಹೆಚ್.ಡಿ. ಕೋಟೆ ತಾಲೂಕು ಸ್ತ್ರೀ ಶಕ್ತಿ ಸ್ವಸಹಾಯ ಸಂಘ, ತಿ.ನರಸೀಪುರ ಸ್ಪಂದನ ತಾಲೂಕು ಒಕ್ಕೂಟ, ಹುಣಸೂರು ಪ್ರಕೃತಿ ಸ್ತ್ರೀ ಶಕ್ತಿ ಸ್ವಸಹಾಯ ಸಂಘ, ಕುರುಬರಹಳ್ಳಿಯ ಶ್ರೀ ಚಾಮುಂಡೇಶ್ವರಿ ಸ್ವಸಹಾಯ ಸಂಘ, ಸರಸ್ವತಿಪುರಂನ ಶ್ವೇತ ಬೊಟಿಕ್, ಶ್ರೀ ಮಂಜುನಾಥ ಕ್ಲಾತ್ ಸೆಂಟರ್, ಸೈಕಲ್ ಪ್ಯೂರ್ ಅಗರಬತ್ತಿ ಮತ್ತು ರಂಗರಾವ್ ಸ್ಮಾರಕ ವಿಕಲಚೇತನ ಶಾಲೆಯ ಮಳಿಗೆ, ಚಾಮುಂಡೇಶ್ವರಿ ಒಕ್ಕೂಟ, ಸ್ತ್ರೀಶಕ್ತಿ ಪ್ರಗತಿ ಸ್ವಸಹಾಯ ಸಂಘ, ಮೈಸೂರು ಚಾಮುಂಡೇಶ್ವರಿ ಸ್ತ್ರೀ ಶಕ್ತಿ ಸ್ವಸಹಾಯ ಸಂಘ, ಬೆಂಗಳೂರು ಕೊಮ್ಮಘಟ್ಟದ ಶ್ರೀ ಮಹಾಲಕ್ಷ್ಮಿ ಸ್ತ್ರೀ ಶಕ್ತಿ ಸ್ವಸಹಾಯ ಸಂಘ, ಗುಬ್ಬಿಯ ಶ್ರೀ ಮಹಾಲಕ್ಷ್ಮಿ ಸ್ತ್ರೀ ಶಕ್ತಿ ಸ್ವಸಹಾಯ ಸಂಘ, ಬೆಂಗಳೂರು ನಾಯಂಡಹಳ್ಳಿಯ ಓಂ ಸ್ತ್ರೀಶಕ್ತಿ ಸ್ವಸಹಾಯ ಸಂಘ, ನಂಜನಗೂಡು ಸ್ನೇಹ ನಗರದ ಸ್ತ್ರೀ ಶಕ್ತಿ ಸಂಘ, ಮೈಸೂರು ಶ್ರೀ ಶಾಂತಿ ಸ್ವಸಹಾಯ ಸಂಘ, ಮಳವಳ್ಳಿಯ ಸಂಜೀವಿನಿ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಘ ಹಾಗೂ ಶ್ರೀ ಪಾರ್ವತಿ ಸ್ತ್ರೀ ಶಕ್ತಿ ಸ್ವಸಹಾಯ ಸಂಘ, ಅರಸೀಕೆರೆ ಶ್ರೀ ಉಡುಸಲಮ್ಮ ಸ್ತ್ರೀ ಶಕ್ತಿ ಸ್ವಸಹಾಯ ಸಂಘ, ನಂಜನಗೂಡು ಲಕ್ಷ್ಮೀದೇವಿ ಸ್ತ್ರೀ ಶಕ್ತಿ ಸ್ವ-ಸಹಾಯ ಸಂಘ, ಮೈಸೂರು ಸ್ವದೇಶಿ ಮಾರಾಟ ಮಳಿಗೆ, ತಿ.ನರಸೀಪುರ ಸ್ಪಂದನ ತಾಲೂಕು ಒಕ್ಕೂಟ, ನೂರ್ ಆರ್ಟ್ & ಕ್ರಾಫ್ಟ್, ಮಂಡ್ಯದ ಶ್ರೀ ಅನ್ನಪೂರ್ಣೇಶ್ವರಿ ಸ್ವಸಹಾಯ ಸಂಘ, ಮೈಸೂರು ಜಿಲ್ಲಾ ಸ್ತ್ರೀ ಶಕ್ತಿ ಒಕ್ಕೂಟ, ರಾಮನಗರದ ಸುಹಾಸಿನಿ ಸ್ವಸಹಾಯ ಗುಂಪು, ಅಪರ್ಣ ಹನಿ ಜೇನು ಸಂಗ್ರಹ ಕೇಂದ್ರ, ಶ್ರೀ ಗುರು ಮಲ್ಲೇಶ್ವರ ಸ್ತ್ರೀ ಶಕ್ತಿ ಸ್ವ ಸಹಾಯ ಸಂಘ, ಬಿಳಿಕೆರೆಯ ಆಸರೆ ಸಂಜೀವಿನಿ ಫುಡ್ ಪ್ರಾಡಕ್ಟ್, ಶ್ರೀ ಮಲ್ಲಿಕಾರ್ಜುನ ಸ್ವಾಮಿ, ಶ್ರೀ ಗೌತಮ ಬುದ್ಧ ಸ್ತ್ರೀ ಶಕ್ತಿ ಸ್ವಸಹಾಯ ಸಂಘ, ಶ್ರೀ ಚಿಕ್ಕ ತಾಯಮ್ಮ ಸ್ತ್ರೀಶಕ್ತಿ ಸ್ವಸಹಾಯ ಸಂಘ ಪಿರಿಯಾಪಟ್ಟಣ, ತಾಲೂಕು ಸ್ತ್ರೀಶಕ್ತಿ ಬ್ಲಾಕ್ ಸೊಸೈಟಿಯ ಮಳಿಗೆಗಳಿಗೆ ಮಹಿಳೆಯರು, ಸಾರ್ವಜನಿಕರು ಭೇಟಿ ನೀಡಿ, ವಿವಿಧ ಉತ್ಪನ್ನಗಳನ್ನು ಖರೀದಿಸುತ್ತಿದ್ದರು.

ಬರಿಗೈಯಲ್ಲಿ ಪೌರಕಾರ್ಮಿಕನಿಂದ ಮ್ಯಾನ್‌ಹೋಲ್ ಶುಚಿ

ಹೆಚ್.ಡಿ.ಕೋಟೆಯ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ತಡವಾಗಿ ಬೆಳಕಿಗೆ ಬಂದ ಪ್ರಕರಣ





ಹೆಚ್.ಡಿ.ಕೋಟೆ, ಅ.17–ಪಟ್ಟಣದ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಶೌಚಾಲಯದ ಮ್ಯಾನ್‌ಹೋಲ್‌ಗೆ ಪೌರಕಾರ್ಮಿಕನನ್ನು ಇಳಿಸಿ ಶುಚಿಗೊಳಿಸಿದ ಪ್ರಕರಣ ತಡವಾಗಿ ಬೆಳಕಿಗೆ ಬಂದಿದ್ದು, ಈ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅ.13ರಂದು ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ಶೌಚಾಲಯದ ಮ್ಯಾನ್‌ಹೋಲ್ ಸ್ವಚ್ಛಗೊಳಿಸಲು ಆಸ್ಪತ್ರೆಯ ಡಿ ಗ್ರೂಪ್ ನೌಕರ ಪರಶುರಾಮಗೆ ಆಸ್ಪತ್ರೆಯ ವೈದ್ಯಾಧಿಕಾರಿ ಡಾ.ಸೋಮಣ್ಣ ಹಾಗೂ ಸ್ಟಾಫ್‌ನರ್ಸ್ ಪರಿಮಳಾ ತಿಳಿಸಿದ್ದಾರೆ. ನಂತರ ಪರಶುರಾಮ ತಮ್ಮ ಸಂಬಂಧಿಕರಾದ ಕೆ.ಆರ್.ನಗರದ ಪೌರಕಾರ್ಮಿಕ ಮುನಿಯಾ ಅವರನ್ನು ಮ್ಯಾನ್‌ಹೋಲ್‌ಗೆ ಇಳಿಸಿ ಶುಚಿ ಮಾಡಿಸಿದ್ದಾನೆ.

ನಂತರ ಶುಚಿ ಮಾಡುವುದನ್ನು ಪರಶುರಾಮ ತನ್ನ ಮೊಬೈಲ್‌ನಲ್ಲಿ ವಿಡಿಯೋ ಮಾಡಿ ಡಾ.ಸೋಮಣ್ಣ ಹಾಗೂ ಪರಿಮಳಾ ಅವರು ನಮ್ಮಿಬ್ಬರನ್ನು ಬಲವಂತವಾಗಿ ಬರಿಗೈಯಲ್ಲಿ ಶೌಚಾಲಯದ ಗುಂಡಿಯನ್ನು ಶುಚಿ ಮಾಡಲು ತಿಳಿಸಿದ್ದಾರೆ ಎಂದು ವಿಡಿಯೋ ಅನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಯಬಿಟ್ಟಿದ್ದಾನೆ.

ಕೆ.ಬಿ.ಓಬಳೇಶ್ ಎಂಬುವವರು ಈ ವಿಡಿಯೋ ಅನ್ನು ಸಫಾಯಿ ಕರ್ಮಚಾರಿ ಆಯೋಗಕ್ಕೆ ಕಳುಹಿಸಿದ್ದಾರೆ. ನಂತರ ಆಯೋಗ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ಜಿಲ್ಲಾಧಿಕಾರಿಗೆ ಕ್ರಮ ವಹಿಸಲು ತಿಳಿಸಿದೆ. ಜಿಲ್ಲಾಧಿಕಾರಿಯ ಸೂಚನೆ ಮೇರೆಗೆ ಮಂಗಳವಾರ ಹುಣಸೂರು ಉಪವಿಭಾಗಾಧಿಕಾರಿ ರುಚಿ ಬಿಂದಾಲ್ ಪಟ್ಟಣದ ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಇದೇ ವೇಳೆ ಸಂಬಂಧಿಸಿದ ಅಧಿಕಾರಿಗಳು ಹಾಗೂ ಪೌರಕಾರ್ಮಿಕರೊಂದಿಗೆ ಸಭೆ ನಡೆಸಿ, ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲು ಸೂಚಿಸಿದರು.

ನಂತರ ಪಟ್ಟಣ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಶಬ್ಬೀರ್ ಹುಸೇನ್ ಅವರು ಪೌರಕಾರ್ಮಿಕ ಮುನಿಯ ಅವರಿಂದ ದೂರು ಪಡೆದು ಸಂಬಂಧಿಸಿದವರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ. ಇದೇ ವೇಳೆ ತಹಶೀಲ್ದಾರ್ ಸಣ್ಣರಾಮಪ್ಪ, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ರಾಮಸ್ವಾಮಿ, ಪುರಸಭಾ ಮುಖ್ಯಾಧಿಕಾರಿ ಸುರೇಶ್, ಡಾ.ರವಿಕುಮಾರ್ ಇದ್ದರು.

> ಮ್ಯಾನ್‌ಹೋಲ್‌ಗೆ ಯಾವುದೇ ರಕ್ಷಣೆ ಇಲ್ಲದೆ ಪೌರಕಾರ್ಮಿಕರನ್ನು ಇಳಿಸಬಾರದು ಎಂದು ಆದೇಶ ಇದ್ದರು ಕೂಡ ಎಚ್.ಡಿ.ಕೋಟೆಯ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಪೌರಕಾರ್ಮಿಕನನ್ನು ಇಳಿಸಿ ಶುಚಿಗೊಳಿಸಿರುವುದು ತಪ್ಪು. ಈ ಪ್ರಕರಣ ಸಂಬಂಧ ಆಸ್ಪತ್ರೆಯ ಶುಚಿಗೊಳಿಸಲು ಗುತ್ತಿಗೆ ಪಡೆದ ಬೆಂಗಳೂರಿನ ಎಸ್‌ಎಲ್‌ಎನ್ ಕಂಪನಿಯ ಗುತ್ತಿಗೆದಾರ ಸಂತೋಷ್ ಕುಮಾರ್, ಆಸ್ಪತ್ರೆಯ ವೈದ್ಯಾಧಿಕಾರಿ ಡಾ.ಸೋಮಣ್ಣ, ನರ್ಸ್ ಪ್ರಮೀಳಾ ಹಾಗೂ 'ಡಿ' ಗ್ರೂಪ್ ನೌಕರ ಪರಶುರಾಮ ವಿರುದ್ಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮುಂದಿನ ಕ್ರಮಕ್ಕೆ ಮೇಲಧಿಕಾರಿಗಳಿಗೆ ವರದಿ ಸಲ್ಲಿಸಲಾಗಿದೆ. ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ನಡೆಯದಂತೆ ಆಸ್ಪತ್ರೆಯ ವೈದ್ಯಾಧಿಕಾರಿಗಳಿಗೆ ಹಾಗೂ ಸಿಬ್ಬಂದಿಗೆ ಎಚ್ಚರಿಕೆ ನೀಡಲಾಗಿದೆ.
>
> - ರುಚಿ ಬಿಂದಾಲ್ ಹುಣಸೂರು ಉಪವಿಭಾಗಾಧಿಕಾರಿ

> ಆಸ್ಪತ್ರೆಯ ವೈದ್ಯಾಧಿಕಾರಿ ಡಾ.ಸೋಮಣ್ಣ ಹಾಗೂ ನರ್ಸ್ ಪರಿಮಳಾ ಅವರು ಯಾವಾಗಲೂ ಆಸ್ಪತ್ರೆಯಲ್ಲಿ ಕೆಲಸ ಮಾಡಿದ ಬಗ್ಗೆ ನನಗೆ ಸಾಕ್ಷಿ ಕೇಳುತ್ತಿದ್ದರು. ಹಾಗಾಗಿ ನಾನು ಮ್ಯಾನ್‌ಹೋಲ್ ಶುಚಿ ಮಾಡಿದ್ದ ವಿಡಿಯೋ ಅನ್ನು ನರ್ಸ್‌ಗೆ ಕಳುಹಿಸಿದೆ. ಅವರು ಗ್ರೂಪ್‌ಗಳಿಗೆ ಹಾಕಿರುವುದು ವೈರಲ್ ಆಗಿದೆ.
>
> -ಪರಶುರಾಮ್ ಡಿ ಗ್ರೂಪ್ ನೌಕರ, ತಾಯಿ ಮತ್ತು ಮಕ್ಕಳ ಆಸ್ಪತ್ರೆ

70ರ ದಶಕದಲ್ಲೇ ದಲಿತ ಚಳವಳಿ ಪ್ರಾರಂಭ



ಸರಗೂರು, ಅ.17–ದಲಿತ ಚಳವಳಿ 70ರ ದಶಕದಿಂದಲೇ ಪ್ರಾರಂಭವಾಗಿ ಬಡವರ ಪರ ಧ್ವನಿಯಾಗಿದೆ ಎಂದು ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಚಾಲಕ ಕೋಟೆ ಬೆಟ್ಟಯ್ಯ ಹೇಳಿದರು.

ಪಟ್ಟಣದ ಅಂಬೇಡ್ಕರ್ ಸಮುದಾಯ ಭವನದಲ್ಲಿ ನಡೆದ ದಸಂಸ ಸಭೆಯಲ್ಲಿ ಮಾತನಾಡಿದ ಅವರು, ದಸಂಸ ಅಂದು ಭೂಮಿ ಕಳೆದುಕೊಂಡವರ ಪರ ಹೋರಾಟ ಮಾಡಿ ಬಡವರ ಭೂಮಿಯನ್ನು ಉಳಿಸಿದೆ. ಇಂದು ದಲಿತರ ಹಲವಾರು ಸಮಸ್ಯೆಗಳಿಗಾಗಿ ದಲಿತ ಸಂಘರ್ಷ ಸಮಿತಿ ಅನಿವಾರ್ಯವಾಗಿದೆ ಎಂದು ತಿಳಿಸಿದರು.

ಪದಾಧಿಕಾರಿಗಳ ನೇಮಕ: ಇದೇ ವೇಳೆ ದಸಂಸ ತಾಲೂಕು ಸಂಚಾಲಕರಾಗಿ ಬಿ.ಎಂ.ಶಿವಶಂಕರ್ ದೇವಲಾಪುರ, ಸಂಘಟನಾ ಸಂಚಾಲಕರಾಗಿ ವಲ್ಲಹಳ್ಳಿ ಕಾಳಸ್ವಾಮಿ, ಉಯ್ಯಂಬಳ್ಳಿ ಕಲ್ಲೇಶ್, ದೇವಲಾಪುರ ರಾಮಲಿಂಗಪ್ಪ, ಕುಂದೂರು ಮಹದೇವಮೂರ್ತಿ, ಕಂದಲಿಕೆ ಹೋಬಳಿ ಸಂಚಾಲಕರಾಗಿ ಬಾಡಗ ಶಾಂತರಾಜು, ದೇವಲಾಪುರ ಲೋಕೇಶ್, ಸಾಗರೆ ವೆಂಕಟಚಲುವರಾಜು, ಬೆದ್ದಲಪುರ ಚಿಕ್ಕಯ್ಯ, ಸರಗೂರು ಹೋಬಳಿ ಸಂಚಾಲಕರಾಗಿ ಚಂಗೌಡನಹಳ್ಳಿ ಕಾಂತರಾಜು, ಶಾಂತಿಪುರ ಕೃಷ್ಣ, ಸರಗೂರು ಹುಚ್ಚಯ್ಯ ರಂಗಸ್ವಾಮಿ, ಹಾದನೂರು ಶಿವಮೂರ್ತಿ, ಮಸಹಳ್ಳಿ ಕಾಶಸ್ವಾಮಿ, ಹಿರಿಯ ಸಲಹೆಗಾರರಾಗಿ ಹುಣಸಹಳ್ಳಿ ಬಸವರಾಜು, ದಡದಹಳ್ಳಿ ವಣಕಾರಯ್ಯ, ಹೆಗ್ಗುಡಿಲು ಗೋವಿಂದರಾಜು, ವಲ್ಲಹಳ್ಳಿ ಚಿಕ್ಕಯ್ಯ, ಮುಳ್ಳೂರು ಚಿಕ್ಕಮಾದಯ್ಯ ಅವರನ್ನು ನೇಮಕ ಮಾಡಲಾಯಿತು.

ರಾಜ್ಯ ಸಮಿತಿ ಸಂಚಾಲಕರಾದ ಹೆಗ್ಗನೂರು ನಿಂಗರಾಜು, ಉಯ್ಯಂಬಳ್ಳಿ ಮತ್ತು ಹೊಮ್ಮರಗಳ್ಳಿ ಸಿದ್ದರಾಜು, ಹೊಳೆಹುಂಡಿ ದಾಸಯ್ಯ, ಶಿರಮಳ್ಳಿ ರಾಜಶೇಖರ್, ನಿಲವಾಗಿಲು ಸುರೇಶ್, ಗ್ರಾಮೀಣ ಮಹೇಶ್, ಸರಗೂರು ಜವರಯ್ಯ, ಗೋಪಾಲ್ ಉಪಸ್ಥಿತರಿದ್ದರು.

ಎಸಿಎಫ್ ಕಚೇರಿ ಎದುರು ರೈತರ ಪ್ರತಿಭಟನೆ



ಮಲ್ಕುಂಡಿ, ಅ.17–ಕಾಡುಪ್ರಾಣಿಗಳ ಹಾವಳಿ ತಪ್ಪಿಸಿ, ರೈತರ ಫಸಲನ್ನು ರಕ್ಷಿಸುವಂತೆ ಒತ್ತಾಯಿಸಿ ನಂಜನಗೂಡು ಹಾಗೂ ಸರಗೂರು ತಾಲೂಕಿನ ರೈತ ಸಂಘದ ಕಾರ್ಯಕರ್ತರು ಮಂಗಳವಾರ ಹೆಡಿಯಾಲ ಗ್ರಾಮದ ಎಸಿಎಫ್ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ನಂಜನಗೂಡು ತಾಲೂಕಿನ ಹೆಡಿಯಾಲ ವ್ಯಾಪ್ತಿಯ ಕಾಡಂಚಿನ ಗ್ರಾಮಗಳಲ್ಲಿ ಕಾಡಾನೆ, ಹುಲಿ, ಚಿರತೆ ಸೇರಿದಂತೆ ಕಾಡುಪ್ರಾಣಿಗಳ ಹಾವಳಿ ಹೆಚ್ಚಾಗಿದೆ. ಇದರಿಂದ ಈ ಭಾಗದ ರೈತರ ಬೆಳೆ ನಾಶವಾಗುತ್ತಿದೆ. ರೈತರು ಸಾಲ ಮಾಡಿ ಬೆಳೆದ ಫಸಲು ಕಾಡುಪ್ರಾಣಿಗಳ ಪಾಲಾಗುತ್ತಿದೆ. ಅರಣ್ಯ ಇಲಾಖೆಯ ಅಧಿಕಾರಿ ಹಾಗೂ ಸಿಬ್ಬಂದಿಗೆ ಗೊತ್ತಿದ್ದರು ಕಣ್ಮುಚ್ಚಿ ಕುಳಿತಿದ್ದಾರೆ ಎಂದು ಪ್ರತಿಭಟನಾಕಾರರು ದೂರಿದರು.

ಕಾಡುಪ್ರಾಣಿಗಳಿಂದ ನಾಶವಾದ ಫಸಲಿಗೆ ಸರ್ಕಾರ ನೀಡುವ ಪರಿಹಾರ ಭಿಕ್ಷೆಯ ರೂಪವಾಗಿದೆ. ಕಂದಾಯ ಇಲಾಖೆ ನೀಡಿರುವ ದರಖಾಸ್ತು ಭೂಮಿಯನ್ನು ನಮ್ಮದೆಂದು ಅರಣ್ಯ ಇಲಾಖೆಯವರು ರೈತರನ್ನು ಬಲವಂತವಾಗಿ ಒಕ್ಕಲೆಬ್ಬಿಸಿ ದೌರ್ಜನ್ಯ ನಡೆಸುತ್ತಿದ್ದಾರೆ. ರೈತರು ಯಾವುದೇ ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿಲ್ಲ. ಆದರೆ, ರೈತರಿಗೆ ಸುಮ್ಮನೆ ಬಲಾತ್ಕಾರ ಮಾಡಲಾಗುತ್ತಿದೆ ಎಂದು ಆರೋಪಿಸಿದರು.

ಈ ಭಾಗದಲ್ಲಿ ಹೆಚ್ಚು ಹುಲಿಗಳು ಮನುಷ್ಯರ ಮೇಲೆ ದಾಳಿ ಮಾಡುವುದರಿಂದ ರೈತರು ತಮ್ಮ ಜಮೀನುಗಳಿಗೆ ತೆರಳಲು ತೊಂದರೆಯಾಗಿದೆ. ಕಾಡುಪ್ರಾಣಿಗಳ ಹಾವಳಿಯನ್ನು ಸಂಪೂರ್ಣವಾಗಿ ನಿಯಂತ್ರಿಸಬೇಕು. ವನ್ಯಪ್ರಾಣಿಗಳಿಂದ ಮೃತಪಟ್ಟವರಿಗೆ 50 ಲಕ್ಷ ರೂ. ಪರಿಹಾರ ನೀಡಿ, ಕುಟುಂಬದವರಿಗೆ ಉದ್ಯೋಗ ಹಾಗೂ ಅವರ ಮಕ್ಕಳಿಗೆ ಪದವಿವರೆಗೆ ಉಚಿತ ಶಿಕ್ಷಣ ನೀಡಬೇಕು ಎಂದು ಒತ್ತಾಯಿಸಿದರು.

ಇದೇ ವೇಳೆ ಪ್ರತಿಭಟನಾ ಸ್ಥಳಕ್ಕೆ ಓಂಕಾರ್ ಅರಣ್ಯ ವಲಯದ ಸಿಎಫ್ ರಮೇಶ್ ಕುಮಾರ್, ಬಂಡಿಪುರ ವಲಯದ ಅರಣ್ಯಾಧಿಕಾರಿ ನಿತೀನ್ ಕುಮಾರ್ ಭೇಟಿ ನೀಡಿ, ಮುಂದಿನ ದಿನಗಳಲ್ಲಿ ಕಾಡಾನೆಗಳ ಹಾವಳಿ ತಪ್ಪಿಸಿ, ರೈತರ ಬೆಳೆಗಳನ್ನು ಸಂರಕ್ಷಿಸುವುದಾಗಿ ಭರವಸೆ ನೀಡಿದರು.

ಪ್ರತಿಭಟನೆಯಲ್ಲಿ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ, ಜಿಲ್ಲಾಧ್ಯಕ್ಷ ಹೊಸೂರು ಕುಮಾರ್, ಪ್ರಧಾನ ಕಾರ್ಯದರ್ಶಿ ಹೊಸಕೋಟೆ ಬಸವರಾಜ್, ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರಸನ್ನ ಎನ್.ಗೌಡ, ನಂಜನಗೂಡು ತಾಲೂಕು ಅಧ್ಯಕ್ಷ ಶಿರಮಳ್ಳಿ ಸಿದ್ದಪ್ಪ, ಸರಗೂರು ತಾಲೂಕು ಅಧ್ಯಕ್ಷ ಸಿಂಗೇಗೌಡ, ಪ್ರಧಾನ ಕಾರ್ಯದರ್ಶಿ ಹೆಜ್ಜಿಗೆ ಪ್ರಕಾಶ್, ಮಹಾಲಿಂಗು, ಮರಂಕಯ್ಯ, ಮಹೇಶ್, ಮಹದೇವನಾಯಕ, ಚಿಕ್ಕಬೋರೇಗೌಡ, ನೂರಾರು ರೈತರು ಭಾಗವಹಿಸಿದ್ದರು.

ಮಾನಸಿಕ ಅಸ್ವಸ್ಥರನ್ನು ಅಸ್ಪೃಶ್ಯರಂತೆ ನೋಡಬೇಡಿ



ಹುಣಸೂರು, ಅ.17–ಮಾನಸಿಕ ಅಸ್ವಸ್ಥರನ್ನು ಅಸ್ಪೃಶ್ಯರಂತೆ ನೋಡುವ ಮನೋಭಾವದಿಂದ ಎಲ್ಲರೂ ದೂರಾಗಬೇಕಿದೆ ಎಂದು ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶೆ ಜೈಬುನ್ನೀಸಾ ಅಭಿಪ್ರಾಯಪಟ್ಟರು.

ನಗರದ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜಿನಲ್ಲಿ ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ಆರೋಗ್ಯಾಧಿಕಾರಿ ಕಚೇರಿ ಮತ್ತು ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ವತಿಯಿಂದ ಆಯೋಜಿಸಿದ್ದ ವಿಶ್ವ ಮಾನಸಿಕ ಆರೋಗ್ಯ ಮತ್ತು ವಿಶ್ವ ರೇಬೀಸ್ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ವಿಶ್ವದಲ್ಲಿ ಶೇ.13ರಷ್ಟು ಮಾನಸಿಕ ಅಸ್ವಸ್ಥರಾಗಿದ್ದಾರೆಂದು ಸಮೀಕ್ಷೆ ತಿಳಿಸುತ್ತದೆ. ಆಧುನಿಕ ಜೀವನಶೈಲಿಯಿಂದ ಪ್ರತಿಯೊಬ್ಬರೂ ಮಾನಸಿಕ ಒತ್ತಡದಿಂದ ಜೀವನ ನಡೆಸುತ್ತಿದ್ದಾರೆ. ಮನುಷ್ಯನಲ್ಲಿ ಮಾನಸಿಕ ಒತ್ತಡದಿಂದ ಖಿನ್ನತೆ, ಅಸ್ವಸ್ಥತೆ ಮುಂತಾದ ಲಕ್ಷಣಗಳು ಕಾಣಬಹುದು. ಮಾನಸಿಕ ಅಸ್ವಸ್ಥರನ್ನು ಸಮಾಜ ಅಸ್ಪೃಶ್ಯರಂತೆ ನೋಡುತ್ತಿರುವುದು ಮತ್ತೊಂದು ದುರಂತದ ಸಂಗತಿಯಾಗಿದೆ ಎಂದರು.

ತಾಲೂಕು ಸಂಚಾರಿ ಗಿರಿಜನ ಆರೋಗ್ಯ ಘಟಕದ ವೈದ್ಯಾಧಿಕಾರಿ ಡಾ.ಸೌಮ್ಯಶ್ರೀ ರೇಬೀಸ್ ಕುರಿತು ಮಾಹಿತಿ ನೀಡಿದರು. ನ್ಯಾಯಾಧೀಶ ಬಿ.ವೈ.ಮನುಪಟೇಲ್, ವಕೀಲರ ಸಂಘದ ಅಧ್ಯಕ್ಷ ಯೋಗಣ್ಣೇಗೌಡ ಮಾತನಾಡಿದರು. ಉಪಾಧ್ಯಕ್ಷ ಬಿ.ಸಿ.ಸುಂದರೇಶ್, ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಟಿ.ಚಂದ್ರಶೇಖರ್, ಪ್ರಾಂಶುಪಾಲ ನಾಗರಾಜೇ ಅರಸ್, ಸಂಪನ್ಮೂಲ ವ್ಯಕ್ತಿ ಎಸ್.ವೆಂಕಟೇಶ್, ಗ್ರಾಮ ಆರೋಗ್ಯ ಕಾರ್ಯಕ್ರಮದ ಜಿಲ್ಲಾ ಸಂಯೋಜಕ ನಾಗೇಂದ್ರಸ್ವಾಮಿ, ತಾಲೂಕು ಸಂಯೋಜಕರಾದ ಪ್ರೇಮಾ, ವಸಂತಕುಮಾರ್, ತಾಲೂಕು ಆರೋಗ್ಯ ಶಿಕ್ಷಣಾಧಿಕಾರಿ ರಾಜೇಶ್ವರಿ, ಟಿಇಸಿ ನಗರ ಸಂಯೋಜಕಿ ಎಸ್.ಪುಷ್ಪವತಿ, ಕಾಲೇಜಿನ ಬೋಧಕರು, ವಿದ್ಯಾರ್ಥಿಗಳು ಹಾಜರಿದ್ದರು.

ಮುನಾವರ್ ಪಾಷಾ, ಕುಮಾರ್, ಮಹೇಶ್ ನೇಮಕ



ಕುಮಾರ್



ಮಹೇಶ್



ಮುನಾವರ್

ತಿ.ನರಸೀಪುರ, ಅ.17–ಮೈಸೂರು ದಸರಾ ಮಹೋತ್ಸವದ ಯುವ ದಸರಾ ಉಪಾಧ್ಯಕ್ಷರಾಗಿ ಬನ್ನೂರಿನ ಪುರಸಭಾ ಮಾಜಿ ಅಧ್ಯಕ್ಷ ಮುನಾವರ್ ಪಾಷಾ, ದೀಪಾಲಂಕಾರ ಉಪಸಮಿತಿಯ ಸದಸ್ಯರಾಗಿ ಎಚ್.ಬಿ.ಕುಮಾರ್ ಹಾಗೂ ಸ್ವಚ್ಛತೆ ಮತ್ತು ವ್ಯವಸ್ಥೆ ಉಪಸಮಿತಿಯ ಸದಸ್ಯರಾಗಿ ಗೋಪಾಲಪುರ ಗ್ರಾಮದ ಮಹೇಶ್ ಅವರನ್ನು ಅವರನ್ನು ದಸರಾ ವಿಶೇಷ ಅಧಿಕಾರಿ ಹಾಗೂ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ನೇಮಕಗೊಳಿಸಿದ್ದಾರೆ. ಅಧ್ಯಕ್ಷರಾಗಿ ನೇಮಕವಾಗಲು ಕಾರಣರಾದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್‌ಸಿ.ಮಹದೇವಪ್ಪ ಮತ್ತು ಕಾಂಗ್ರೆಸ್ ಯುವ ಮುಖಂಡ ಸುನಿಲ್ ಬೋಸ್ ಅವರಿಗೆ ಮುನಾವರ್ ಪಾಷಾ ಅಭಿನಂದನೆ ಸಲ್ಲಿಸಿದ್ದಾರೆ.

ಕಾಂಗ್ರೆಸ್ ಸರ್ಕಾರ ವಜಾಕ್ಕೆ ಒತ್ತಾಯಿಸಿ ಪ್ರತಿಭಟನೆ



ನಂಜನಗೂಡು, ಅ.17–ರಾಜ್ಯದ ಜನರ ಹಣವನ್ನು ಸುಲಿಗೆ ಮಾಡಿ, ಶೇ.60ರಷ್ಟು ಕಮಿಷನ್ ದಂಧೆಯಲ್ಲಿ ತೊಡಗಿಸಿರುವ ಕಾಂಗ್ರೆಸ್ ಸರ್ಕಾರವನ್ನು ವಜಾಗೊಳಿಸಬೇಕು ಎಂದು ಒತ್ತಾಯಿಸಿ ಬಿಜೆಪಿ ಕಾರ್ಯಕರ್ತರು ಮಂಗಳವಾರ ನಗರದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಹುಲ್ಲಹಳ್ಳಿ ವೃತ್ತದ ಬಳಿ ಜಮಾವಣೆಗೊಂಡ ಬಿಜೆಪಿ ಕಾರ್ಯಕರ್ತರು, ಕಾಂಗ್ರೆಸ್ ಸರ್ಕಾರದ ವಿರುದ್ಧ ಘೋಷಣೆ ಕೂಗಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿದರು.

ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರವಿದ್ದಾಗ ಕಾಂಗ್ರೆಸ್ ನಾಯಕರು ಯಾವುದೇ ಸಾಕ್ಷಿ ಆಧಾರವಿಲ್ಲದೆ ಶೇ.40ರಷ್ಟು ಕಮಿಷನ್ ಸರ್ಕಾರವೆಂದು ಕಳಂಕ ಕಟ್ಟಲು ಮುಂದಾಗಿದ್ದರು. ಆದರೆ, ಬೆಂಗಳೂರಿನಲ್ಲಿ ನಡೆದ ಐಟಿ ದಾಳಿಯಿಂದ ಕಾಂಗ್ರೆಸ್ ಸರ್ಕಾರ ಶೇ.60ರಷ್ಟು ಕಮಿಷನ್ ದಂಧೆಯಲ್ಲಿ ತೊಡಗಿರುವುದು ಪತ್ತೆಯಾಗಿದೆ ಎಂದು ದೂರಿದರು.

ಕಾಂಗ್ರೆಸ್ ನಾಯಕರು ಪಂಚರಾಜ್ಯ ಚುನಾವಣೆಗೆ ಕರ್ನಾಟಕ ರಾಜ್ಯವನ್ನು ಎಟಿಎಂನಂತೆ ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಅಲ್ಲದೆ ಕಾಂಗ್ರೆಸ್ ಸರ್ಕಾರ ವರ್ಗಾವಣೆ ದಂಧೆಯಲ್ಲಿ ತೊಡಗಿರುವುದು ಸಹ ಸತ್ಯವಾಗಿದೆ. ಜೊತೆಗೆ ನಂಜನಗೂಡಿನಲ್ಲೂ ಸಹ ವರ್ಗಾವಣೆ ದಂಧೆ ಹೆಚ್ಚಾಗಿದೆ. ಇಂತಹ ಭ್ರಷ್ಟಾಚಾರದ ಕೂಪದಲ್ಲಿ ತೊಡಗಿರುವ ಕಾಂಗ್ರೆಸ್ ಸರ್ಕಾರವನ್ನು ವಜಾಗೊಳಿಸಬೇಕು. ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ರವರು ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು ಎಂದು ಅವರು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಬಿಜೆಪಿ ತಾಲೂಕು ಅಧ್ಯಕ್ಷ ಹೊರಳವಾಡಿ ಪಿ.ಮಹೇಶ್, ಜಿಪಂ ಮಾಜಿ ಸದಸ್ಯ ಎಸ್.ಎಂ.ಕೆಂಪಣ್ಣ, ತಾಪಂ ಮಾಜಿ ಸದಸ್ಯರಾದ ಹೆಮ್ಮರಗಾಲ ಶಿವಣ್ಣ, ಮಲ್ಕುಂಡಿ ಬಸವರಾಜು, ನಗರಸಭಾ ಸದಸ್ಯ ಮಹದೇವಪ್ರಸಾದ್, ಮುಖಂಡರಾದ ಮಧುರಾಜ್, ಶಿವರುದ್ರ, ಮಲ್ಲಹಳ್ಳಿ ಮಹದೇವಸ್ವಾಮಿ, ಸಿದ್ದರಾಜು, ಶಿರಮಳ್ಳಿ ಮಹದೇವಸ್ವಾಮಿ, ಬದನವಾಳು ಮಂಜುನಾಥ್, ಬಸಪ್ಪ, ಮಲ್ಲಿಕಾರ್ಜುನ, ಉಮೇಶ್ ಮೋದಿ, ದೇವಪುತ್ರ, ವಿಷ್ಣು, ರಾಘವೇಂದ್ರ ಬಾಲಚಂದ್ರ, ಶಂಕರಪ್ಪ ಭಾಗವಹಿಸಿದ್ದರು.

ಈ ಬಾರಿ ಸುವರ್ಣ ಕನ್ನಡ ರಾಜ್ಯೋತ್ಸವ ಆಚರಣೆ



ತಿ.ನರಸೀಪುರ, ಅ.17–ಈ ಬಾರಿ ರಾಜ್ಯೋತ್ಸವವನ್ನು 'ಸುವರ್ಣ ಕನ್ನಡ ರಾಜ್ಯೋತ್ಸವ'ವಾಗಿ ಸಾಂಪ್ರದಾಯಿಕ ಮತ್ತು ಅದ್ಧೂರಿಯಾಗಿ ಆಚರಿಸಲು ನಿರ್ಧರಿಸಲಾಗಿದೆ ಎಂದು ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿಯ ಅಧ್ಯಕ್ಷ ಹಾಗೂ ತಹಶೀಲ್ದಾರ್ ಟಿ.ಪಿ.ಸುರೇಶ್ ಆಚಾರ್ ತಿಳಿಸಿದರು.

ಪಟ್ಟಣದ ಗುರುಭವನದಲ್ಲಿ 67ನೇ ಕನ್ನಡ ರಾಜ್ಯೋತ್ಸವ ಆಚರಣೆ ಕುರಿತು ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಸ್ವಾತಂತ್ರ್ಯ ನಂತರವೂ ಮೈಸೂರು ರಾಜ್ಯವಾಗಿದ್ದ ಕರುನಾಡನ್ನು 1973ರ ನವೆಂಬರ್ 1ರಂದು ಕರ್ನಾಟಕ ಎಂದು ನಾಮಕರಣ ಮಾಡಲಾಗಿತ್ತು. ಹಾಗಾಗಿ ಕರ್ನಾಟಕ ಎಂಬ ನಾಮಕರಣದ ಸುವರ್ಣ ವರ್ಷದ ಆಚರಣೆ ಹಿನ್ನೆಲೆಯಲ್ಲಿ ಈ ಬಾರಿ ಕನ್ನಡ ರಾಜ್ಯೋತ್ಸವವನ್ನು ಅದ್ಧೂರಿಯಾಗಿ ಆಚರಿಸಲಾಗುವುದು ಎಂದರು.

ನ.1ರಂದು ಮಿನಿವಿಧಾನಸೌಧ ಮುಂಭಾಗ ಧ್ವಜಾರೋಹಣ ನೆರವೇರಿಸಿ, ನಂತರ ವಾದ್ಯವೃಂದ ಮತ್ತು ವಿವಿಧ ಕಲಾತಂಡಗಳೊಂದಿಗೆ ಗುಂಜಾ ನರಸಿಂಹಸ್ವಾಮಿ ದೇವಾಲಯದಿಂದ ಮೆರವಣಿಗೆ ಹೊರಟು ವಿದ್ಯೋದಯ ಕಾಲೇಜು ಮೈದಾನದಲ್ಲಿ ನಾಡು–ನುಡಿ ಬಿಂಬಿಸುವ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಲಾಗುವುದು. ಕನ್ನಡ ಅಸ್ಮಿತೆ ಕುರಿತು ಪ್ರಬಂಧ ಸ್ಪರ್ಧೆ ಏರ್ಪಡಿಸಲಾಗಿದ್ದು, ಕಾರ್ಯಕ್ರಮದಲ್ಲಿ ಕನ್ನಡ ಭಾಷಾಭಿಮಾನವುಳ್ಳ ಕವಿಗಳು, ಚಿಂತಕರು, ತಾಲೂಕಿನ ಉತ್ತಮ ವಿದ್ಯಾರ್ಥಿಗಳನ್ನು ಸನ್ಮಾನಿಸಲು ತೀರ್ಮಾನಿಸಲಾಗಿದೆ ಎಂದು ಮಾಹಿತಿ ನೀಡಿದರು.

ಸಭೆಯಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕನ್ನಡ ಪುಟ್ಟಸ್ವಾಮಿ, ತಾಪಂ ಇಓ ಸಿ.ಕೃಷ್ಣ, ಕ್ಷೇತ್ರ ಶಿಕ್ಷಣಾಧಿಕಾರಿ ಜಿ.ಶೋಭಾ, ಸಿಪಿಐ ಧನಂಜಯ, ಸಮಾಜ ಕಲ್ಯಾಣಾಧಿಕಾರಿ ರಾಮೇಗೌಡ, ಬಿಸಿಯೂಟ ಸಹಾಯಕ ನಿರ್ದೇಶಕ ಮದ್ದಾನಪ್ಪ, ಪುರಸಭೆ ಮುಖ್ಯಾಧಿಕಾರಿ ವಸಂತಕುಮಾರಿ, ಲೋಕೋಪಯೋಗಿ ಇಲಾಖೆಯ ಎಇಇ ಸತೀಶ್ ಚಂದ್ರನ್, ಪರಿಶಿಷ್ಟ ಪಂಗಡದ ವಿಸ್ತರಣಾಧಿಕಾರಿ ಸುಧಾಮಣಿ, ಕೋಮಲಾ, ತಾಲೂಕು ಅಂಬೇಡ್ಕರ್ ಸಂಘದ ಅಧ್ಯಕ್ಷ ಕರೋಹಟ್ಟಿ ಮಹಾದೇವಯ್ಯ, ಜಿಪಂ ಮಾಜಿ ಸದಸ್ಯ ಜಯಪಾಲ್ ಭರಣಿ, ವಿಚಾರವಾದಿ ಕೆ.ಎನ್.ಪ್ರಭುಸ್ವಾಮಿ, ತಾಲೂಕು ಬಾಬು ಜಗಜೀವನ ರಾಂ ಸಂಘದ ಹುಣಸೂರು ಪುಟ್ಟಯ್ಯ ಇತರರು ಹಾಜರಿದ್ದರು.

ಬೆಟ್ಟದಪುರದಲ್ಲಿ ಬೆಳ್ಳಿ ಬಸಪ್ಪ ಉತ್ಸವ



ಬೆಟ್ಟದಪುರ, ಅ.17–ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದ ಶ್ರೀ ಭ್ರಮರಾಂಬ ಸಮೇತ ಸಿಡಿಲು ಮಲ್ಲಿಕಾರ್ಜುನ ಸ್ವಾಮಿಯ ಬೆಳ್ಳಿ ಬಸಪ್ಪ ಉತ್ಸವವನ್ನು ಗ್ರಾಮದಲ್ಲಿ ಮೆರವಣಿಗೆ ನಡೆಸಲಾಯಿತು.

ನವರಾತ್ರಿ ಅಂಗವಾಗಿ ಗ್ರಾಮದ ದೇವಾಲಯಗುಡಿ ಆವರಣದಿಂದ ಪ್ರಮುಖ ಬೀದಿಗಳಲ್ಲಿ ಉಪ್ಪಾರ ಸಮಾಜದವರು ಉತ್ಸವ ನಡೆಸಿದರು. ಜಯಚಾಮರಾಜೇಂದ್ರ ಒಡೆಯರ್ ಕಾಲದಲ್ಲಿ ಆರಂಭವಾದ ಮೈಸೂರು ದಸರಾ ವೈಭವದಂತೆ ಗ್ರಾಮದಲ್ಲೂ ಪ್ರತಿದಿನ ಮಹಿಳೆಯರು ಮನೆಯ ಮುಂಭಾಗ ರಂಗೋಲಿ ಬಿಡಿಸಿ, ವಿವಿಧ ಪೂಜೆ ನೆರವೇರಿಸುತ್ತಾರೆ. ನಂತರ ಮೆರವಣಿಗೆ ನಡೆಸಲಾಗುವುದು. ನವರಾತ್ರಿಯ 9ನೇ ದಿನ ಬೆಟ್ಟದ ತಪ್ಪಲಿನ ಬನ್ನಿಮಂಟಪಕ್ಕೆ ದೇವರನ್ನು ಕೊಂಡೊಯ್ದು ಬನ್ನಿ ಕಡಿಯುತ್ತಾರೆ. ದೀಪಾವಳಿ ಹಬ್ಬಕ್ಕೆ ಒಂದು ತಿಂಗಳು ಇರುವಂತೆಯೇ ಹಲವು ಬಗೆಯ ಉತ್ಸವ ಇಲ್ಲಿ ನಡೆಯುತ್ತವೆ.

ಸರ್ವಮಂಗಳಾ ನಿಧನ



ಭೇರ್ಯ, ಅ.17– ಭೇರ್ಯ ಗ್ರಾಮದ ಶ್ರೀಕಂಠಪ್ಪ ಅವರ ಪತ್ನಿ ಸರ್ವಮಂಗಳಾ (67) ಮಂಗಳವಾರ ನಿಧನರಾದರು. ಮೃತರಿಗೆ ಪತಿ ಶ್ರೀಕಂಠಪ್ಪ ಹಾಗೂ ಏರ್‌ಟಲ್ ಚಂದು ಸೇರಿದಂತೆ ಮೂವರು ಮಕ್ಕಳಿದ್ದಾರೆ. ಗ್ರಾಮದ ವೀರಶೈವರ ರುದ್ರಭೂಮಿಯಲ್ಲಿ ಬುಧವಾರ ಅಂತ್ಯಕ್ರಿಯೆ ನಡೆಯಲಿದೆ. ಮಾಜಿ ಸಚಿವ ಸಾ.ರಾ.ಮಹೇಶ್, ಪುರಸಭೆ ಸದಸ್ಯ ಕೆ.ಪಿ.ಪ್ರಭುಶಂಕರ್, ಜಿಪಂ ಮಾಜಿ ಉಪಾಧ್ಯಕ್ಷ ಎ.ಎಸ್.ಚೆನ್ನಬಸಪ್ಪ, ವೀರಶೈವ ಮುಖಂಡರಾದ ಜಯಕೀರ್ತಿ, ಬಿ.ಎಂ.ಮಹದೇವ್, ಡೇರಿ ಲೋಕೇಶ್ ಸಂತಾಪ ಸೂಚಿಸಿದ್ದಾರೆ.

ನನಗೂ ಡಿ.ಕೆ.ಶಿವಕುಮಾರ್‌ಗೆ ಸಮಾನ ಅಧಿಕಾರ ನೀಡಿ...!

- ಕಾಂಗ್ರೆಸ್ ವರಿಷ್ಠರಿಗೆ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಬಲವಾದ ಸಂದೇಶ
- ಮುಂಬೈ ಕರ್ನಾಟಕದ 20ಕ್ಕೂ ಅಧಿಕ ಶಾಸಕರೊಂದಿಗೆ ಪ್ರವಾಸದ 'ಲಾಬಿ' ಯತ್ನ

ಅಂತೂ ಕಾಂಗ್ರೆಸ್‌ನಲ್ಲಿ ಆರಂಭವಾಯ್ತು 'ಬಣ ರಾಜಕೀಯ'

ಬೆಂಗಳೂರು, ಅ.17(ಕೆಎಂಶಿ)– ರಾಜ್ಯ ಸರ್ಕಾರದಲ್ಲಿ ಡಿ.ಕೆ.ಶಿವಕುಮಾರ್‌ಗೆ ಸರಿಸಮನಾದ ಸ್ಥಾನಮಾನವನ್ನು ತಮಗೂ ನೀಡುವಂತೆ ಲೋಕೋಪಯೋಗಿ ಸಚಿವ ಸತೀಶ್ ಜಾರಕಿ ಹೊಳಿ ವರಿಷ್ಠರ ಮೇಲೆ ಒತ್ತಡ ತರಲು ಬಣ ರಾಜಕೀಯ ಆರಂಭಿಸಿದ್ದಾರೆ. ಪಕ್ಷದ ಮುಂಬೈ ಕರ್ನಾಟಕದ 20ಕ್ಕೂ ಹೆಚ್ಚು ಶಾಸಕರನ್ನು ಬೆನ್ನಿಗೆ ಕಟ್ಟಿಕೊಂಡು ಉಪ ಮುಖ್ಯಮಂತ್ರಿ ಹುದ್ದೆಗಾಗಿ ಲಾಬಿ ಆರಂಭಿಸಿದ್ದಾರೆ.



ಶಿವಕುಮಾರ್ ಅವರಿಗೆ ಸಿಕ್ಕಿರುವ ಸ್ಥಾನಮಾನಗಳನ್ನು ನೀವು ಪಡೆಯಲೇಬೇಕು ಎಂದು ಜಾರಕಿಹೊಳಿ ಕುಟುಂಬವು ಸತೀಶ್ ಅವರನ್ನು ಹುರಿದುಂಬಿಸಿದೆ. ಅವರ ಕುಟುಂಬದಲ್ಲೇ ಇಬ್ಬರು ವಿಧಾನಸಭಾ ಬಿಜೆಪಿ ಸದಸ್ಯರು, ಒಬ್ಬರು ವಿಧಾನ ಪರಿಷತ್ತಿನ ಪಕ್ಷೇತರ ಸದಸ್ಯರಿದ್ದು, ಇಡೀ ಬೆಳಗಾವಿ ಜಿಲ್ಲೆಯಲ್ಲಿ ಸಂಪೂರ್ಣ ಹಿಡಿತ ಸಾಧಿಸಿದ್ದಾರೆ. ಬಿ.ಎಸ್.ಯಡಿಯೂರಪ್ಪ ಅವರ ಸಂಪುಟದಲ್ಲಿ ಪ್ರಬಲ ಖಾತೆ ಹೊಂದಿದ್ದ ರಮೇಶ್ ಜಾರಕಿಹೊಳಿ ಅವರು ಅತ್ಯಾಚಾರ ಆರೋಪದ ಪ್ರಕರಣದಲ್ಲಿ ಅಧಿಕಾರ ಕಳೆದುಕೊಳ್ಳಬೇಕಾಯಿತು.

ಅಧಿಕಾರ ಕಳೆದುಕೊಳ್ಳಲು ಶಿವಕುಮಾರ್ ನಡೆಸಿದ ಹನಿ ಟ್ರ್ಯಾಪ್ ಕಾರಣವೆಂದು ಅವರ ಕುಟುಂಬ, ಈಗ ರಾಜಕೀಯವಾಗಿ ಹಾಲಿ ಉಪ ಮುಖ್ಯಮಂತ್ರಿ ವಿರುದ್ಧ ಸಿಡಿದೆದ್ದಿದೆ. ಶಿವಕುಮಾರ್ ಪ್ರಮುಖ ಹುದ್ದೆಗಳನ್ನು ಪಡೆದು ಸರ್ಕಾರದಲ್ಲಿ ಮುಖ್ಯಮಂತ್ರಿಗೆ ಸಮನಾಗಿ ಅಧಿಕಾರ ನಡೆಸುತ್ತಿರುವುದು ಈ ಕುಟುಂಬಕ್ಕೆ ಸಹಿಸಲಾಗುತ್ತಿಲ್ಲ. ಶಿವಕುಮಾರ್ ಅಷ್ಟೇ, ಪಕ್ಷ ಸಂಘಟನೆ ಹಾಗೂ ಒಂದು ಸಮುದಾಯದ ಬೆಂಬಲ ಇರುವಾಗ ಅವರಿಗೆ ನೀಡಿರುವ ಸಮಾನಾಂತರ ಹುದ್ದೆ ಪಡೆದುಕೊಳ್ಳಬೇಕು ಎಂದು ಸತೀಶ್ ಸಹೋದರರು ಪಟ್ಟು ಹಿಡಿದಿದ್ದಾರೆ. ಪಟ್ಟುಹಿಡಿದಿರುವುದರ ಜತೆಗೆ ಸತೀಶ್ ಜಾರಕಿಹೊಳಿಗೆ ಬೆಂಬಲವಾಗಿ ನಿಲ್ಲಲು ಮುಂಬೈ ಕರ್ನಾಟಕ ಭಾಗದ ಕಾಂಗ್ರೆಸ್ ಶಾಸಕರ ತಂಡವನ್ನೇ ಕಟ್ಟಿ, ವರಿಷ್ಠರ ಮೇಲೆ ಒತ್ತಡ ಹೇರಿದ್ದಾರೆ.

ಸಾರ್ವಜನಿಕವಾಗಿ ತಮ್ಮ ಹೋರಾಟ ಬಹಿರಂಗಗೊಳ್ಳಬೇಕು ಎಂದೇ ವಿಶ್ವವಿಖ್ಯಾತ ದಸರಾ ಮಹೋತ್ಸವ ನೋಡಲೆಂದೇ ಬೆಳಗಾವಿಯಿಂದ ಮೈಸೂರಿಗೆ ಸತೀಶ್ ನೇತೃತ್ವದಲ್ಲಿ ಶಾಸಕರ ತಂಡ ಪ್ರವಾಸ ಕೈಗೊಳ್ಳುವ ಯೋಜನೆ ರೂಪಿಸಿದ್ದರು.

ಈ ವಿಷಯ ತಿಳಿಯುತ್ತಿದ್ದಂತೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, ನಗರಕ್ಕೆ ವೇಣುಗೋಪಾಲ್ ಅವರನ್ನು ಕರೆಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜತೆಗೂಡಿ ಬಣ ರಾಜಕೀಯ ನಿಲ್ಲಿಸುವಲ್ಲಿ ತಾತ್ಕಾಲಿಕವಾಗಿ ಯಶಸ್ವಿಯಾಗಿದ್ದಾರೆ.

ಆದರೆ, ತಮ್ಮ ಪಟ್ಟನ್ನು ಜಾರಕಿಹೊಳಿ ಬಿಟ್ಟಿಲ್ಲ. ನಮಗೂ ಅಧಿಕಾರ ಕೊಡಿ. ನೀವು ಚುನಾವಣೆ ಸಂದರ್ಭದಲ್ಲಿ ಕಾರ್ಯಾಧ್ಯಕ್ಷ ಸ್ಥಾನ ನೀಡಿದ್ದರಿಂದ ಮುಂಬೈ ಕರ್ನಾಟಕದಲ್ಲಿ ಬಿಜೆಪಿ ಮಟ್ಟ ಹಾಕಿ ಕಾಂಗ್ರೆಸ್ ಹೆಚ್ಚು ಸ್ಥಾನ ಗೆಲ್ಲಲು ಸಾಧ್ಯವಾಯಿತು.

ತಮಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡಿದರೆ, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ವಾಲ್ಮೀಕಿ ಸಮುದಾಯ ಪಕ್ಷದ ಪರವಾಗಿ ಗಟ್ಟಿಯಾಗಿ ನಿಲ್ಲುತ್ತದೆ.

ನಮಗೆ ಮುಂಬೈ ಕರ್ನಾಟಕದಲ್ಲಿ ಹೆಚ್ಚು ಸ್ಥಾನ ಗೆಲ್ಲಬಹುದು ಎಂದು ಒತ್ತಾಯ ಮಾಡಿದ್ದಾರೆಯೇ ಹೊರತು, ಶಿವಕುಮಾರ್ ವಿರುದ್ಧ ಯಾವುದೇ ರೀತಿಯ ಗುರುತರ ಆರೋಪ ಹೊರಿಸುವ ಪ್ರಯತ್ನ ಮಾಡಿಲ್ಲ.

ಕಳೆದ ಕೆಲವು ದಿನಗಳ ಹಿಂದಷ್ಟೇ ಇದೇ ಸಮುದಾಯಕ್ಕೆ ಸೇರಿದ ಸಹಕಾರಿ ಸಚಿವ ಕೆ.ಎನ್.ರಾಜಣ್ಣ, ಸಂಪುಟದಲ್ಲಿ ಮೂರು ಉಪ ಮುಖ್ಯಮಂತ್ರಿ ಸ್ಥಾನ ಸೃಷ್ಟಿಸುವಂತೆ ವರಿಷ್ಠರಿಗೆ ಬಹಿರಂಗವಾಗಿ ಮನವಿ ಮಾಡಿದ್ದರು. ಇದರ ಬೆನ್ನಲ್ಲೇ ಜಾರಕಿಹೊಳಿ ಕುಟುಂಬ ಉಪ ಮುಖ್ಯಮಂತ್ರಿ ಹುದ್ದೆಗಾಗಿ ಬಣ ರಾಜಕೀಯ ಮುಂದಿಟ್ಟುಕೊಂಡು ಬಹಿರಂಗವಾಗಿ ಅಖಾಡಕ್ಕಿಳಿದಿದೆ.

ಇಂದು ಮೈಸೂರು ವಿವಿ 103ನೇ ಘಟಿಕೋತ್ಸವ


ಮೂವರು ಮಹನೀಯರಿಗೆ ಗೌರವ ಡಾಕ್ಟರೇಟ್; 32240 ಮಂದಿಗೆ ನಾನಾ ಪದವಿ ಪ್ರದಾನ



ಮೈಸೂರು,ಅ.17(ಪಿಎಂ)– ಮೈಸೂರು ವಿಶ್ವವಿದ್ಯಾನಿಲಯದ 103ನೇ ವಾರ್ಷಿಕ ಘಟಿಕೋತ್ಸವ (2022ನೇ ಸಾಲಿನ ಶೈಕ್ಷಣಿಕ ವರ್ಷ) ನಾಳೆ (ಬುಧವಾರ) ಬೆಳಗ್ಗೆ 10.30ಕ್ಕೆ ವಿಶ್ವವಿದ್ಯಾನಿಲಯದ ಕಾರ್ಯಸೌಧ ಕ್ರಾಫರ್ಡ್ ಭವನದಲ್ಲಿ ನಡೆಯಲಿದ್ದು, ರಾಜ್ಯದ ರಾಜ್ಯಪಾಲರೂ ಆದ ವಿವಿ ಕುಲಾಧಿಪತಿ ಥಾವರ್ ಚಂದ್ ಗೆಹ್ಲೋಟ್ ಅಧ್ಯಕ್ಷತೆ ವಹಿಸಲಿದ್ದಾರೆ. ರಕ್ಷಣಾ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆಯ (ಡಿಆರ್‌ಡಿಓ) ವಿಶ್ರಾಂತ ಮಹಾನಿರ್ದೇಶಕ ಪದ್ಮವಿಭೂಷಣ ಡಾ.ವಾಸುದೇವ ಕೆ.ಆತ್ರೆ ಘಟಿಕೋತ್ಸವ ಭಾಷಣ ಮಾಡಲಿದ್ದಾರೆ. ಉನ್ನತ ಶಿಕ್ಷಣ ಸಚಿವರೂ ಆದ ವಿವಿ ಸಮಕುಲಾಧಿಪತಿ ಡಾ.ಎಂ.ಸಿ.ಸುಧಾಕರ್ ಉಪಸ್ಥಿತರಿರುವರು.

ಇದೇ ವೇಳೆ ಪಿಹೆಚ್‌ಡಿ, ಸ್ನಾತಕ ಪದವಿ, ಸ್ನಾತಕೋತ್ತರ ಪದವಿ ಸೇರಿದಂತೆ ಒಟ್ಟು 32,240 ಅಭ್ಯರ್ಥಿಗಳಿಗೆ ನಾನಾ ಪದವಿಗಳನ್ನು ಪ್ರದಾನ ಮಾಡಲಾಗುತ್ತಿದೆ. ಜೊತೆಗೆ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ವಿಶ್ರಾಂತ ವೈದ್ಯಕೀಯ ಪ್ರಾಧ್ಯಾಪಕ ನಾಡೋಜ ಡಾ.ಪಿ.ಎಸ್.ಶಂಕರ್, 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ (ಕೆಬಿಜಿ) ಹಾಗೂ ಮಾಜಿ ಅಂತಾರಾಷ್ಟ್ರೀಯ ಕ್ರಿಕೆಟ್ ಆಟಗಾರರೂ ಆದ ಐಸಿಸಿ ಕ್ರಿಕೆಟ್ ಪಂದ್ಯಗಳ ತೀರ್ಪುಗಾರ ಜಾವಗಲ್ ಶ್ರೀನಾಥ್ ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಗುತ್ತಿದೆ. ಮಧ್ಯಾಹ್ನ 2.30ಕ್ಕೆ ಪದವಿ ಪ್ರದಾನ ಸಮಾರಂಭ ಮುಂದುವರೆಯಲಿದ್ದು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ವಿಶ್ರಾಂತ ವೈದ್ಯಕೀಯ ಪ್ರಾಧ್ಯಾಪಕ ನಾಡೋಜ ಡಾ.ಪಿ.ಎಸ್.ಶಂಕರ್, 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ (ಕೆಬಿಜಿ) ಅತಿಥಿಯಾಗಿ ಭಾಗವಹಿಸಲಿದ್ದಾರೆ. ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅಧ್ಯಕ್ಷತೆ ವಹಿಸಲಿದ್ದಾರೆ.

ಗಸ್ತು ದೋಣಿ, ಎಲ್‌ಸಿಎ ಖರೀದಿಗೆ ಮುಂದಾದ ಭಾರತೀಯ ಸೇನೆ



ನವದೆಹಲಿ, ಅ.17– ಗಡಿಗಳಲ್ಲಿನ ಗಸ್ತು ಹಾಗೂ ದಾಳಿಯ ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕಾಗಿ 6 ಗಸ್ತು ದೋಣಿಗಳು, 8 'ಲ್ಯಾಂಡಿಂಗ್ ಕ್ರಾಫ್ಟ್ ಅಸಾಲ್ಟ್' (ಎಲ್‌ಸಿಎ) ಹಾಗೂ 118 ಕಣ್ಗಾವಲು ವ್ಯವಸ್ಥೆಗಳ ಖರೀದಿಗೆ ಭಾರತೀಯ ಸೇನೆ ಮುಂದಾಗಿದೆ ಎಂದು ಅಧಿಕಾರಿಗಳು ಮಂಗಳವಾರ ಹೇಳಿದ್ದಾರೆ.

ಪೂರ್ವ ಲಡಾಕ್ ಬಳಿಯ ಪಾಂಗಾಂಗ್ ಸರೋವರವೂ ಸೇರಿದಂತೆ ಗಡಿಗಳಲ್ಲಿರುವ ಜಲಕಾಯಗಳಲ್ಲಿ ಕಣ್ಗಾವಲನ್ನು ಹೆಚ್ಚಿಸುವುದಕ್ಕಾಗಿ ಗಸ್ತು ನಾವೆಗಳನ್ನು ಖರೀದಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಯುದ್ಧ ನೌಕೆಗಳಲ್ಲಿರುವ ಯೋಧರನ್ನು ಶತ್ರು ಸೈನಿಕರು ಇರುವ ತೀರಗಳತ್ತ ಕ್ಷಿಪ್ರವಾಗಿ ಕರೆದೊಯ್ಯಲು ಬಳಸುವ ಬೋಟುಗಳನ್ನು ಲ್ಯಾಂಡಿಂಗ್ ಕ್ರಾಫ್ಟ್ ಅಸಾಲ್ಟ್ (ಎಲ್‌ಸಿಎ) ಎನ್ನಲಾಗುತ್ತದೆ. ಈ ದೋಣಿಗಳು ಹಾಗೂ ಎಲ್‌ಸಿಎಗಳು ಹಾಗೂ ಕಣ್ಗಾವಲು ವ್ಯವಸ್ಥೆಗಳ ಖರೀದಿ ಪ್ರಕ್ರಿಯೆಗೆ ಸಂಬಂಧಿಸಿ ಸೇನೆಯು ಟೆಂಡರ್ ಕರೆಯಲಾಗಿದ್ದು, ಟೆಂಡರ್ ಅರ್ಜಿಗಳನ್ನು ಸಲ್ಲಿಸಲು ನವೆಂಬರ್ 28 ಕೊನೆಯ ದಿನವಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಲಡಾಕ್ ಬಳಿಯ ವಾಸ್ತವ ನಿಯಂತ್ರಣ ರೇಖೆಯಲ್ಲಿ (ಎಲ್‌ಎಸಿ) ಕಳೆದ ಮೂರು ವರ್ಷಗಳಿಂದ ಚೀನಾ ಹಾಗೂ ಭಾರತದ ಸೈನಿಕರ ಸಂಘರ್ಷ ನಡೆಯುತ್ತಿದೆ. ಉಭಯ ದೇಶಗಳ ನಡುವೆ ರಾಜತಾಂತ್ರಿಕ ಮತ್ತು ಮಿಲಿಟರಿ ಕಮಾಂಡರುಗಳ ಮಟ್ಟದಲ್ಲಿ ಹಲವು ಸುತ್ತಿನ ಮಾತುಕತೆಗಳು ನಡೆದಿದ್ದು, ಯೋಧರನ್ನು ವಾಪಸು ಕರೆಸಿಕೊಳ್ಳುವ ಪ್ರಕ್ರಿಯೆಯೂ ಪೂರ್ಣಗೊಂಡಿದೆ. ಈಗ, ಗಡಿಗಳಲ್ಲಿ ಕಣ್ಗಾವಲನ್ನು ಸಾಮರ್ಥ್ಯ ಹೆಚ್ಚಿಸುವುದಕ್ಕಾಗಿ ಈ ಪರಿಕರಗಳನ್ನು ಖರೀದಿಸಲು ಸೇನೆ ಮುಂದಾಗಿರುವುದು ಗಮನಾರ್ಹ.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಲೇಟ್ ನಂಜಪ್ಪ ಬಿನ್ ಗಿಡ್ಡಮ್ಮ ರವರ ವಾರಸ್ಸುದಾರರಾದ [1] ಶ್ರೀಮತಿ. ದೇವಮ್ಮ, [2] ಶ್ರೀ. ಕೆ.ಎನ್. ನಾಗಪ್ಪ [3] ಶ್ರೀ. ಸಿಂಗಪ್ಪ [4] ಶ್ರೀ. ಕೊಂಗಳಪ್ಪ ಮತ್ತು [5] ರುದ್ರಪ್ಪ. ರವರು ಜಂಟಿಯಾಗಿ ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಬ್ಯಾಂಕ್ ಮತ್ತು ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 7 (ಏಳು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ: ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು, ಹಂಗಳ ಹೋಬಳಿ, ಕೆಬ್ಬೆಪುರ ಗ್ರಾಮದ ಸರ್ವೆ ನಂ. 71/1 ರಲ್ಲಿರುವ ಖುಷ್ಕಿ ಜಮೀನಿನ ವಿಸ್ತೀರ್ಣ 29 ಗುಂಟೆ, ಖಾತೆ ಸಂಖ್ಯೆ 121, ಆಕಾರ ರೂ. 0.64 ಪೈಸೆ ಉಳ್ಳ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂ. 70 ಮತ್ತು 71/2 ರ ಜಮೀನು, ಪಶ್ಚಿಮಕ್ಕೆ: ಸರ್ಕಾರಿ ರಸ್ತೆ, ಉತ್ತರಕ್ಕೆ ಸರ್ವೆ ನಂ. 71/4 ರ ಜಮೀನು ಮತ್ತು ದಕ್ಷಿಣಕ್ಕೆ ಸರ್ವೆ ನಂ. 71/2 ರ ಜಮೀನು.

ಎಸ್‌ಎಲ್‌ಡಿ ಲಾ ಫರ್ಮ್
ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು
ನಂ.1458/ಎ, ನಾರಾಯಣಶಾಸ್ತ್ರಿ ರಸ್ತೆ, ಸಪ್ನ ಬುಕ್ ಹೌಸ್ ಸಮೀಪ, ಮೈಸೂರು.
ಮೊ:9844640641
Email: sldlawfirm2021@gmail.com

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರಿಂದ ನೇರ ಸ್ಪಷ್ಟತೆ ಪಡೆದುಕೊಳ್ಳಬೇಕು. ಜಾಹೀರಾತುಗಳಿಗೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

CHANGE OF NAME

I Anna Mary C W/o Mariraj M R/a No. 6312, 2nd Phase, 4th Stage, Behind Deputy Drug Control Office, Vijayanagar, Mysuru-570032, Have changed my name to Anne Mariraj C on my own free will in front of Notary K.V. Vasu on 17-10-2023 at Mysuru

Sd/- Anne Mariraj C

GANGOTHRI PUBLIC SCHOOL

#121/C, Church Road Cross, Bogadi Main Road, Mysore

WALK IN INTERVIEW

POST	QUALIFICATION
MATHS TEACHER	M.Sc/B.Sc B.Ed
SCIENCE TEACHER	M.Sc/B.Sc (CBZ) B.Ed
ENGLISH /SOCIAL	M.A/B.A B.Ed
ASSISTANTS	ANY DEGREE

Fluency in English is must for all posts

Interested candidates can walk in along with their resume and one set of documents, on 19/10/2023 Thursday between 10.a.m to 12.p.m

Ph: 8217556402/8073109625

ಉಪ ನಿರ್ದೇಶಕರು(ಆಡಳಿತ) ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ, ಸಮಗ್ರ ಶಿಕ್ಷಣ ಕರ್ನಾಟಕ, ಹಾಸನ ಜಿಲ್ಲೆ, ಹಾಸನ

ಸಂಖ್ಯೆ:ಸಶಿಕ/ಲೆ.ಪ.1./ಕೆ.ಜಿ.ಬಿ.ವಿ/ಟೆಂ./19/2023–24 ದಿನಾಂಕ:12.10.2023

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

2023–24ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಕೆ.ಜಿ.ಬಿ.ವಿ. ವಸತಿ ಶಾಲೆ/ ವಸತಿ ನಿಲಯ ಹಳ್ಳಿಮೈಸೂರು ಇಲ್ಲಿಗೆ ಹೊರಗುತ್ತಿಗೆ ಆಧಾರದಲ್ಲಿ ಸಿಬ್ಬಂದಿ ಸೇವೆ ಸರಬರಾಜು ಮಾಡುವ ಸಂಬಂಧ ಅರ್ಹ ಸಂಸ್ಥೆ/ಏಜೆನ್ಸಿಯವರಿಂದ 2ನೇ ಬಾರಿಗೆ ಅಲ್ಪಾವಧಿ ಇ–ಟೆಂಡರ್ ಆಹ್ವಾನಿಸಿದ್ದು, https://kppp.karanataka.gov.in ಮೂಲಕ ದ್ವಿಲಕೋಟೆ ಪದ್ಧತಿಯಲ್ಲಿ ಎರಡು ಪ್ರತ್ಯೇಕ ಟೆಂಡರ್ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವ ದಿನಾಂಕಗಳು ಈ ಕೆಳಕಂಡಂತಿರುತ್ತವೆ. ಟೆಂಡರ್‌ನ ಅಂದಾಜು ಮೊತ್ತ ರೂ.16,00,000/– ಪ್ರಾರಂಭದ ದಿನಾಂಕ:13.10.2023, ಕೊನೆಯ ದಿನಾಂಕ:27.10.2023 ರ 5.00.PM. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 30.10.2023 ರ 11.00.AM, ಆರ್ಥಿಕ ಬಿಡ್ ತೆರೆಯುವ ದಿನಾಂಕ:02.11.2023 ರ 11.00. AM. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ:08172–295020 ನ್ನು ಸಂಪರ್ಕಿಸಲು ಕೋರಿದೆ.

ಸಹಿ/– ಉಪನಿರ್ದೇಶಕರು, ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ ಕರ್ನಾಟಕ, ಹಾಸನ.

ವಾಸಾಸಂಇ/ಹಿಸವಿ/ಹಾಸನ/426/ಕೆಎಸ್‌ಎಂಸಿಎ/433/2023–24

ಕರ್ನಾಟಕ ಸರ್ಕಾರ

(ಸಹಕಾರ ಇಲಾಖೆ) ಸಹಕಾರ ಸಂಘಗಳ ಜಂಟಿ ನಿಬಂಧಕರು(ನಿ.441)
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯ,
ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.
"ಸೌಹಾರ್ದ ಸಹಕಾರಸೌಧ" #68, 1ನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560055

ವಾದಿ: ಸಪ್ತರ್ಷಿ ಸೌಹಾರ್ದ ಪತ್ತಿನ ಸಹಕಾರಿ ನಿ., #48, 2ನೇ ಮುಖ್ಯರಸ್ತೆ, 18ನೇ ಅಡ್ಡರಸ್ತೆ ಜಯನಗರ, ಮೈಸೂರು–570014

ಪ್ರತಿವಾದಿಗಳು: ವ್ಯಾಜ್ಯ ಸಂಖ್ಯೆ: ಡಿ.ಆರ್.ಡಿ/ಕ.ರಾ.ಸೌ.ಸಂ.ಸ.ನಿ/436/2023–24

1. ಶ್ರೀ ರಮೇಶ್ ಕೆ.ವಿ. ಬಿನ್ ವೆಂಕಟೇಶ್ ಕೆ
92/ಎ, 'ಲಕ್ಷ್ಮಿ ನಿವಾಸ, 13ನೇ ಅಡ್ಡರಸ್ತೆ, ಎ–ಬ್ಲಾಕ್, ಜೆ.ಪಿ.ನಗರ, ಮೈಸೂರು–570008
2. ಶ್ರೀ ಫಣೀಶ್ ಎನ್.ವಿ. ಬಿನ್ ವೆಂಕಟೇಶ್ ಕೆ
92/ಎ, 'ಲಕ್ಷ್ಮಿ ನಿವಾಸ, 13ನೇ ಅಡ್ಡರಸ್ತೆ, ಎ–ಬ್ಲಾಕ್, ಜೆ.ಪಿ.ನಗರ, ಮೈಸೂರು–570008

ಪ್ರತಿವಾದಿಗಳಿಗೆ ಪತ್ರಿಕಾ ಪ್ರಕಟಣೆ ಮೂಲಕ ನೋಟೀಸ್

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನಿಮಗೆ ತಿಳಿಯಪಡಿಸುವುದೇನೆಂದರೆ ಈ ಮೇಲ್ಕಂಡ ದಾವಾ ಸಂಖ್ಯೆ:ಡಿ.ಆರ್.ಡಿ/ಕ.ರಾ.ಸೌ.ಸಂ.ಸ.ನಿ.,/436/ 2023–24ರಂತೆ ಸಹಕಾರ ಸಂಘಗಳ ಜಂಟಿ ನಿಬಂಧಕರು (ನಿ.441), ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯದಲ್ಲಿ ಪರಿಹಾರಕೆರಾರು ಅಡಿಯಲ್ಲಿ ದಾವೆಯನ್ನು ಸಲ್ಲಿಸಿದ್ದು, ನೀವು ಪ್ರತಿವಾದಿಯಾಗಿರುತ್ತೀರಿ, ಆದುದರಿಂದ ಈ ಮೂಲಕ ನಿಮಗೆ ತಿಳಿಯಪಡಿಸುವುದೇನೆಂದರೆ ಈ ಮೇಲ್ಕಂಡ ನ್ಯಾಯಾಲಯದ ಮುಂದೆ ದಿನಾಂಕ: 10–11–2023 ರಂದು ಬೆಳಗ್ಗೆ 11.30 ಗಂಟೆಗೆ ಸರಿಯಾಗಿ ತಾವಾಗಲಿ, ತಮ್ಮಿಂದ ನೇಮಕಗೊಂಡ ವಕೀಲರ ಮುಖಾಂತರವಾಗಲಿ ಹಾಜರಾಗಲು ಈ ಮೂಲಕ ತಿಳಿಯಪಡಿಸುತ್ತೇವೆ. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥಪಡಿಸಲಾಗುವುದು.

ಸದರಿ ಪ್ರಕಟಣೆಯನ್ನು ದಿನಾಂಕ:06.10.2023ರಂದು ನ್ಯಾಯಾಲಯದ ಸಹಿ ಮತ್ತು ಮೊಹರಿನೊಂದಿಗೆ ನೀಡಲಾಗಿದೆ.

ಸಹಿ/–ಸಹಕಾರ ಸಂಘಗಳ ಜಂಟಿ ನಿಬಂಧಕರು (ನಿ.441)
ದಾವಾ ಪಂಚಾಯ್ತಿ ನ್ಯಾಯಾಲಯ ಕ.ರಾ.ಸೌ.ಸಂ.ಸ.ನಿ., ಬೆಂಗಳೂರು